ಹಸ್ತಪ್ರತಿಶಾಸ್ತ್ರ



ಬಿ.ಎಸ್. ಸಣ್ಣಯ್ಯ

ಬಾಹುಬಲಿ ಪ್ರಾಕೃತ ವಿದ್ಯಾಪೀಠ (ರಿ.)
ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆ
ಶ್ರೀಧವಳತೀರ್ಥಂ, ಶ್ರವಣಬೆಳಗೊಳ-೫೭೩ ೧೩೫

ಹಸ್ತಪ್ರತಿಶಾಸ್ತ್ರ

ಬಿ.ಎಸ್. ಸಣ್ಣಯ್ಯ

ಬಾಹುಬಲಿ ಪ್ರಾಕೃತ ವಿದ್ಯಾಪೀಠ (ರಿ)
ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆ
ಶ್ರೀ ಧವಳತೀರ್ಥಂ, ಶ್ರವಣಬೆಳಗೊಳ, ೫೭೩೧೩೫

HASTHAPRATI SHASTRA : *By B.S. Sannaiah M.A., B. Lib.sc. Dip-in - Archives, 33/1, 8th Cross, Vinayaka Nagar, Mysore - 570012, Published by -* **BAHUBALI PRAKRUTHA VIDYAPEETHA** *National Institute of Prakrit Studies and Research, Sri Dhavalathirtham, Sravanabelagola.*

Pages : 108+viii

ಪುಟಗಳು : ೧೦೮+೮

ಮೊದಲ ಮುದ್ರಣ : ೧೯೯೨

ಎರಡನೆಯ ಪರಿಷ್ಕೃತ ಮುದ್ರಣ : ೨೦೦೯

ಬೆಲೆ : ಐವತ್ತು ರೂಪಾಯಿಗಳು
Price : Rs. 50/-

ಮುದ್ರಕರು :
ಶ್ರೀ ರಾಜೇಂದ್ರ ಪ್ರಿಂಟರ್ಸ್ & ಪಬ್ಲಿಷರ್ಸ್
೧೨/೧, ಈವನಿಂಗ್ ಬಜಾರ್ ಹಿಂಭಾಗ
ಶಿವರಾಂಪೇಟೆ, ಮೈಸೂರು - ೫೭೦೦೦೧ ದೂರವಾಣಿ : ೨೪೭೬೬೦೧೯

ಶುಭಾಶೀರ್ವಾದ

ಪ್ರಾಚೀನಕಾಲದಲ್ಲಿ ಮುನಿಶ್ರೇಷ್ಠರಿಂದ, ತತ್ತ್ವವೇತ್ತರಿಂದ, ಪ್ರತಿಭಾಸಂಪನ್ನ ವಿಗಳಿಂದ ರಚಿತವಾದ ಅಪೂರ್ವ ಸಾಹಿತ್ಯವು ಶಿಲೆ ಓಲೆ ಕಡತ ಕಾಗದ ಮೊದಲಾದ ಕೃತಿಲಭ್ಯ ವಸ್ತುಗಳ ಮೇಲೆ ರಚಿತವಾಗಿರುವುದು ಸರ್ವರಿಗೂ ತಿಳಿದ ವಿಷಯವೇ ಗಿದೆ. ಇಂತಹ ಅಮೂಲ್ಯ ಸಾಹಿತ್ಯದ ಹಲವಾರು ಕೃತಿಗಳು ಇಂದಿಗೂ ಸ್ತಪ್ರತಿಗಳಲ್ಲಿಯೇ ಅಡಗಿದ್ದು, ಅವುಗಳ ಪರಿಷ್ಕರಣೆ ಪ್ರಕಟಣೆಯಾಗಿ ಜನಸಾಮಾನ್ಯರ ತ್ತಾಗಬೇಕಾದುದು ಅನಿವಾರ್ಯವೂ ತುರ್ತುಕಾರ್ಯವೂ ಆಗಿದೆ. ಇದನ್ನು ಕೇವಲ ಲವೇ ವಿದ್ವಾಂಸರು ಮಾಡುತ್ತಿರುವುದರಿಂದ ಈ ಎಲ್ಲ ಸಾಹಿತ್ಯ ಪ್ರಕಟಣೆಗೆ ಬಹುಕಾಲ ೇಕಾಗುತ್ತದೆ. ಅದಕ್ಕಾಗಿ ಹೆಚ್ಚು ಹೆಚ್ಚು ಸಂಶೋಧಕರು ಈ ಕ್ಷೇತ್ರದಲ್ಲಿ ತಮ್ಮನ್ನು ಡಗಿಸಿಕೊಳ್ಳಬೇಕಾಗಿದೆ.

ಈ ದಿಸೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೂ ಕೂಡ ಕಾರ್ಯಪ್ರವೃತ್ತವಾಗಿರುವುದು ಂತಸದ ವಿಷಯವಾಗಿದೆ. ಅವರ ಈ ಪ್ರಯತ್ನಕ್ಕೆ ಪೂರಕವಾಗಿ ಹಸ್ತಪ್ರತಿಗಳಲ್ಲಿ ರೂಪು ಡೆದಿರುವ ಲಿಪಿಜ್ಞಾನ, ಭಾಷಾಸ್ವರೂಪ, ಪಾಠಪರಿಷ್ಕರಣೆ ಮೊದಲಾದ ವಿಷಯಗಳಲ್ಲಿ ಳುವಳಿಕೆಯನ್ನು ಪಡೆಯುವುದು ಅನಿವಾರ್ಯವೂ ಅಗತ್ಯವೂ ಆಗಿದೆ. ಅದಕ್ಕಾಗಿ ಈ ಲಸದಲ್ಲಿ ನಿರತವಾಗಿರುವ ವ್ಯಕ್ತಿಗಳಿಗೆ ಅವಶ್ಯಕವಾಗಿ ಬೇಕಾದ ಸೂಕ್ತ ನಿರ್ದೇಶನ ೀಡುವ ಗ್ರಂಥಗಳ ರಚನೆಯೂ ಆಗಬೇಕಾಗಿದೆ. ಅಂತಹ ಒಂದು ಪ್ರಯತ್ನದ ಫಲವಾಗಿ ಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆಯ ಹಸ್ತಪ್ರತಿ ವಿಭಾಗದ ುಖ್ಯಸ್ಥರಾಗಿ ಕೆಲಸ ಮಾಡಿ ಅನುಭವ ಪಡೆದಿರುವ ಶ್ರೀಯುತ ಬಿ.ಎಸ್. ಸಣ್ಣಯ್ಯ ವರಿಂದ ರಚಿತವಾಗಿರುವ 'ಹಸ್ತಪ್ರತಿ ಶಾಸ್ತ್ರ' ಗ್ರಂಥಸಂಪಾದನಾಕ್ಷೇತ್ರಕ್ಕೆ ಒಂದು ಉತ್ತಮ ಡುಗೆ ಎಂದು ಭಾವಿಸಿದ್ದೇವೆ. ಇದಕ್ಕಾಗಿ ಅವರನ್ನು ನಮ್ಮ ಶುಭ ಆಶೀರ್ವಾದದ ೂಲಕ ಹರಸುತ್ತೇವೆ.

ಜಗದ್ಗುರು ಕರ್ಮಯೋಗಿ

ನಾಂಕ : ೩೦.೪.೨೦೦೯ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ

ಶ್ರೀಕ್ಷೇತ್ರ, ಶ್ರವಣಬೆಳಗೊಳ.

ಮುನ್ನುಡಿ

ಈ 'ಹಸ್ತಪ್ರತಿ ಶಾಸ್ತ್ರ' ಗ್ರಂಥ ಹೊರಬರಲು ಪ್ರೇರಣೆ ನೀಡಿದವರೆಂದರೆ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ ಅವರು. ಸಂಸ್ಥೆಯಿಂದ ೨೦೦೮ರಲ್ಲಿ ಹಸ್ತಪ್ರತಿಗಳ ಸಂರಕ್ಷಣೆ ಅಭಿಯಾನ ನಡೆಸುತ್ತಿರುವ ಸಂದರ್ಭದಲ್ಲಿ ಸಂಶೋಧಕರಿಗೆ ಸಹಾಯಕವಾಗುವಂತಹ ಹಸ್ತಪ್ರತಿಗಳ ಬಗೆಗಿನ ಗ್ರಂಥವೊಂದನ್ನು ರಚಿಸಬೇಕೆಂದು ನನಗೆ ಆದೇಶ ನೀಡಿದರು. ಆ ಆದೇಶದಂತೆ ಒಂದು ಕಿರುಕೃತಿಯನ್ನು ಸಿದ್ಧಗೊಳಿಸಬೇಕೆಂದು ಹೊರಟವನು ಇದು ಹಸ್ತಪ್ರತಿಗಳ ಸಂಗ್ರಹ ಸ್ವರೂಪ ಇತ್ಯಾದಿ ಎಲ್ಲ ವಿಷಯಗಳನ್ನೂ ಒಳಗೊಂಡಿರಬೇಕೆಂದು ನಿಶ್ಚಯಿಸಿದೆನು. ಆದುದರಿಂದ ಈ ಬಗೆಗೆ ಈ ಮೊದಲೇ ಬಿ.ಎಂ.ಶ್ರೀ. ಪ್ರತಿಷ್ಠಾನದಿಂದ ಪ್ರಕಾಶಿತವಾಗಿದ್ದ 'ಹಸ್ತಪ್ರತಿ ಶಾಸ್ತ್ರ ಪರಿಚಯ' ಎಂಬ ನನ್ನ ಮೊದಲಿನ ಗ್ರಂಥವನ್ನೇ ಕೆಲವು ಹೊಸ ವಿಷಯಗಳನ್ನು ಅಳವಡಿಸಿ ಸಿದ್ಧಗೊಳಿಸಿದೆನು. ಇದು ಬಾಹುಬಲಿ ಪ್ರಾಕೃತ ವಿದ್ಯಾಪೀಠದಿಂದ ಹೊರಬರುತ್ತಿರುವುದು ಸಂತಸದ ವಿಷಯವಾಗಿದೆ. ಗ್ರಂಥವು ಪ್ರಾಚೀನ ಗ್ರಂಥಗಳ ಸಂಶೋಧನೆಯಲ್ಲಿ ತೊಡಗಿರುವ ಆಸಕ್ತ ವಿದ್ವಾಂಸರಿಗೆ ಒಂದು ಕೈಪಿಡಿಯಾಗಿ ರೂಪುಗೊಂಡಿದೆ ಎಂದು ಭಾವಿಸಿದ್ದೇನೆ.

ಹಸ್ತಪ್ರತಿಗಳ ಸ್ವರೂಪವು ಓದುಗರ ತಿಳುವಳಿಕೆಗೆ ಸುಲಭವಾಗಿ ದೊರೆಯಲೆಂಬ ಉದ್ದೇಶದಿಂದ ಕೆಲವು ಓಲೆ ಮತ್ತು ಕಾಗದದ ಹಸ್ತಪ್ರತಿಗಳ ಒಂದೊಂದು ಪತ್ರದ ಚಿತ್ರಗಳನ್ನು ಪ್ರಾತಿನಿಧಿಕವಾಗಿ ನೀಡಲಾಗಿದೆ.

ಗ್ರಂಥವನ್ನು ಆದಷ್ಟು ಬೇಗ ಅಚ್ಚುಕಟ್ಟಾಗಿ ಅಚ್ಚುಮಾಡಿದ ಮಿತ್ರರಾದ ಶ್ರೀ ಡಿ.ಎನ್. ಲೋಕಪ್ಪ ಮತ್ತು ಸಿಬ್ಬಂದಿವರ್ಗದವರಿಗೆ ನನ್ನ ಕೃತಜ್ಞತೆಗಳು. ಹಾಗೆಯೇ ಇದಕ್ಕೆ ಪ್ರೇರಣೆ ನೀಡಿದ, ನನ್ನನ್ನು ಸದಾ ಆಶೀರ್ವದಿಸುತ್ತಿರುವ ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ ಅವರಿಗೆ ನನ್ನ ಪ್ರಣಾಮಗಳು.

೨೦.೪.೨೦೦೮ ಬಿ.ಎಸ್. ಸಣ್ಣಯ್ಯ

ಪರಿವಿಡಿ

ಹಸ್ತಪ್ರತಿಶಾಸ್ತ್ರ

ಹಸ್ತಪ್ರತಿಶಾಸ್ತ್ರ

ಮಾನವನ ಬುದ್ಧಿಯ ಬೆಳವಣಿಗೆಯನ್ನು ಮೂರು ಮುಖ್ಯ ಹಂತಗಳನ್ನಾಗಿ ವಾಗಿಸಬಹುದು. ಅವಾವುವೆಂದರೆ ಮಾತನಾಡುವಿಕೆ, ರೇಖಾಚಿತ್ರಗಳನ್ನು ಬರೆಯುವಿಕೆ ತ್ತು ಬಣ್ಣದ ಚಿತ್ರಗಳನ್ನು ಬಿಡಿಸುವಿಕೆ. ಮಾತನಾಡಲು ಕಲಿತನಂತರ ಚಿತ್ರೀಕರಣ ್ರರಂಭವಾಯಿತೊ, ಮಾತನಾಡಲು ಬಾರದಿದ್ದಾಗ ತಮ್ಮ ಅಭಿವ್ಯಕ್ತಿಯನ್ನು ಇತ್ತಬ್ಬರಿಗೆ ವಿಶದಪಡಿಸಲು ರೇಖಾಚಿತ್ರಗಳನ್ನು ಬರೆದು ತೋರುವುದರ ಮೂಲಕ ರಂಭವಾಯಿತೊ ಎಂಬುದು ಇಲ್ಲಿ ಪ್ರಕೃತವಲ್ಲ. ಮಾನವನು ಕಲಿತ ಮಾತನ್ನು, ಹೊಳೆದ ವವನ್ನು, ಆದ ಅನುಭವವನ್ನು ಬರೆದಿಡುವಲ್ಲಿ, ತಮ್ಮ ಅಭಿಪ್ರಾಯಗಳನ್ನು ಯ್ದಿಡುವಲ್ಲಿ ಅಥವಾ ವಿನಿಮಯ ಮಾಡಿಕೊಳ್ಳುವಲ್ಲಿ, ಒಂದು ವಿಷಯವನ್ನು ಹಲವು ರ ಓದಿ ತಿಳಿಯುವಲ್ಲಿ ಬರವಣಿಗೆಯ ಸಾಧನ ಬಂದು ಸೇರಿತು. ರಾಜ ಮಹಾರಾಜರುಗಳು ವು ಮಾಡಿದ ಕಾಯಿದೆ ಕಟ್ಟಳೆಗಳನ್ನು ದಾನಧರ್ಮಾದಿಗಳನ್ನು ಶಾಶ್ವತವಾಗಿರಿಸುವಲ್ಲಿ ರವಣಿಗೆಯ ಅವಶ್ಯಕತೆಯುಂಟಾಯಿತು. ಈ ಎಲ್ಲ ಪ್ರಯತ್ನದ ಫಲವಾಗಿ ವಿವಿಧ ಪದ ವಸ್ತುಗಳಲ್ಲಿ ಬರವಣಿಗೆ ರೂಪುಗೊಂಡಿತು. ಹೀಗೆ ಯಾವುದೇ ವಸ್ತುವಿನ ಮೇಲೆ ಯಿಂದ ಬರೆದ ಕೃತಿಗೆ ಅಥವಾ ಕೃತಿಯ ಭಾಗಕ್ಕೆ 'ಹಸ್ತಪ್ರತಿ' ಎನ್ನಬಹುದು. ಈ ಸ್ತಪ್ರತಿಗಳ ಹುಟ್ಟು, ಬೆಳವಣಿಗೆ, ಸ್ವರೂಪ, ಮಹತ್ವ, ಸಂಗ್ರಹ, ಸಂರಕ್ಷಣೆ, ಸಂಪಾದನೆ, ಕಟಣೆ ಮೊದಲಾದೆಲ್ಲ ಅಂಶಗಳನ್ನೂ ಒಳಗೊಂಡಿರುವುದೇ 'ಹಸ್ತಪ್ರತಿ ಸ್ತ್ರ'ವಾಗುತ್ತದೆ.

"ಹಸ್ತಪ್ರತಿ ಶಾಸ್ತ್ರ (Manuscriptology) ಎಂಬ ಪಾರಿಭಾಷಿಕ ಶಬ್ದ ಈವರೆಗೆ ಶೇಷವಾಗಿ ಬಳಕೆಯಲ್ಲಿದ್ದುದು ನನ್ನ ಗಮನಕ್ಕೆ ಬಂದಿಲ್ಲ. ವ್ಯಾಪಕಾರ್ಥದ ಪದ ದು. ಹಸ್ತಪ್ರತಿಗಳ ಸಂಗ್ರಹಕಾರ್ಯದಿಂದ ಅದು ಮೊದಲಾಗುತ್ತದೆ. ಸಂಗ್ರಹಿಸಿದ ಸ್ತಪ್ರತಿಗಳನ್ನು ಜೋಪಾನ ಮಾಡುವುದು, ಸಂಗ್ರಹಕಾರ್ಯ ಒಂದು ಹಂತವನ್ನು ಮುಟ್ಟಿದ ೇಲೆ ಹಸ್ತಪ್ರತಿಗಳ ಸೂಚಿಯನ್ನು ತಯಾರಿಸುವುದು, ಇವೂ ಹಸ್ತಪ್ರತಿ ಶಾಸ್ತ್ರದ ಅಂಗವೇ.

ಹಸ್ತಪ್ರತಿರೂಪದ ಕೃತಿಯನ್ನು ಪರಿಷ್ಕರಿಸಿ ಕವಿಪಾಠಕ್ಕೆ ಸಮೀಪತಮವಾದ ಪಾಠವನ್ನು ಸಕಲ ವಿದ್ವತ್ ಪರಿಕರಗಳೊಂದಿಗೆ ಪ್ರಕಟಿಸುವುದರಲ್ಲಿ ಈ ಶಾಸ್ತ್ರ ತನ್ನ ಕಡೆಯ ಹಂತವನ್ನು ಮುಟ್ಟುತ್ತದೆ, ಎಂದು ನಾನು ತಿಳಿದಿದ್ದೇನೆ. ಗ್ರಂಥಸಂಪಾದನಾ ಶಾಸ್ತ್ರ (Textual criticism) ಹಸ್ತಪ್ರತಿ ಶಾಸ್ತ್ರದಲ್ಲಿಯೇ ಸಮಾವೇಶಗೊಳ್ಳುತ್ತದೆ ಎಂದು ನನ್ನ ಭಾವನೆ. ಒಂದು ಪೂರ್ವಕಾಂಡ, ಇನ್ನೊಂದು ಉತ್ತರಕಾಂಡ"[1] ಎಂದು ಎಂ.ವಿ. ಸೀತಾರಾಮಯ್ಯನವರು ಹೇಳಿರುವ ಮಾತು ಮನನೀಯವಾದುದು.

ಇಲ್ಲಿ ಹೇಳಿರುವ ಹಸ್ತಪ್ರತಿಶಾಸ್ತ್ರದ ಬಗೆಗೆ ಡಿ.ಎಲ್. ನರಸಿಂಹಾಚಾರ್, ಎಂ.ಎಂ. ಕಲಬುರ್ಗಿ, ಸೀತಾರಾಮ ಜಾಗೀರದಾರ್ ಅವರು ತಮ್ಮ ಗ್ರಂಥಗಳಲ್ಲಿ ಕೆಲವು ಮಹತ್ವದ ವಿಷಯಗಳನ್ನು ಮುಂದಿಟ್ಟು ಚರ್ಚಿಸಿದ್ದಾರೆ. ಮತ್ತೆ ಕೆಲವು ಲೇಖನಗಳು ಅಲ್ಲಿ ಇಲ್ಲಿ ಪ್ರಕಟಗೊಂಡಿವೆ. ನಾನು ಇಲ್ಲಿ ಕೆಲವು ಅಂಶಗಳನ್ನು ನಿರೂಪಿಸಲು ಪ್ರಯತ್ನಿಸುತ್ತನೆ.

ಬರವಣಿಗೆಗೆ ಈಗಿನಂತೆ ಕಾಗದ ಲೇಖನಿಗಳು ದೊರೆಯದಿದ್ದಾಗ ತಮ್ಮ ಕೈಗೆ ಸಿಕ್ಕಿದ ಕೆಲವು ಪದಾರ್ಥಗಳನ್ನು ಬರೆಯುವ ಸಾಧನಗಳನ್ನಾಗಿ ಜನರು ಬಳಸಿಕೊಂಡರು. ಅವುಗಳಲ್ಲಿ ಮುಖ್ಯವಾದುವೆಂದರೆ ಕಲ್ಲು, ಲೋಹ, ಚರ್ಮ, ಮರ, ಮರದ ಎಲೆಗಳು, ಸಸ್ಯಪದಾರ್ಥಗಳು. ಜನರು ತಮ್ಮ ಬುದ್ಧಿಸಾಮರ್ಥ್ಯಕ್ಕನುಗುಣವಾಗಿ ಅವುಗಳನ್ನು ವಿವಿಧ ರೀತಿಯಲ್ಲಿ ಹದಗೊಳಿಸಿ ಬರೆಯಲು ಬಳಸಿಕೊಂಡರು. ಅವುಗಳಲ್ಲಿ ಈಜಿಪ್ಟ್‌ದೇಶದ ನದಿಪ್ರದೇಶದಲ್ಲಿ ಬೆಳೆಯುತ್ತಿದ್ದ ಪಪೈರಸ್ (Papyrus) ಎಂಬ ಜೊಂಡುಜಾತಿಯ ಸಸ್ಯದಿಂದ ತಯಾರಿಸಿದ ಹಾಳೆಗಳನ್ನು ಯೂರೋಪುದೇಶಗಳಲ್ಲಿ ಹೆಚ್ಚಾಗಿ ಉಪಯೋಗಿಸಿದರು. ಹೀಗೆ ವಿದೇಶಗಳಲ್ಲಿ ಯಾವ ಯಾವ ವಸ್ತುವನ್ನೋ ಬರವಣಿಗೆಗೆ ಬಳಸಿರಬಹುದು. ಭಾರತದಲ್ಲಿ ಉಪಯೋಗಿಸಿರುವ ವಸ್ತುಗಳಲ್ಲಿ ತಾಡಪತ್ರ ಅಥವಾ ತಾಳೆಗರಿ, ಭೂರ್ಜಪತ್ರ ಮತ್ತು ಕಾಗದಗಳು ಹೆಚ್ಚು ವ್ಯಾಪಾಕವಾಗಿದ್ದು ಕೆಲವು ಬರವಣಿಗೆಗಳು ಮಾತ್ರ ಶಿಲೆ, ಲೋಹ, ಚರ್ಮ, ಮಣ್ಣಿನ ಬಿಲ್ಲೆ, ಸ್ಫಟಿಕ, ಮರದ ಹಲಗೆಗಳಲ್ಲಿ ದೊರೆಯುತ್ತವೆ. ಉತ್ತರ ಭಾರತದಲ್ಲಿ ತಾಡಪತ್ರ, ಭೂರ್ಜಪತ್ರಗಳು ಉಪಯೋಗವಾಗಿದ್ದರೆ, ದಕ್ಷಿಣದಲ್ಲಿ ಓಲೆ ಅಥವಾ ತಾಳೆಗರಿಗಳು ಬಹು ಪ್ರಸಿದ್ಧಿಯನ್ನು ಪಡೆದಿವೆ. ಭಾರತದಲ್ಲಿ ೧೫ನೇ ಶತಮಾದ ಹೊತ್ತಿಗೇ ಕಾಗದ ಬಳಕೆಗೆ ಬಂದಿರುವುದು

---

1. ಹಸ್ತಪ್ರತಿ ಶಾಸ್ತ್ರ, ಬಿ.ಎಂ.ಶ್ರೀ., ಪ್ರತಿಷ್ಠಾನ, ಬೆಂಗಳೂರು ೧೯೮೩, ಪು. ೪

ತುಬಂದರೂ ಇದು ಸಾಮಾನ್ಯಜನತೆಯ ಕೈಗೆ ಸುಲಭವಾಗಿ ದೊರೆಯದೆ ೇದುದರಿಂದ ೧೯ನೇಯ ಶತಮಾನದ ಮಧ್ಯಭಾಗದವರೆಗೂ ಓಲೆಗಳಲ್ಲಿ ಪ್ರತಿ ಡಿರುವುದನ್ನು ಕಾಣಬಹುದು. ಕ್ರಮೇಣವಾಗಿ ಮೇಣಗಪ್ಪಟ ಅಥವಾ ಕಡತ ರಿಕಾಗದ ಮತ್ತು ಕಾಗದಗಳನ್ನು ಹಸ್ತಪ್ರತಿಯ ನಕಲಿಗೆ ಉಪಯೋಗಿಸಿರುವುದುಂಟು. ಗೆ ದೊರೆಯುವ ಬರವಣಿಗೆಯ ವಿವಿಧ ವಸ್ತುಗಳ ಸ್ಥೂಲ ಪರಿಚಯವನ್ನು ಇಲ್ಲಿ ಡಿಕೊಳ್ಳಬಹುದು.

ಲೇಖನ ವಸ್ತುಗಳು

ಶಿಲೆ : ಇದು ದೀರ್ಘಕಾಲ ಬಾಳಿಕೆಬರುವಂತಹದೂ ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸಬಹುದಾದಂತಹುದೂ ಆಗಿದೆ. ಇದನ್ನು ಸಾಮಾನ್ಯವಾಗಿ ಶಾಸನಗಳನ್ನೂ ನಿರೂಪಗಳನ್ನೂ ಕೆತ್ತಿಸಲು ಉಪಯೋಗಿಸಲಾಗಿದೆ. ಕ್ವಚಿತ್ತಾಗಿ ಕೆಲವು ಸಾಹಿತ್ಯ ಕೃತಿಗಳೂ ಕೃತಿಭಾಗಗಳೂ ಇದರಲ್ಲಿ ಉತ್ಕೀರ್ಣಗೊಂಡಿರುವುದನ್ನು ಕಾಣಬಹುದು. "ಒಂದು ಪಂಕ್ತಿಯಿಂದ ನೂರಾರು ಪಂಕ್ತಿಗಳಷ್ಟು ಉದ್ದವಾದ ಶಾಸನಗಳಿವೆ. ಅಜಮೀರದಲ್ಲಿ ದೊರೆತ ಎರಡು ಶಿಲಾಪಟ್ಟಗಳ ಮೇಲೆ ಎರಡು ಸಂಸ್ಕೃತ ನಾಟಕಗಳು ಉತ್ಕೀರ್ಣವಾಗಿವೆ. ಹೀಗೆಯೇ ಇನ್ನೊಂದು ನಾಟಕವನ್ನು ಕಡೆದಿರುವ ಶಿಲಾಪಟ್ಟ ಧಾರ್‌ನಗರದಲ್ಲಿ ದೊರೆತಿವೆ. ಪುದುಕೋಟೆಸೀಮೆಯಲ್ಲಿರುವ ಕುಡಿಮಿಯಾಮಲೈ ಎಂಬ ಬೆಟ್ಟದ ಮೇಲೆ ೭ನೇ ಶತಮಾನದ ತಮಿಳಾಕ್ಷರಗಳಲ್ಲಿ ಸಂಗೀತಶಾಸ್ತ್ರದ ಸ್ವರಪ್ರಸ್ತಾರಗಳು ಲಿಖಿತವಾಗಿವೆ."[1] ಕನ್ನಡದಲ್ಲಿ ಮೊದಲ ಶಿಲಾಲೇಖ ಕಂಡುಬರುವ ಸು. ಕ್ರಿ. ಶ. ೪೫೦ರಲ್ಲಿ ಉತ್ಕೀರ್ಣಗೊಂಡ ಹಲ್ಮಿಡಿಶಾಸನ ನಮಗೆ ದೊರೆತಿರುವ ಮೊದಲ ಶಾಸನವಾದುದರಿಂದ ಇದಕ್ಕೆ ಅತ್ಯಂತ ಮಹತ್ವದ ಸ್ಥಾನವಿದೆ. ಸಾಹಿತ್ಯದ ದೃಷ್ಟಿಯಿಂದ ನೋಡುವುದಾದರೆ ಕ್ರಿ.ಶ. ೧೧೮೦ರಲ್ಲಿ ಉತ್ಕೀರ್ಣಗೊಂಡ ಶ್ರವಣಬೆಳಗೊಳದ ಶಾಸನವೊಂದರಲ್ಲಿ ಕಂಡುಬರುವ ಬೊಪ್ಪಣ ಪಂಡಿತನ 'ಗೊಮ್ಮಟಜಿನಸ್ತುತಿ' ಮುಖ್ಯವಾದುದಾಗಿದೆ.

ಲೋಹಪದಾರ್ಥಗಳಲ್ಲಿ ಕಬ್ಬಿಣ, ಚಿನ್ನ, ಬೆಳ್ಳಿ, ಹಿತ್ತಾಳೆ, ಕಂಚು, ತಾಮ್ರಗಳ ಮೇಲೆ ಬರೆದಿರುವ ಕೆಲವು ಲಿಖಿತಗಳು ಬಹು ಅಲ್ಪಪ್ರಮಾಣದಲ್ಲಿ ನಮಗೆ ದೊರೆಯುತ್ತವೆ.

ಕಬ್ಬಿಣ : ಇದು ತುಕ್ಕು ಹಿಡಿಯುವ ವಸ್ತುವಾದುದರಿಂದ ಸಾಧಾರಣವಾಗಿ ಯಾವ ಲಿಖಿತಗಳಿಗೂ ಉಪಯೋಗಿಸುತ್ತಿರಲಿಲ್ಲ. ಬರಹವುಳ್ಳ ಕಬ್ಬಿಣದ ಕಂಬವೊಂದು ದೆಹಲಿಯ

---

1. ಡಿ.ಎಲ್. ನರಸಿಂಹಾಚಾರ್, ಕನ್ನಡ ಗ್ರಂಥ ಸಂಪಾದನೆ; ಪು. ೪೦

ಹರಾಲಿ ಪ್ರದೇಶದಲ್ಲಿದೆ. ಇದರ ಮೇಲೆ ಕ್ರಿ.ಶ. ೪೧೫ರಲ್ಲಿ ಉತ್ಕೀರ್ಣಗೊಂಡಿರುವ ಮ್ಮಡಿ ಚಂದ್ರಗುಪ್ತನ ಶಾಸನವಿದೆ. ಹೀಗೆಯೇ ಧಾರ್ ಎಂಬಲ್ಲಿ ಕಬ್ಬಿಣದ ಕಂಬದ ಲೆ ಪಾರಸೀಲೇಖನವಿದೆ. ಅದರ ಸುತ್ತ ೧೫೯೧ - ೯೨ರ ಅಕ್ಬರನ ಕಾಲದ ಒಂದು ಹ ಇದೆಯಂತೆ. ಈ ಎರಡೂ ಕಂಬಗಳು ವಿಶೇಷರೀತಿಯಲ್ಲಿ ತಯಾರಿಸಿದ ಣವಾದುದರಿಂದ ಇಂದಿಗೂ ತುಕ್ಕುಹಿಡಿಯದಿವೆ.

ಚಿನ್ನ, ಬೆಳ್ಳಿ : ಈ ಲೋಹದ ತಗಡುಗಳನ್ನು ಬರವಣಿಗೆಗೆ ಉಪಯೋಗಿಸಿರುವುದು ಡುಬರುತ್ತದೆ. ಪಂಜಾಬಿನ ಸಿರ್‌ಸುಖ್ ಪ್ರದೇಶದ ಗುಂಗು ಎಂಬಲ್ಲಿರುವ ಬೌದ್ಧ ಪವೊಂದರಲ್ಲಿ ಚಿನ್ನದ ತಗಡಿನ ಮೇಲೆ ಬರೆದ ಲಿಪಿ ದೊರೆತಿದೆ. ಆಂಧ್ರಪ್ರದೇಶದ ಜಿಲ್ಲೆಯ ಭಟ್ಟಿಪ್ರೋಲು ಎಂಬಲ್ಲಿ ಬೆಳ್ಳಿಯ ತಗಡಿನ ಮೇಲೆ ಬರೆದ ಲಿಖಿತ ದೆ. ರಾವಲ್ಪಿಂಡಿ ಜಿಲ್ಲೆಯ ಮಾಣಿಕಿಯಾಲದ ಬೌದ್ಧಸ್ತೂಪವೊಂದರಲ್ಲಿ ಲಿಪಿಯನ್ನುಳ್ಳ ಯ ಬಟ್ಟೊಂದು ದೊರೆತಿದೆ. ಕ್ರಿ.ಶ. ೧೫೦೦ರಲ್ಲಿ ರಚಿತವಾದ 'ಜಯನೃಪ ಕಾವ್ಯ'ದಲ್ಲಿ ಳಪ ಬೆಳ್ಳಿಯ ಪಲಗೆಗೆ ಕತ್ತುರಿಯ ಮಿಸುಪ ರಜಮಂ ಪರಿಕಲಿಸುತ್ತ' (೧೨-೫೨) ದು ಬೆಳ್ಳಿಯ ಹಲಗೆಯ ಬಳಕೆಯನ್ನು ಸೂಚಿಸಲಾಗಿದೆ.

ಹಿತ್ತಾಳೆ : 'ಕ್ರಿ.ಪೂ. ೬ನೇಯ ವರ್ಷದ ಶಾಸನವಿರುವ ಬುದ್ಧನ ಅವಶೇಷವನ್ನಿಟ್ಟ ತ್ರೆಯೊಂದು ಆಫ್ಘನಿಸ್ಥಾನದ ವರ್ದಕ್ ಎಂಬಲ್ಲಿರುವ ಸ್ತೂಪವೊಂದರಲ್ಲಿ ಲಭಿಸಿದೆ. ಹಾಬಾದಿನ ಬಳಿಯಿರುವ ಕೋಸಂ ಎಂಬಲ್ಲಿ ಗುಪ್ತರಕಾಲದ ಮುದ್ರೆಯುಂಗುರ ರೆತಿದ್ದು ಅದರ ಹಿತ್ತಾಳೆಯ ವಿಗ್ರಹಗಳ ಮೇಲೆ ಬರವಣಿಗೆಯಿದೆ"[1] ಕರ್ನಾಟಕದಲ್ಲಿ ೀಕ ಜೈನತೀರ್ಥಂಕರರ ಹಿತ್ತಾಳೆಯ ಪ್ರತಿಮೆಗಳ ಪೀಠಗಳು ಮತ್ತು ಪ್ರಭಾವಳಿಗಳಲ್ಲಿ ಡಲಿಪಿಯ ಶಾಸನಗಳಿವೆ.

ಕಂಚು : 'ಇದರಲ್ಲಿ ಬ್ರಾಹ್ಮೀ, ಖರೋಷ್ಠಿ ಮತ್ತು ಗ್ರೀಕ್ ಲಿಪಿಗಳು ದೊರತಿವೆ. ಾವರಿನಲ್ಲಿ ದೊರೆತ ಒಂದು ಕಂಚಿನ ತಲೆಯ ಸುತ್ತ ಲಿಪಿಯಿದ್ದು ಇದನ್ನು ಇದುವರೆಗೆ ರಲಾಗಿಲ್ಲ. ತಾಮ್ರಪಟ್ಟಿಕೆಗಳನ್ನು ಪೋಣಿಸುವ ಉಂಗುರದ ಇಕ್ಕಡೆಗಳನ್ನು ಜೋಡಿಸಿ

1. ಅದೇ; ಪು. ೩೨

ಬೆಸೆದಿರುವ ಕಂಚಿನ ಹಲವು ರಾಜಲಾಂಛನಗಳ ಮುದ್ರೆಗಳ ಮೇಲೆ ಲಿಪಿ ಇರುವುದುಂಟು[1] ಎಂದು ಡಿ.ಎಲ್.ಎನ್. ಅವರು ತಿಳಿಸುತ್ತಾರೆ.

ತಾಮ್ರ : ಬುದ್ಧನಕಾಲದಿಂದಲೂ ದತ್ತವಾಗಿ ಬಂದ ಕೆಲವು ತಾಮ್ರಫಲಕಗಳ ಬಗ್ಗೆ ಕ್ರಿ.ಶ. ೪೦೦ರಲ್ಲಿ ಫಾಹಿಯಾನ್ ಎಂಬ ಚೀನಾದೇಶದ ಯಾತ್ರಿಕ ಪ್ರಸ್ತಾಪಿಸಿದ್ದಾನೆ. ಪಂಜಾಬಿನ ಭಾವಲ್ಪುರ ಪ್ರದೇಶದ ಶ್ರೀವಿಹಾರದಲ್ಲಿ ದೊರೆತ ತಾಮ್ರಪಟ್ಟಿಕೆ ಕ್ರಿ.ಪೂ. ೪೬ಕ್ಕೆ ಸೇರಿದ್ದು, ಅತಿ ಪ್ರಾಚೀನವಾದುದಾಗಿದೆ. ಕ್ರಿ.ಶ. ೧೨೭೨ರ ಪೈಠಣದ ತಾಮ್ರಶಾಸನಗಳಲ್ಲಿ ಮೂರು ತಗಡುಗಳಿವೆ. ಕನ್ನಡನಾಡಿನಲ್ಲಿ ಗಂಗ ಮತ್ತು ಕದಂಬರ ಅನೇಕ ತಾಮ್ರಶಾಸನಗಳು ದೊರೆತಿವೆ. ರಾಷ್ಟ್ರಕೂಟ ದೊರೆ ಗೋಯಿಂದ (೩ನೇ ಗೋವಿಂದ)ನ ಕ್ರಿ.ಶ. ೮೦೪ರ ತಾಮ್ರಶಾಸನ ಕನ್ನಡವನ್ನು ಬಳಸಿ ಬರೆಯಲಾಗಿರುವ ಪ್ರಾಚೀನತಮ ಶಾಸನಗಳ ಪೈಕಿ ಒಂದಾಗಿದೆ.[2] ಬಾದಾಮಿ ಚಾಳುಕ್ಯರಾಜನಾದ ಇಮ್ಮಡಿ ಕೀರ್ತಿವರ್ಮನ ಒಂದು ತಾಮ್ರಶಾಸನ ಕ್ರಿ.ಶ. ೭೨೭ರಲ್ಲಿ ಲಿಖಿತವಾಗಿದೆ. ಇದು ಭೀಮರಥೀನದಿಯ ಉತ್ತರ ತೀರಪ್ರದೇಶಕ್ಕೆ ಸೇರಿದ್ದು ಕೋಲಾರಜಿಲ್ಲೆಯ ವಕ್ಕಲೇರಿ ಎಂಬ ಹಳ್ಳಿಯಲ್ಲಿ ದೊರೆತಿದೆ. ಅಣ್ಣಮಾಚಾರ್ಯರ ಸಂಗೀತ ಕೃತಿಗಳು ತಾಮ್ರಪಟ್ಟಗಳ ಮೇಲೆ ಲಿಖಿತವಾಗಿದ್ದು ತಿರುಪತಿಯ ಶ್ರೀನಿವಾಸ ದೇವಾಲಾಯದಲ್ಲಿ ಲಭ್ಯವಾಗಿವೆಯೆಂದು ತಿಳಿದುಬರುತ್ತದೆ.

ಶಿಲೆ ಮತ್ತು ಲೋಹೇತರ ವಸ್ತುಗಳಲ್ಲಿ ಒಣಗಿಸಿದ ಅಥವಾ ಸುಟ್ಟ ಮಣ್ಣಿನ ಬಿಲ್ಲೆಗಳು, ಸ್ಫಟಿಕ, ಚರ್ಮ, ಮರದ ಹಲಗೆಗಳು, ಭೂರ್ಜಪತ್ರ, ತಾಳಪತ್ರ, ಕಡತ, ಕೋರಿಕಾಗದ, ಕಾಗದಗಳು ಬರವಣಿಗೆಗೆ ಉಪಯೋಗವಾಗಿರುವುದನ್ನು ಕಾಣಬಹುದು.

ಮಣ್ಣು : ಮಣ್ಣಿನ ಬಿಲ್ಲೆಗಳು ಅಥವಾ ಮಡಕೆಯ ಮೇಲೆ ಕೆಲವು ಲಿಖಿತಗಳಿವೆ. ಬೌದ್ಧಧರ್ಮದ ಒಂದು ಶ್ಲೋಕ ಒಂದು ಮಣ್ಣಿನ ಬಿಲ್ಲೆಯ ಮೇಲಿದೆ. ಸಂಯುಕ್ತ ಪ್ರದೇಶದಲ್ಲಿ ಲಿಪಿಗಳನ್ನುಳ್ಳ ಅನೇಕ ಇಟ್ಟಿಗೆಗಳಲ್ಲಿ ಒಂದರ ಮೇಲೆ ಕುಮಾರಗುಪ್ತನ ಸಣ್ಣ ಶಾಸನ ಲಿಖಿತವಾಗಿದೆ. ಗೋರಖಪುರ ಜಿಲ್ಲೆಯ ಗೋಪಾಲಪುರದಲ್ಲಿ ದೊರೆತ ಕೆಲವು ಇಟ್ಟಿಗೆಗಳ ಮೇಲೆ ಬೌದ್ಧಸೂತ್ರ ಗ್ರಂಥವನ್ನು ಬರೆದಿದೆ ಎಂದು ತಿಳಿದುಬರುತ್ತದೆ.

---

1. ಕ. ಗ್ರಂ. ಸಂ.; ೩೨-೩೩
2. ಕೊ. ವೈ. ರಮೇಶ : ಕರ್ನಾಟಕ ಶಾಸನಗಳ ಸಮೀಕ್ಷೆ ೧೯೭೧; ಪು. : ೪೧

ಂಚಿಯಲ್ಲಿ ದೊರೆತ ಒಂದು ಮಣ್ಣಿನ ಮುಚ್ಚಳದ ಮೇಲೆ ಲಿಪಿಯಿದೆ. ಗುಹಸೇನನ ಲ್ಭಿಕೆಯಲ್ಲಿ ಕ್ರಿ.ಶ. ೫೬೬-೬೭ರಲ್ಲಿ ಮಸಿಯಿಂದ ಬರೆದ ಮಡಕೆಯ ಒಂದು ಚೂರು ಭ್ಯವಾಗಿದೆ.

ಸ್ಫಟಿಕ : ಒಂದೇ ಒಂದು ಬರವಣಿಗೆ ಆಂಧ್ರದ ಕೃಷ್ಣ ಜಿಲ್ಲೆಯ ಭಟ್ಟಿಪ್ರೋಲು ಂಬ ಊರಿನಲ್ಲಿ ದೊರೆತಿರುವ ಸ್ಪಟಿಕದ ಮೇಲಿದೆ. ಇದರಲ್ಲಿ ಕೆಲವು ಪಿಲಿಗಳನ್ನು ರೆದಿದೆ.

ಚರ್ಮ : ಸುಬಂಧುವಿನ 'ವಾಸವದತ್ತಾ' ಗ್ರಂಥದಲ್ಲಿ ನಕ್ಷತ್ರಗಳನ್ನು ವರ್ಣಿಸುವಾಗ ಷೀ - ಅಜಿನಗಳನ್ನು ಹೆಸರಿಸಿದ್ದಾನೆ. ಇದರಿಂದ ಅಜಿನ ಅಥವಾ ಚರ್ಮ ಒಂದು ೇಖ್ಯವಸ್ತುವಾಗಿತ್ತೆಂದು ಹೇಳುತ್ತಾರೆ. ಭರತಖಂಡದಲ್ಲಿ ಚರ್ಮದ ಮೇಲೆ ಬರೆದಿರುವ ಯಾವ ಲಿಖಿತವೂ ದೊರೆಯದಿದ್ದರೂ ಭಾರತೀಯ ಲಿಪಿಯನ್ನುಳ್ಳ ಕೆಲವು ಚರ್ಮದ ಣುಕುಗಳು ಕಾಷ್‌ಗರ್‌ನಲ್ಲಿ ದೊರೆತಿವೆ. ಇವು ಈಗ ಪೀಟರ್ಸ್‌ಬರ್ಗ್‌ನಲ್ಲಿವೆಯೆಂದು . ಬೂಲರ್ ಹೇಳುತ್ತಾರೆ.[1]

ಮರ : ಮರದಿಂದ ತಯಾರಿಸಿದ ನುಣುಪಾದ ಹಲಗೆಗಳ ಮೇಲೆ ಕಪ್ಪು ಬಣ್ಣವನ್ನು ಳಿದು ಅದರ ಮೇಲೆ ಬಳಪದಿಂದ ಬರೆಯುತ್ತಿದ್ದರು. ವಿನಯಪಿಟಕ ಮತ್ತು ಜಾತಕಗಳಲ್ಲಿ ರದ ಹಲಗೆಗಳ ಪ್ರಸ್ತಾಪವಿದೆಯಂತೆ. 'ಹಲಗೆ ಬಳಪವ ಪಿಡಿಯದೊಂದಗ್ಗಳಿಕೆ' ಎಂದು ುಮಾರವ್ಯಾಸನು ಹೇಳಿರುವುದರಿಂದ ಬರವಣಿಗೆಗೆ ಹಲಗೆಯನ್ನು ುಪಯೋಗಿಸುತ್ತಿದ್ದರೆಂದು ಹೇಳಬಹುದು. ಓಲೆ ಮತ್ತು ಕಾಗದದ ಹಸ್ತಪ್ರತಿಗಳ ಕ್ಷಾಕವಚಗಳಿಗೆ ಮರದ ಹಲಗೆಗಳನ್ನು ಉಪಯೋಗಿಸಲಾಗಿದ್ದು ಅವುಗಳ ಮೇಲೆ ೇಖಾ ಅಥವಾ ಬಣ್ಣದ ಚಿತ್ರಗಳಿರುವುದನ್ನು ನೋಡಬಹುದು. "ಮರದ ಹಲಗೆಗಳ ುೇಲೆಯೇ ಬರೆದ ಯಾವ ಗ್ರಂಥವೂ ಸಿಕ್ಕಿಲ್ಲ; ಆದರೆ ಲಂಡನ್ನಿನ ಬಾಡ್ಲಿಯನ್ ಪುಸ್ತಕ ಂಡಾರದಲ್ಲಿ ಇಂಥ ಒಂದು ಹಸ್ತಪ್ರತಿಯಿದೆಯೆಂದೂ ಅದು ಅಸ್ಸಾಮ ಪ್ರದೇಶಕ್ಕೆ ೇರಿದ್ದೆಂದೂ ಡಾ. ವಿಂಟರ್ನಿಟ್ಸ್ ಅವರು ಹೇಳುತ್ತಾರಂತೆ."[2]

---

1. ಕ. ಗ್ರಂ, ಸಂ.; ಪು, ೭೪-೩೫
2. ಅದೇ ೩೫

ಭೂರ್ಜಪತ್ರ : ಭೂರ್ಜವೃಕ್ಷವು ಉತ್ತರ ಭಾರತದ ಕೆಲವು ಪ್ರದೇಶಗಳಲ್ಲಿಯೂ, ಹಿಮಾಲಯಪರ್ವತಶ್ರೇಣಿಯಲ್ಲಿಯೂ ವಿಪುಲವಾಗಿ ಬೆಳೆಯುತ್ತದೆ. ಇದರ ತೊಗಟೆಯಲ್ಲಿರುವ ತೆಳು ಹಾಳೆಯಂತಿರುವ ಪದರಗಳನ್ನು ಬಿಡಿಸಿ ಹದಮಾಡಿ ಬೇಕಾದ ಆಕಾರಕ್ಕೆ ಕತ್ತರಿಸಿ ಪ್ರತಿಮಾಡಲು ಉಪಯೋಗಿಸುತ್ತಿದ್ದರೆಂದು ತಿಳಿದುಬರುತ್ತದೆ. ಇದು ತೆಳುವಾಗಿರುವುದರಿಂದ ಯಾವುದೇ ವಸ್ತುವಿನಿಂದ ಕೆರೆಯುವುದು ಅಥವಾ ಕೊರೆಯುವಂತಿಲ್ಲ; ಲೇಖನಿಯಿಂದ ಮಸಿಯನ್ನುಪಯೋಗಿಸಿ ಬರೆದಿರುತ್ತಾರೆ. "ಇಂಥ ಹಸ್ತಪ್ರತಿಗಳು ಕಾಶ್ಮೀರ ದೇಶದಲ್ಲಿ ಅಧಿಕವಾಗಿ ದೊರೆಯುತ್ತವೆ. ಶಾರದಾ ಲಿಪಿಯಲ್ಲಿ ಭೂರ್ಜಪತ್ರದ ಮೇಲೆ ಬಖ್‌ಶಾಲಿ ಎಂಬಲ್ಲಿ ದೊರೆತ ಭೂರ್ಜಪತ್ರದ ಹಸ್ತಪ್ರತಿ ೭"x೪" ಅಂಗುಲಗಳ ಅಳತೆಯಿದೆ; ಇದು ೧೨ನೆಯ ಶತಮಾನದಲ್ಲಿ ಲಿಖಿತವಾದುದೆಂದು ಹೇಳುತ್ತಾರೆ. ಕಾಳಿದಾಸನ 'ವಿಕ್ರಮೋರ್ವಶೀಯ' ನಾಟಕದಲ್ಲಿ ಭೂರ್ಜಪತ್ರದ ಲಿಖಿತವೊಂದು ಗಾಳಿಗೆ ಹಾರಿಕೊಂಡು ಬಂದು ಬೀಳುತ್ತದೆ. ಬವರ್ ಹಸ್ತಪ್ರತಿಯು (Bower Mss) ಭೂರ್ಜಪತ್ರಗಳಲ್ಲಿ ಲಿಖಿತವಾದುದು; ಇದರಲ್ಲಿ ೫೬ ಹಾಳೆಗಳಿವೆ; ಇದರ ಲೇಖನ ಕಾಲ ಕ್ರಿ.ಶ. ೫ನೆಯ ಶತಮಾನವಿರಬಹುದು; ಇದರಲ್ಲಿ ವೈದ್ಯವೇ ಮುಂತಾದ ವಿಷಯಗಳನ್ನು ಹೇಳಿದೆ. ದಕ್ಷಿಣ ಭಾರತದಲ್ಲಿ ಭೂರ್ಜವೃಕ್ಷಗಳಿಲ್ಲದಿರುವುದರಿಂದ ಅವುಗಳ ಪತ್ರಗಳ ಮೇಲೆ ಬರೆಯುವ ಅವಕಾಶವೇ ಉಂಟಾಗಲಿಲ್ಲ. ಪುಣೆಯ ಭಂಡಾರ್ಕರ್ ಸಂಶೋಧನ ಸಂಸ್ಥೆಯ ಪುಸ್ತಕ ಭಂಡಾರದಲ್ಲಿ ಇರುವ ಕೆಲವು ಭೂರ್ಜಪತ್ರ ಹಸ್ತಪತ್ರಿಗಳು ಉತ್ತರ ದೇಶಗಳಿಂದ ಸಂಗೃಹೀತವಾದುವು."[1]

ಅಲೊಯಿ : 'ಭೂರ್ಜಪತ್ರದಂತೆಯೇ ಬರವಣಿಗೆಗೆ ಉಪಯೋಗಿಸಿರುವ ಅಲೊಯಿ (Aloe) ಮರದ, ಸ್ಥಳೀಯವಾಗಿ ಸಂಸಿ (Sanci) ಎಂದು ಕರೆಯುವ ಮರದ ಒಳಪದರವನ್ನು ಅಸ್ಸಾಮಿನ ಬ್ರಹ್ಮಪುತ್ರ ಕಣಿವೆಯಲ್ಲಿ ಉಪಯೋಗಿಸಿದ್ದಾರೆ. ೧೫ನೆಯ ಶತಮಾನಕ್ಕೆ ಮೊದಲು ಇದರ ಹಸ್ತಪ್ರತಿ ಯಾವುದೂ ದೊರೆಯದಿದ್ದರೂ ಬಾಣನ ೭ನೆಯ ಶತಮಾನದ ಹೇಳಿಕೆಯಂತೆ ಅಸ್ಸಾಮಿನ ರಾಜ ಭಾಸ್ಕರವರ್ಮನು ಕನೂಜಿನ ರಾಜ ಹರ್ಷನಿಗೆ ಆಭರಣಗಳು ರೇಷ್ಮೆಬಟ್ಟೆಗಳು ಮತ್ತು ಅಲೊಯಿಮರದ ಒಳಪದರದಿಂದ ತಯಾರಿಸಿದ ಹಸ್ತಪ್ರತಿಗಳ ಕಟ್ಟುಗಳನ್ನು ಕಾಣಿಕೆಯಾಗಿ ಕಳುಹಿಸಿದನು.

---

1. ಕನ್ನಡ ಗ್ರಂಥ ಸಂಪಾದನೆ; ಪು. ೩೬

ಭೂರ್ಜಪತ್ರಗಳಂತಲ್ಲದೆ ಈ ಎಲೆಗಳ ಮಧ್ಯದಲ್ಲಿ ರಂಧ್ರಗಳನ್ನು ಮಾಡಿ ದಾರದಿಂದ ಪೋಣಿಸುತ್ತಿದ್ದರು. ಹೊರಗಣ ಕವಚಗಳು ಇದೇ ಮರದ ದಪ್ಪ ಹದರಗಳಾಗಿರುತ್ತಿದ್ದವು"ಎಂದು ಬಿ.ಎಸ್. ಕೇಶವನ್ ತಿಳಿಸಿದ್ದಾರೆ.[1]

ತಾಳಪತ್ರ : ತಾಳೆ ಅಥವಾ ಓಲೆ ಹಸ್ತಪ್ರತಿಗಳು ದಕ್ಷಿಣ ಭಾರತದಲ್ಲೆಲ್ಲಾ ತುಂಬಿಕೊಂಡಿವೆ. ಹಸ್ತಪ್ರತಿ ಎಂದೊಡನೆ ತಾಳೆಗರಿಯ ಕಟ್ಟುಗಳು ಎಂದು ತಿಳಿಯುವಷ್ಟರಮಟ್ಟಿಗೆ ಇದು ವ್ಯಾಪಕವಾಗಿದೆ. ತಾಳೆಯಗರಿಗಳನ್ನು ಕತ್ತರಿಸಿ ಹಸಿದಾಗಿರುವಾಗಲೆ ಕುದಿನೀರಿನಲ್ಲಿ ಬೇಯಿಸಿ ನೆರಳಲ್ಲಿ ಒಣಗಿಸಿ ಒಂದು ಆಕಾರಕ್ಕೆ ಕತ್ತರಿಸಿ ಬರೆಯಲು ಸಿದ್ಧಪಡಿಸುತ್ತಿದ್ದರೆಂದು ತಿಳಿದುಬರುತ್ತದೆ. ಎಲೆಯ ಮೇಲೆ ಕಬ್ಬಿಣದ ಸಲಾಕೆಯಂತಹ ವಸ್ತುವಿನಿಂದ (ಕಂಠದಿಂದ) ಆಕ್ಷರಗಳನ್ನು ಕೆರೆದು ಅಥವಾ ಕೊರೆದು ಮಸಿಯನ್ನು ಹಚ್ಚುತ್ತಿದ್ದರು. "ತಾಳೆಗರಿಯನ್ನು ಬೇಯಿಸಿ ಶಂಖ ಅಥವಾ ಮತ್ತಾವುದಾದರೂ ನುಣುಪಾದ ಪದಾರ್ಥದಿಂದ ಉಜ್ಜಿ ಅವನ್ನು ನುಣುಪು ಮಾಡುತ್ತಿದ್ದರು. ನುಣುಪು ಮಾಡಿದ ಮೇಲೆ ಕಬ್ಬಿಣದ ಲೇಖನಿಯಿಂದ (ಕಂಠ) ಅದರ ಮೇಲೆ ಅಕ್ಷರಗಳನ್ನು ಕೊರೆಯುತ್ತಿದ್ದರು. ನಂತರ ಕಪ್ಪುಮಸಿಯನ್ನು ಬಳಿಯುತ್ತಿದ್ದರು. ಅದು ಕುಳಿಗಳಲ್ಲಿ ತುಂಬಿಕೊಳ್ಳುತ್ತಿದ್ದಿತು. ನುಣುಪಾದ ಭಾಗದಿಂದ ಒರೆಸುತ್ತಿದ್ದರು. ಕಬ್ಬಿಣದಿಂದ ಕೊರೆಯುವ ಪದ್ಧತಿಯು ದಕ್ಷಿಣದಲ್ಲೇ ಪ್ರಚಲಿತವಾಗಿದ್ದಿತು" ಎಂದು ಹಜಾರಿ ಪ್ರಸಾದ್ ದ್ವಿವೇದಿ ಅವರು ಹೇಳಿದ್ದಾರೆ.[2]

ಈ ಗರಿಗಳನ್ನು ಬರವಣಿಗೆಗೆ ಉಪಯೋಗಿಸುತ್ತಿದ್ದುದನ್ನು ಪ್ಲಿನಿ (ಕ್ರಿ.ಶ. ೨೩-೭೯) ಎಂಬ ಪ್ರಕೃತಿತಜ್ಞನು ಹೇಳಿದ್ದಾನೆ. ಹ್ಯೂಯನ್‌ತ್ಸಾಂಗನು (ಕ್ರಿ.ಶ. ೬೨೯-೬೪೫) ಕೊಂಕಣಪುರದ ಉತ್ತರಕ್ಕೆ ತಾಳೆಮರಗಳ ಕಾಡಿರುವುದನ್ನೂ ಇವುಗಳ ಎಲೆಗಳನ್ನು ಜನರು ಬರವಣಿಗೆಗಾಗಿ ಉಪಯೋಗಿಸುವುದನ್ನೂ ದಾಖಲಿಸಿದ್ದಾನೆ. ಸು.ಕ್ರಿ.ಶ. ೧೦೩೦ರಲ್ಲಿ ಭಾರತಕ್ಕೆ ಬಂದಿದ್ದ ಅಲ್‌ಬೆರುನಿ ತಾಳೆ ಮತ್ತು ಭೂರ್ಜಪತ್ರಗಳನ್ನು ನೋಡಿದ್ದುದಾಗಿ

---

1. The book in India; Ed. by B.S. Keshavan, National Book Trust, India, New Delhi - 16, 1986, P. 57 - 59

2. ಪ್ರಾಚೀನ ಕಲಾತ್ಮಕ ವಿನೋದಗಳು : ಅನು : ಹನುಮಯ್ಯ, ಸಾಧನ ಸಾಹಿತ್ಯ ಮಂದಿರ, ಮೈಸೂರು. ೧೯೬೨.

ತಿಳಿಸಿದ್ದಾನೆ. ಒಂದು ಗಜ ಉದ್ದವಾಗಿಯೂ ಮೂರು ಕೈಬೆರಳುಗಳಷ್ಟು ಅಗಲವಾಗಿಯೂ ಇರುವ ಈ ತಾಳೆ ಎಲೆಗಳನ್ನು ಬರವಣಿಗೆಗೆ ಉಪಯೋಗಿಸುವರೆಂದೂ ಬರೆದನಂತರ ಎಲ್ಲ ಎಲೆಗಳನ್ನೂ ಅವುಗಳ ಮಧ್ಯದಲ್ಲಿ ಮಾಡಿದ ರಂಧ್ರದ ಮೂಲಕ ದಾರವನ್ನು ಹಾಕಿ ಕಟ್ಟಿಡುವರೆಂದೂ ತಿಳಿಸಿದ್ದಾನೆ. ಅಬ್ದುರ್ ರಜಾಕ್ ಎಂಬಾತನು ವಿಜಯನಗರದಲ್ಲಿ ಜನರು ಈ ತಾಳೆಗರಿಯನ್ನು ಬರೆಯಲು ಉಪಯೋಗಿಸುತ್ತಿದ್ದುದನ್ನು ನೋಡಿದುದಾಗಿ ಹೇಳಿ ಈ ಓಲೆಗಳಲ್ಲಿ ತಾಲ ಶ್ರೀತಾಲವೆಂದು ಎರಡು ವಿಧವಿದೆ ಎಂದಿದ್ದಾನೆ. ತಾಲವು ಎರಡು ಬೆರಳು ಅಗಲವಾಗಿಯೂ, ಎರಡು ಗಜ ಉದ್ದವಾಗಿಯೂ ಇದ್ದು ಇದರ ಮೇಲೆ ಕಬ್ಬಿಣದ ಕಂಠದಿಂದ ಬರೆಯುತ್ತಿದ್ದರೆಂದೂ, ಈ ಅಕ್ಷರಗಳು ಬಣ್ಣದಿಂದ ಕೂಡಿರದೆ ಸ್ವಲ್ಪ ಬಿಳುಪಾಗಿ ಮಾತ್ರ ಕಾಣುತ್ತಿದ್ದುವೆಂದೂ ತಿಳಿಸಿದ್ದಾನೆ. ಮತ್ತೊಂದು ವಿಧವಾದ ಶ್ರೀತಾಲದಲ್ಲಿ ಎಲೆಯನ್ನು ಮೊದಲು ಕಪ್ಪುಮಾಡಿ ಅದರ ಮೇಲೆ ಲೇಖನಿಯಂತಹ ಮೃದುವಾದ ಕಲ್ಲಿನಿಂದ ಬರೆಯುತ್ತಿದ್ದರೆಂದೂ ಇದರಲ್ಲಿ ಕಪ್ಪು ಎಲೆಯ ಮೇಲೆ ಬಿಳಿಯ ಅಕ್ಷರಗಳು ಕಾಣುತ್ತಿದ್ದುವೆಂದೂ ಹೇಳಿದ್ದಾನೆ. ಈ ರೀತಿಯಲ್ಲಿ ಬರೆಯುತ್ತಿದ್ದುದನ್ನು ಎ. ಹ್ಯಾಮಿಲ್ಟನ್ ಎಂಬಾತನು ತಾನು ಕೆನರಾ (ದಕ್ಷಿಣ ಕನ್ನಡ, ಉತ್ತರ ಕನ್ನಡ) ಮತ್ತು ದಕ್ಷಿಣ ಭಾರತದಲ್ಲಿ ಕಂಡುದಾಗಿ ಹೇಳಿದ್ದಾನೆ. ರಾಜೇಂದ್ರಮಿತ್ರ ಅವರು ಬಂಗಾಳದಲ್ಲಿ 'ಚಂಡಿ' ಎಂಬ ಗ್ರಂಥ ಓಲೆಯಲ್ಲಿರುವುದಾಗಿ ತಿಳಿಸಿದ್ದಾರೆ.

ಈ ತಾಳೆಗ್ರಂಥಗಳು ಭಾರತದ ವಿವಿಧ ಭಾಗಗಳಲ್ಲಿ ದೊರೆತರೂ ಒರಿಸ್ಸಾ, ಗುಜರಾತ್, ತಮಿಳುನಾಡು, ಆಂಧ್ರ, ಕೇರಳ ಮತ್ತು ಕರ್ನಾಟಕಪ್ರಾಂತ್ಯಗಳಲ್ಲಿ ಹೇರಳವಾಗಿ ದೊರೆಯುತ್ತವೆ. ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯ, ಕನ್ನಡ ಅಧ್ಯಯನ ಸಂಸ್ಥೆ, ಮದರಾಸು ಓರಿಯಂಟಲ್ ಮಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ ಮತ್ತು ಅಡಿಯಾರ್ ಲೈಬ್ರರಿಗಳಲ್ಲಿ ತಂಜಾವೂರು ಸರಸ್ವತಿ ಮಹಲ್ ಲೈಬ್ರರಿಯಲ್ಲಿ ಬಹುಮಟ್ಟಿನ ಹಸ್ತಪ್ರತಿಗಳೆಲ್ಲವೂ ಓಲೆಯಲ್ಲಿವೆ. 'ಗುಪ್ತರ ಲಿಪಿಯಲ್ಲಿ ಬರೆದ ಹಳೆಯ ಓಲೆಗ್ರಂಥವನ್ನು (೬ನೆಯ ಶತಮಾನ ಜಪಾನಿನ ಹೊರಿಂಜಿ (Horinzi) ಎಂಬ ಮಠದಲ್ಲಿ ಕಾಪಾಡಲಾಗಿದೆ. ತಕ್ಲಮಕನ್ (Taklamakan) ಎಂಬ ಮರುಭೂಮಿಯಲ್ಲಿ ಇನ್ನೂ ಹಳೆಯ ಕಾಲದ ಓಲೆಗ್ರಂಥಗಳಿರಬಹುದೆಂದೂ, ಇದನ್ನು ನಿಖರವಾಗಿ ಹೇಳಲು ಯಾವ ಆಧಾರಸಾಹಿತ್ಯವೂ ಇಲ್ಲವೆಂದೂ, ಆದರೆ ನೇಪಾಳದಲ್ಲಿ ಗುಪ್ತಲಿಪಿಯ ಹಸ್ತಪ್ರತಿಗಳನ್ನು (೭ನೆಯ ಶತಕ) ನೋಡಿದುದಾಗಿಯೂ, ಗುಜರಾತಿನಲ್ಲಿರುವ ಪಟ್ಟನ್ ಹಸ್ತಪ್ರತಿಗಳ ಭಂಡಾರವು ಅತ್ಯಂತ ಪ್ರಾಚೀನವಾದ ಹಸ್ತಪ್ರತಿಗಳನ್ನು ಹೊಂದಿದ್ದು, ಅತ್ಯಂತ ಪುರಾತನ ಕಾಲನಮೂದಿತ

ನಿಶೀಥಚೂರ್ಣಿ' ಎಂಬ ಹಸ್ತಪ್ರತಿಯ ಕಾಲ ವಿಕ್ರಮ ಸಂವತ್ಸರ ೧೧೫೭ (ಕ್ರಿ.ಶ. ೧೧೦೧) ಎಂದೂ, ಇನ್ನೂ ಪುರಾತನವಾದ ಹಸ್ತಪ್ರತಿಗಳು ಇರಬಹುದಾದರೂ ಅವುಗಳಲ್ಲಿ ಕಾಲವು ಉಕ್ತವಾಗಿಲ್ಲದಿರುವುದರಿಂದ ಇಷ್ಟೇ ಸರಿ ಎಂದು ಹೇಳುವಂತಿಲ್ಲ' ವೆಂದೂ ಬರೋಡ ಓರಿಯಂಟಲ್ ಇನ್‌ಸ್ಟಿಟ್ಯೂಟಿನ ನಿರ್ದೇಶಕರಾದ ಬಿ. ಭಟ್ಟಾಚಾರ್ಯರು ತಿಳಿಸಿದ್ದಾರೆ[1]

'ಜಯಸಲ್ಮೇರಿನಲ್ಲಿ ಜೈನತತ್ವಕ್ಕೆ ಸಂಬಂಧಪಟ್ಟ ಜ್ಞಾನಭಂಡಾರಗಳಿವೆ. ಪುರಾತನ ಓಲೆ ಹಸ್ತಪ್ರತಿಗಳ ಸಂಗ್ರಹ ಶಂಭುನಾಥ್ ಜೈನಮಂದಿರದ ಹತ್ತಿರವಿರುವ ಕೋಟೆಯಲ್ಲಿದೆ. ಇಲ್ಲಿ ಕೆಲವು ಹಸ್ತಪ್ರತಿಗಳು ಅಸ್ತವ್ಯಸ್ತವಾಗಿ ಶಿಥಿಲವಾಗಿವೆ. ಇವುಗಳಲ್ಲಿ 'ಕುವಲಯಮಾಲಾ', 'ಮಹಾಪುರುಷ ಚರಿತ', 'ವಸುದೇವ ಹಿಂಡಿ' ಮೊದಲಾದ ಮುಖ್ಯಗ್ರಂಥಗಳಿವೆ. 'ಪಂಚಮಿಕಹ' ಎಂಬ ಗ್ರಂಥದ ಹಸ್ತಪ್ರತಿಯ ಕಾಲ ವಿ.ಶ. ೧೧೯೯ (ಕ್ರಿ. ಶ. ೧೦೫೩) ಮತ್ತು 'ಕುವಲಯಮಾಲಾ' ವಿ.ಶ. ೧೧೩೯ (ಕ್ರಿ.ಶ. ೧೦೮೭). 'ವಸುದೇವ ಹಿಂಡಿ' ಗ್ರಂಥದಲ್ಲಿ ಕಾಲ ಉಲ್ಲೇಖಿತವಾಗಿಲ್ಲವಾದರೂ ಪುರಾತನವಾದುದೆಂದು ತೋರುತ್ತದೆ. ಇಲ್ಲಿರುವ ಅತ್ಯಂತ ಪುರಾತನವಾದ ಓಲೆಗ್ರಂಥ ಕ್ರಿ.ಶ. ೮೪೩ ರಿಂದ ೯೪೨ರ ವರೆಗೆ' ಎಂದು ಜೋಧಪುರದ ಜಿನಸಾಗರಸೂರಿ ಹೇಳುತ್ತಾರೆ. "ಗಾಡ್‌ಫ್ರೆ ಎಂಬಾತನಿಗೆ ಕಾಷ್‌ಗರ್‌ನಲ್ಲಿ ಸಿಕ್ಕಿದ ತಾಳಪತ್ರದ ಹಸ್ತಪ್ರತಿ ಕ್ರಿ.ಶ. ೪ನೇ ಶತಮಾನದಲ್ಲಿ ಲಿಖಿತವಾದುದಂತೆ. ಟರ್ಫಾನ್ ಎಂಬಲ್ಲಿ ದೊರೆತ ಓಲೆಗಳ ೧೪೪ ಚೂರುಗಳನ್ನು ಸರಿಯಾಗಿ ಜೋಡಿಸಿ ಲೂಡರ್ಸ್ (Luders) ಎಂಬ ಜರ್ಮನ್ ವಿದ್ವಾಂಸನು ಅಶ್ವಘೋಷನ ಎರಡು ನಾಟಕಗಳ ಸ್ವಲ್ಪ ಭಾಗಗಳನ್ನು ಪುನಃ ರಚಿಸಿ ಪ್ರಕಟಿಸಿದ್ದಾನೆ. ಈ ಓಲೆಯ ಚೂರುಗಳೇ ಅತ್ಯಂತ ಪ್ರಾಚೀನವಾದುವೆಂದು ಹೇಳುತ್ತಾರೆ. "[2]

ಕನ್ನಡದಲ್ಲಿ ನಮಗೆ ದೊರೆತ ಓಲೆಗ್ರಂಥಗಳಲ್ಲಿ ಮೈಸೂರು ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ 'ನಾಮಲಿಂಗಾನುಶಾಸನ ಟೀಕೆ' ಶಕ ೧೦೫೩ (ಕ್ರಿ.ಶ. ೧೧೩೦)ರಲ್ಲಿ ಪ್ರತಿಯಾಗಿದ್ದು ಇದು ಪ್ರಾಚೀನ ಕಾಲನಮೂದಿತ ಹಸ್ತಪ್ರತಿಯಾಗಿದೆ. ಶ್ರವಣಬೆಳಗೊಳದ ಜೈನಮಠದಲ್ಲಿರುವ ಶಕ ೧೧೫೫ (ಕ್ರಿ.ಶ. ೧೨೩೩)ರಲ್ಲಿ ಪ್ರತಿಯಾಗಿರುವ ಮಾಧವಚಂದ್ರ ತ್ರೈವಿದ್ಯನ 'ಕ್ಷಪಣಸಾರ'ದ ವ್ಯಾಖ್ಯಾನದ ಓಲೆಪ್ರತಿಯು ಪ್ರಾಚೀನವಾದುದಾಗಿದೆ. ಇದನ್ನು ಬಿಟ್ಟರೆ ಶಕ ೧೨೬೪ (ಕ್ರಿ.ಶ. ೧೩೪೨ರಲ್ಲಿ) ಲಿಖಿತವಾದ ರನ್ನನ 'ಗದಾಯುದ್ಧ'ದ

1. Indian Archieves Vol. I-3, 1947.

2. ಕ. ಗ್ರಂ. ಸಂ. ಪು. ೩೬-೩೭

ಹಸ್ತಪ್ರತಿ. ಇದರಲ್ಲಿರುವ ತೊಡಕೆಂದರೆ ಮೂಲಗ್ರಂಥಕ್ಕೆ ಸೇರಿದಂತೆಯೇ ಕಾಲನಮೂದಿತ ಬರವಣಿಗೆಯಿಲ್ಲದಿರುವುದು; ಅಕ್ಷರಗಳು ಮಾತ್ರ ಒಬ್ಬನವೇ ಎಂದು ತೋರುತ್ತದೆ; ಮತ್ತೆ ಲಿಪಿಯೂ ಕೂಡ ಒಬ್ಬನವೇ ಆಗಿದ್ದು ಸಾಕಷ್ಟು ಪುರಾತನವಾದುದೆಂದು ಹೇಳಬಹುದು. ಇವುಗಳಲ್ಲದೆ ಶಕ ೧೩೦೧ (ಕ್ರಿ.ಶ. ೧೩೭೯)ರಲ್ಲಿ ಪ್ರತಿಯಾದ ಪಂಪನ 'ಆದಿಪುರಾಣ'ದ ಪ್ರತಿ ಮತ್ತು ಶಕ ೧೩೧೭ (ಕ್ರಿ.ಶ. ೧೩೯೫ ರಲ್ಲಿ) ಲಿಖಿತವಾದ ಅಭಯಚಂದ್ರ ಸೈದ್ಧಾಂತಿಕದೇವರ 'ನಾಚಿರಾಜೀಯ' ಗ್ರಂಥಗಳು ಮುಖ್ಯವಾದುವಾಗಿವೆ. ಆದಿಪುರಾಣದ ಹಸ್ತಪ್ರತಿ ಶ್ರವಣಬೆಳಗೊಳದ ಜೈನಮಠದ ಹಸ್ತಪ್ರತಿ ಭಂಡಾರದಲ್ಲಿದ್ದು ಅದರ ಮೈಕ್ರೋಫಿಲಂ ಪ್ರತಿ ಮೈಸೂರು ಕನ್ನಡ ಅಧ್ಯಯನ ಸಂಸ್ಥೆಯಲ್ಲಿದೆ. ಕಾಲನಮೂದಾಗಿರುವ ಮತ್ತೂ ಕೆಲವು ಮುಖ್ಯ ಹಸ್ತಪ್ರತಿಗಳೆಂದರೆ ಕ್ರಿ.ಶ. ೧೮೧೬ರಲ್ಲಿ ಪ್ರತಿಯಾದ ಗುಣವರ್ಮನ 'ಪುಷ್ಪದಂತ ಪುರಾಣ', ಇದರ ೨೨.೧x೨ ಇಂಚು ಉದ್ದ ಅಗಲಗಳನ್ನು ಪತ್ರದ ಒಂದೊಂದು ಬದಿಯಲ್ಲಿ ಸರಾಸರಿ ೯ ಪಂಕ್ತಿಗಳಿದ್ದು ಪ್ರತಿ ಪಂಕ್ತಿಯಲ್ಲಿ ೧೧೫ ಅಕ್ಷರಗಳಿವೆ. ಕ್ರಿ.ಶ. ೧೫೫೪ರಲ್ಲಿ ಪ್ರತಿ ಮಾಡಿದ ಗದುಗಿನ ನಾರಣಪ್ಪನ 'ಮಹಾಭಾರತ'ದ ಪ್ರತಿ ಮುಖ್ಯವಾದುದಾಗಿದೆ. ದಾರವನ್ನು ಎಳೆದಾಗ ಹರಿಯದಿರಲೆಂದು ಓಲೆಯ ಪ್ರತಿರಂಧ್ರಗಳಿಗೂ ಬೆಳ್ಳಿಯ ಉಂಗುರಗಳನ್ನು ಅಳವಡಿಸಿರುವುದು ಮೆಚ್ಚುಗೆಯ ವಿಷಯವಾಗಿದೆ. ಹೀಗೆ ಓಲೆಗಳ ಉಪಯೋಗ ಮುಂದುವರಿದಿದ್ದು ಕ್ರಿ.ಶ. ೧೮೫೦ರಲ್ಲಿ ಮುಮ್ಮಡಿ ಕೃಷ್ಣರಾಜರು ಮತ್ತು ಅಳಿಯ ಲಿಂಗರಾಜ ಮೊದಲಾದವರ ಕೃತಿಗಳೂ ತಾಳಪತ್ರದಲ್ಲಿ ಲಿಖಿತವಾಗಿವೆ.

ಕಡತ : ಇದು ಬಟ್ಟೆಯ ಎರಡೂ ಬದಿಗಳಿಗೆ ಹುಣಸೆಬೀಜದ ಚರಿ ಮತ್ತು ಇದ್ದಿಲಪುಡಿಗಳ ಮಿಶ್ರಣವನ್ನು ಸವರಿ ತಯಾರಿಸಿದ, ಒಂದು ನಿರ್ದಿಷ್ಟ ಅಗಲದ, ಹಲವು ಅಡಿ ಉದ್ದವಾಗಿರುವ, ಸುಮಾರು ನಿರ್ದಿಷ್ಟ ಅಳತೆಗೆ ಮಡಿಕೆಗಳನ್ನುಳ್ಳ ಪುಸ್ತಕದಂತಿರುವ ಒಂದು ಪ್ರತಿಗೆ ಕಡತದ ಹಸ್ತಪ್ರತಿ ಎನ್ನುತ್ತಾರೆ. ಇದರ ಮಡಿಕೆಗಳು ಒಮ್ಮೆ ಎಡಕ್ಕೆ ಮತ್ತೊಮ್ಮೆ ಬಲಕ್ಕೆ ಹೀಗೆ ಮಡಿಕೆಯಾಗಿರುತ್ತದೆ; ಎರಡೂ ಬದಿಗಳಲ್ಲಿ ಬರೆಯಬಹುದಾದಂತಹ ರೂಪವನ್ನು ಪಡೆದಿರುತ್ತದೆ; ಕಪ್ಪು ಸಮತಲದ ಮೇಲೆ ಬಳಪದಕಲ್ಲಿನಿಂದ ಬರೆದ ಬಿಳಿಯ ಅಕ್ಷರಗಳು ರೂಪುಗೊಳ್ಳುತ್ತವೆ. ಇವುಗಳನ್ನು ಶ್ರೀಮಂತ ಮನೆಗಳಲ್ಲಿ, ಮಠಗಳಲ್ಲಿ, ಅರಮನೆ ಗುರುಮನೆಗಳಲ್ಲಿ ದಿನಚರಿಯ ಲೆಕ್ಕಪತ್ರಗಳನ್ನು ಬರೆಯಲು ಹೆಚ್ಚಾಗಿ ಉಪಯೋಗಿಸುತ್ತಿದ್ದರು. ಅಪರೂಪವಾಗಿ ಕೆಲವು ಕಾವ್ಯಗಳನ್ನೂ

ದರಲ್ಲಿ ಬರೆದಿರುವುದನ್ನು ಕಾಣಬಹುದು. 'ಕೆಳದಿನೃಪವಿಜಯ'ದ ಇಂತಹ ಒಂದು ಸ್ತಪ್ರತಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿದೆ. ಈ ಕಡತಗಳು ಕರ್ನಾಟಕಕ್ಕೆ ಮಾತ್ರ ೀಮಿತವಾಗಿರುವಂತೆ ತೋರುತ್ತದೆ.

ಕನ್ನಡನಾಡಿನಲ್ಲಿ ಕಡತಗಳ ಉಪಯೋಗ ಬಹಳ ಕಾಲದಿಂದಲೂ ಇದ್ದುದಕ್ಕೆ ಕೆಲವು ಾಕ್ಷಿಗಳು ದೊರೆಯುತ್ತವೆ. "ಶುಭತುಂಗದೇವನನ್ನು (ರಾಷ್ಟ್ರಕೂಟ ಕೃಷ್ಣ -೩ ಕ್ರಿ.ಶ. ೪೦-೯೬೮) ಹೊಗಳುವ 'ಸೂಕ್ತಿಸುಧಾರ್ಣವ'ದ ಅಜ್ಞಾತ ವೃತ್ತವೊಂದರಲ್ಲಿ, ಪೊನ್ನನ ಶಾಂತಿಪುರಾಣ'ದಲ್ಲಿ, ಪದ್ಮಣಾಂಕನ (೧೩೮೫) ಪದ್ಮರಾಜಪುರಾಣ'ದಲ್ಲಿ, ಕನಕದಾಸರ ೧೫೫೦) 'ಮೋಹನ ತರಂಗಿಣಿ'ಯಲ್ಲಿ, ಪಾಯಣವರ್ಣಿಯ (೧೬೫೯) 'ಜ್ಞಾನಚಂದ್ರ ಚರಿತೆ'ಯಲ್ಲಿ ಕಡತಗಳ ಉಲ್ಲೇಖಗಳಿವೆ. ಕ್ರಿ.ಶ. ೧೦೬೩ರ ನಾಗಾವಿಯ ಶಾಸನದಲ್ಲಿ ಮಧುಸೂದನ ಕಾಳಿಮರಸರು "ಕಡಿತವೆರ್ಗಡೆ'ಗಳಾಗಿದ್ದರೆಂದು ನಮೂದಿತವಾಗಿದೆ."[1]

ಕೋರಿಕಾಗದ : ಕಡತದ ಅನಂತರ ಬರುವ ವಸ್ತುವೆಂದರೆ ಕೋರಿಕಾಗದ ಅಥವಾ ಕೈಯಿಂದ ಮಾಡಿದ ಕಾಗದ. ಯಂತ್ರದಿಂದ ತಯಾರಾದ ಕಾಗದಕ್ಕಿಂತ ಒರಟಾಗಿರುವ ಈ ಕಾಗದದಲ್ಲಿ ಬೇಗ ನಶಿಸಿಹೋಗುವಂತಹ ಕಬ್ಬಿಣದ ಅಂಶ ಸೇರಿರುವುದಿಲ್ಲ; ಜಿಲಟಿನ್ ಮತ್ತು ಪಿಷ್ಟಪದಾರ್ಥಗಳನ್ನು ಉಪಯೋಗಿಸಿರುವುದಿಲ್ಲ. ಇದು ಬಟ್ಟೆಯ ಚೂರುಗಳಿಂದ ಮಾತ್ರ ತಯಾರುಮಾಡಿದ್ದಾಗಿರುತ್ತದೆ.

"ಗುಜರಾತಿನಲ್ಲಿ ದೊರೆತ ಕಾಗದದ ಒಂದು ಹಸ್ತಪ್ರತಿ ಕ್ರಿ.ಶ. ೧೨೨೦ - ೨೪ರ ಕಾಲಕ್ಕೆ ಸೇರಿದ್ದೆಂದು ಗೊತ್ತಾಗುತ್ತದೆ. ಕನ್ನಡನಾಡನಲ್ಲಿ ಕಾಗದವನ್ನು ಲೇಖ್ಯವಸ್ತುವನ್ನಾಗಿ ಉಪಯೋಗಿಸುವ ರೂಢಿ ಕ್ರಿ.ಶ. ೧೪೯೮ರ ಸುಮಾರಿನಲ್ಲಿ ಆರಂಭವಾಗಿರಬಹುದು. ಅಭಿನವ ಮಂಗರಾಜನು 'ಪತ್ತಳಿಕೆಯೆನಲು ಕಾಗದಮಕ್ಕು ದೌತಿ ಮಸಿಪಾತ್ರೆಯಕ್ಕು ಕಲಾಮು ಲೇಖನಿಯಕ್ಕು" (ಅಭಿದಾನ ಪು. ೧೦೫-೧೫) ಎಂದು ಹೇಳಿದ್ದಾನೆ. ಗೋವಿಂದವೈದ್ಯನು ೧೬೪೮ರಲ್ಲಿ ರಚಿತವಾದ ತನ್ನ 'ಕಂಠೀರವ ನರಸರಾಜ ವಿಜಯ'ದಲ್ಲಿ ಕಾಗಜ' ಶಬ್ದವನ್ನು ಬಳಸಿದ್ದಾನೆ. (ಸಂಧಿ ೧೩-೭೦, ೭೧). ಕಾಗದವನ್ನು ಅದಕ್ಕೆ ಬೇಕಾದ ಸಾಮಗ್ರಿಗಳನ್ನು ಹಾಕಿ ಕೈಯಿಂದ ಮಾಡುತ್ತಿದ್ದರು. ಇದು ಸ್ವಲ್ಪ ಮಂದವಾಗಿಯೂ ಒರಟಾಗಿಯೂ ಮಾಸಲುಬಿಳುಪು ಬಣ್ಣದ್ದಾಗಿಯೂ ಇರುತ್ತದೆ. ಇದರ ಮೇಲೆ ಮಸಿಯಲ್ಲಿ

1. ಕರ್ನಾಟಕ ಭಾರತಿ ೧೬-೧ ೨. ಎಸ್. ಶಿವಣ್ಣ

ಬರೆಯುತ್ತಿದ್ದರು. ರಾಜರೂ ಅವರ ಅಧಿಕಾರಿಗಳೂ ಪಾಳೆಯಗಾರರೂ ತಂತಮ್ಮ ನಿರೂಪಗಳನ್ನೂ ಸನ್ನದುಗಳನ್ನೂ ಸಾಧಾರಣವಾಗಿ ಇಂಥ ಕಾಗದದ ಮೇಲೆ ಬರೆಯುತ್ತಿದ್ದರು. ದಕ್ಷಿಣ ಕರ್ಣಾಟಕದಲ್ಲಿ ಕಾಗದದ ಹಸ್ತಪ್ರತಿಗಳು ಸಾಹಿತ್ಯಕೃತಿಗಳಿಗೆ ಸಂಬಂಧಿಸಿದುವು ಹೆಚ್ಚಾಗಿ ದೊರೆಯುತ್ತಿಲ್ಲ. ಉತ್ತರ ಕರ್ನಾಟಕದಲ್ಲಿ ಇವು ಹೇರಳವಾಗಿ ಲಭ್ಯವಾಗಿವೆ. ಇದನ್ನು ಕೋರಿಕಾಗದ ಎಂದು ಕರೆಯುವ ರೂಢಿ ಇದ್ದಿತು."[1]

ಕಾಗದ : ತಾಡಪತ್ರ ಕೋರಿಕಾಗದಗಳ ಜೊತೆಜೊತೆಗೆ ಯಂತ್ರದಿಂದ ತಯಾರಾದ ಕಾಗದದ ಹಸ್ತಪ್ರತಿಗಳೂ ನಮಗೆ ದೊರೆಯುತ್ತವೆ. ಎಚ್. ದೇವೀರಪ್ಪನವರು "ಈ ಲೇಖಕನಿಗೆ ತಿಳಿದಿರುವಂತೆ ಶಕವರ್ಷ ೧೪೧೨ ಸಂದ ಸಿದ್ಧಾರ್ಥ ಸಂವತ್ಸರದ ಆಶ್ವಯುಜ ಬಹುಳ ೧೦ (ಕ್ರಿ.ಶ. ೧೫೦೦) ಲಿಖಿಸಿರುವ 'ಏಕೋತ್ತರ ಶತಸ್ಥಲ ಟೀಕು' ಅತ್ಯಂತ ಹಳೆಯದಾದ ಕಾಗದದ ಪ್ರತಿ"[2] ಎಂದು ಹೇಳಿದ್ದಾರೆ. ಆದರೆ ಈ ಪ್ರತಿಗೆ ಉಪಯೋಗಿಸಿರುವ ಕಾಗದ ೨೦ನೆಯ ಶತಮಾನದ್ದಾಗಿರುವುದರಿಂದ ಇದು ಮೂಲಪ್ರತಿಯೊಂದರ ನಕಲಾಗಿರುವುದು ಕಂಡುಬರುತ್ತದೆ. ಆದುದರಿಂದ ನನಗೆ ತಿಳಿದ ಮಟ್ಟಿಗೆ "ಸ್ವಸ್ತಿಶ್ರೀಮತ್ಸಕವರ್ಷ ೧೪೪೯ (ಕ್ರಿ.ಶ. ೧೫೬೭) ಪ್ರಭವ ಸಂವತ್ಸರದ ಪುಷ್ಯಮಾಸದ ಬಹುಳ ಷಷ್ಟಿ ಆದಿತ್ಯವಾರದ ಪಾಲ್ಗುಣ ನಕ್ಷತ್ರ ಸೌಭಾಗ್ಯಯೋಗ ಗರಜಾಕರಣದಲ್ಲಿ ಸೇಡಬಳದ ಬಸ್ತಿಯ ಶ್ರೀ ಶಾಂತಿನಾಥನ ಸಮಕ್ಷದಲ್ಲಿ ಶ್ರೀ ವೀರವರ್ಧಮಾನಸ್ವಾಮಿಯ ಪುರಾಣವನು ಶ್ರೀಮಲ್ಲಕ್ಷ್ಮಿಸೇನದೇವರುಗಳ ಪ್ರಿಯಾಗ್ರಶಿಷ್ಯರು ಪಾಯಣ್ಣಗಳು ಬರದು ಮುಗಿದುದು" ಎಂದು ಹೇಳಿ ಪ್ರತಿ ಮಾಡಿರುವ ಎರಡನೆಯ ನಾಗವರ್ಮನ 'ವರ್ಧಮಾನ ಪುರಾಣ'ದ ಹಸ್ತಪ್ರತಿಯೇ ಈಗ ದೊರೆಯುವ ಅತಿ ಪ್ರಾಚೀನ ಕಾಗದದ ಹಸ್ತಪ್ರತಿಯೆಂದು ಹೇಳಬಹುದು. ಈ ಹಸ್ತಪ್ರತಿಯೊಡನೆ ಸೇರಿಕೊಂಡಿರುವ ಇದೇ ಪ್ರತಿಕಾರನಿಂದ ಲಿಖಿತವಾಗಿರುವ ಆಚಣ್ಣನ 'ವರ್ಧಮಾನ ಪುರಾಣ' ಶಕ ೧೪೯೧ (ಕ್ರಿ.ಶ. ೧೫೬೯) ಮತ್ತು ಅಗ್ಗಳನ 'ಚಂದ್ರಪ್ರಭಪುರಾಣ' ಶಕ ೧೪೯೪ (ಕ್ರಿ.ಶ. ೧೫೭೨) ಹಸ್ತಪ್ರತಿಗಳು ಪ್ರಾಚೀನವಾದುವಾಗಿವೆ. ಈ ಮೂರು ಪ್ರತಿಗಳು ಮೂಡಬಿದರೆಯ ಜೈನಧರ್ಮಶಾಲೆಯ ಹಸ್ತಪ್ರತಿಭಂಡಾರದಲ್ಲಿವೆ. ನಾಗವರ್ಮನ

---

1. ಕ. ಗ್ರಂ. ಸಂ. ; ಪು. ೪೧
2. ಹಸ್ತಪ್ರತಿಶಾಸ್ತ್ರ ; ಪು. ೧೨

ರ್ಧಮಾನ ಪುರಾಣ'ದ ಮೈಕ್ರೋಫಿಲಂ ಮತ್ತು ಫೋಟೋಸ್ಟ್ಯಾಟ್ ಪ್ರತಿಗಳು ಮೈಸೂರಿನ ನ್ನಡ ಅಧ್ಯಯನ ಸಂಸ್ಥೆಯಲ್ಲಿವೆ. ಈ ಪ್ರತಿಯನ್ನು ೧೯೭೩ರಲ್ಲಿ ಮೈಕ್ರೋಫಿಲಂ ಾಡಿದಾಗ ಇದರ ಕಾಗದ ಎಂತಹ ಸ್ಥಿತಿಯಲ್ಲಿತ್ತೆಂದರೆ ಕೆಲವು ಭಾಗಗಳಲ್ಲಿ ಬೆರಳಿಟ್ಟ ಾಗದ ಕಾಗದ ಬೆರಳಿಗೇ ಅಂಟಿಬರುತ್ತಿದ್ದಿತು.

ಹೀಗೆ ವಿವಿಧ ವಸ್ತುಗಳ ಮೇಲೆ ಸಾಹಿತ್ಯನಿರೂಪಣೆಯಾಗಿದ್ದರೂ, ಕೈಯಿಂದ ಬರೆದ ಲ್ಲ ಲೇಖನಗಳಿಗೂ 'ಹಸ್ತಪ್ರತಿ' ಎಂಬ ಮಾತನ್ನು ಅನ್ವಯಿಸಬಹುದಾದರೂ ಹೆಚ್ಚು ್ಯಾಪಕವಾಗಿ ದೊರೆಯುವ ಹಸ್ತಪ್ರತಿಗಳೆಂದರೆ ತಾಳಪತ್ರ ಮತ್ತು ಕಾಗದಗಳೇ.

ಮಸಿ ಮತ್ತು ಲೇಖನಿ : ಹಸ್ತಪ್ರತಿಗಳನ್ನು ತಯಾರಿಸಲು ಉಪಯೋಗಿಸುತ್ತಿದ್ದ ಸ್ತುಗಳ ಬಗೆಗೆ ಈಗಾಗಾಲೆ ತಿಳಿದುಕೊಂಡಿದ್ದೇವೆ. ಆ ವಸ್ತುಗಳ ಮೇಲೆ ಬರೆಯಲು ಳಸುತ್ತಿದ್ದ ಮಸಿ ಮತ್ತು ಲೇಖನಿಗಳ ವಿಷಯವಾಗಿಯೂ ಸ್ವಲ್ಪ ವಿವೇಚಿಸುವುದು ುಚಿತವಾಗಿದೆ.

ಯಾವುದೇ ವಸ್ತುವಿನ ಮೇಲೆ ಬರೆಯುವಾಗ ಅಕ್ಷರಗಳು ಸ್ಫುಟವಾಗಿ ಾಣಬೇಕಾದುದು ಅವಶ್ಯಕ. ಅಂತೆಯೇ ಕಪ್ಪುವಸ್ತುವಿನ ಮೇಲೆ ಬಿಳಿಯ ಅಕ್ಷರಗಳೂ, ಳಿದರ ಮೇಲೆ ಕಪ್ಪು ಅಕ್ಷರಗಳೂ ಬರಬೇಕಾದುದು ಸಾಮಾನ್ಯವಾಗಿದೆ. ಶಿಲೆ ಲೋಹ ುತ್ತು ಸ್ಫಟಿಕದ ಮೇಲೆ ಅಕ್ಷರಗಳನ್ನು ಕೊರೆಯುತ್ತಿದ್ದುದರಿಂದ ಇವುಗಳಿಗೆ ಯಾವ ಸ್ತುವನ್ನೂ ಹಚ್ಚಿ ಬಣ್ಣದವನ್ನಾಗಿ ಮಾಡುವ ಅವಶ್ಯಕತೆಯಿಲ್ಲವೆಂದು ತೋರುತ್ತದೆ. ರ್ಮದ ಮೇಲೆ ಹೇಗೆ ಬರೆಯುತ್ತಿದ್ದರೆಂದು ಹೇಳಲು ನಮಗೆ ಇದರ ಮಾಹಿತಿ ಯಾವುದೂ ದೊರೆತಿರುವುದಿಲ್ಲ. ಮರದಿಂದ ಮಾಡಿದ ಹಲಗೆಗಳ ಮೇಲೆ ಕಪ್ಪು ಬಣ್ಣ ಳಿದು ಬಳಪದಿಂದ ಬರೆಯುತ್ತಿದ್ದರೆಂದು ಹೇಳುತ್ತಾರೆ. ಭೂರ್ಜಪತ್ರದ ಮೇಲೆ ೇಖನಿಯನ್ನು ಮಸಿಯಲ್ಲಿ ಅದ್ದಿ ಬರೆಯುತ್ತಿದ್ದರು. ಇದು ಕಾಗದದಂತೆ ಳುವಾಗಿರುವುದರಿಂದ ಕಂಠದಿಂದ ಕೊರೆಯುವ ಅಥವಾ ಕೆರೆಯುವ ಹಾಗಿರಲಿಲ್ಲ.

ಹೀಗೆ ಮಸಿಯನ್ನುಪಯೋಗಿಸಿ ಲೇಖನಿಯಿಂದ ಬರೆದ ತಾಳಪತ್ರದ ಹಸ್ತಪ್ರತಿಗಳೂ ಲವು ನಮಗೆ ದೊರೆಯುತ್ತವೆ. ಇಂತಹವುಗಳು ಅಪರೂಪವಾಗಿರಲು ಇದರ ಅಕ್ಷರಗಳು ುಲಭವಾಗಿ ಅಳಿಸಿಹೋಗುವುದು ಮುಖ್ಯ ಕಾರಣವಾಗಿದೆ. ಹೆಚ್ಚು ತಾಳಪತ್ರಗಳೆಲ್ಲವೂ ಬ್ಬಿಣದ ಸಲಾಕೆಯಂತಹ ಕಂಠದಿಂದ ಅಕ್ಷರಗಳನ್ನು ಕೆರೆದ ಅಥವಾ ಕೊರೆದಂತಹುವಾಗಿವೆ. ೀಗೆ ಕೊರೆದ ಅಕ್ಷರಗಳಿಗೆ ಮಸಿಯನ್ನು ಬಳಿಯುವುದರಿಂದ ಆಯಾ ಗೆರೆಗಳಿಗೆ ಮಸಿಯು

ಕುಳಿತು ಅಕ್ಷರಗಳು ಕಪ್ಪಾಗಿ ಓದಲು ಸುಲಭವಾಗಿರುತ್ತದೆ. ಕಾಗದದ ಮೇಲೆ ಬರೆಯಲು ಲೇಖನಿ ಮಸಿಗಳೇ ಆಧಾರವಾಗಿವೆ.

"ಕ್ರಿ.ಪೂ. ೪ನೆಯ ಶತಮಾನದಲ್ಲಿಯೇ ಭೂರ್ಜಪತ್ರಗಳ ಮೇಲೆ ಮಸಿಯಿಂದ ಬರೆಯುತ್ತಿದ್ದರು..... ಮಸಿಯಿಂದ ಬರೆದಿರುವ ಅತಿಪ್ರಾಚೀನ ಲಿಖಿತ ಅಂದೇರ್ ಎಂಬಲ್ಲಿದೆ ; ಒಂದು ಕುಡಿಕೆಯ ಮುಚ್ಚಳದ ಮೇಲೆ ಲಿಪಿ ಲಿಖಿತವಾಗಿದೆ. ಇದು ಕ್ರಿ.ಪೂ. ೨ನೆಯ ಶತಮಾನಕ್ಕೆ ಸೇರಿದ್ದು. ಖರೋಷ್ಠೀ ಲಿಪಿಯಲ್ಲಿ ಮಸಿಯಿಂದ ಬರೆದ 'ಧಮ್ಮಪದ'ದ ಪ್ರತಿ ಖೋಟಾನಿನಲ್ಲಿ ದೊರೆತದ್ದು, ಕ್ರಿ.ಶ. ೧ನೆಯ ಶತಮಾನದಷ್ಟು ಪ್ರಾಚೀನ. ತಾಳೆಯಗರಿಗಳ ಮೇಲೆ ಮಸಿಯಿಂದ ಬರೆಯುವ ಪದ್ಧತಿ ಉತ್ತರ ಭಾರತದಲ್ಲಿ ವಿಶೇಷವಾಗಿತ್ತು; ದಕ್ಷಿಣ ಭಾರತದಲ್ಲಿ ಇರಲಿಲ್ಲವೆಂದು ತೋರುತ್ತದೆ. ಏಕೆಂದರೆ ಅಂಥ ತಾಳಪತ್ರಗಳು ಸಿಕ್ಕಿಲ್ಲ ಇದುವರೆಗೆ"[1] ಎಂದು ಡಿ.ಎಲ್. ನರಸಿಂಹಾಚಾರ್ ಹೇಳುತ್ತಾರೆ. ಆದರೆ ಮೂಡಬಿದರೆಯ ಜೈನಸಿದ್ಧಾಂತಭವನದಲ್ಲಿ ರಕ್ಷಿತವಾಗಿರುವ 'ಧವಳ' ಮಹಾಗ್ರಂಥ ಮತ್ತು ಶ್ರವಣಬೆಳಗೊಳದ ಆಗಮದರ್ಶನ ಹಸ್ತಪ್ರತಿಭಂಡಾರದಲ್ಲಿರುವ ಯತಿವೃಷಭನ 'ತಿಲೋಯಪಣ್ಣತ್ತಿ' ಗ್ರಂಥಗಳು ಮಸಿಯನ್ನುಪಯೋಗಿಸಿ ಲೇಖನಿಯಿಂದ ಬರೆದುವಾಗಿವೆಯೆಂಬುದು ಅವರ ಗಮನಕ್ಕೆ ಬಂದಂತೆ ಕಾಣುವುದಿಲ್ಲ.

ಈ ಮಸಿಯನ್ನು ರಾಗಿ, ಅಳಲೆಕಾಯಿ, ಅನ್ನಭೇದಿ ಮೊದಲಾದ ವಸ್ತುಗಳಿಂದ ತಯಾರಿಸುತ್ತಿದ್ದರೆಂಬುದು ತಿಳಿದುಬರುತ್ತದೆ. ಇದರ ಉಪಯೋಗವೂ ಸಾಕಷ್ಟು ಪ್ರಾಚೀನವಾಗಿದೆ. 'ಗದಾಯುದ್ಧ'ದಲ್ಲಿ ಬರುವ 'ಶರಮೊಂದಂ ತೆಗೆದು ನಿಜೋದರದಿಂ ಲೆಕ್ಕಣಿಕೆಮಾಡಿ ಗಜಮದಮಸಿಯಂ ತರಿಸಿ ಪತಾಕಾಪಟದೊಳ್ ಬರೆದಟ್ಟಿದನ್' (೬-೨) ಎಂಬ ವಾಕ್ಯದಿಂದಲೂ, 'ವೊಡ್ಡಾರಾಧನೆ'ಯಲ್ಲಿ ಉದ್ಧೃತವಾಗಿರುವ 'ಉಪಾಧ್ಯಾಯಂ ಶಾಲಿ ಕೂರಂ ಚ ಮಶೀಘೃತಂ ಚ ದತ್ವಾ ಕುಮಾರಮಧ್ಯಾಪಯೇತ್' ಎಂಬುದರಿಂದಲೂ ಈ ವಿಷಯ ವಿಶದವಾಗುತ್ತದೆ. ಮಸಿಯಲ್ಲಿ ಅದ್ದಿ ಬರೆಯಲು ಲಾಳದ ಕಡ್ಡಿ, ಮುಳ್ಳುಹಂದಿಯ ಮುಳ್ಳು, ಬಿದಿರಿನ ಸೀಳು, ನವಿಲುಗರಿಯ ಕಾಂಡ ಮೊದಲಾದುವನ್ನು ಬಳಸುತ್ತಿದ್ದರು ಎಂದು ಡಿ.ಎಲ್.ಎನ್. ಅವರು ವಿವರಿಸುತ್ತಾರೆ.

ಅಚ್ಚಿನ ಸಾಲಭ್ಯವಿಲ್ಲದಿದ್ದ ಕಾಲದಲ್ಲಿ ಈ ಹಸ್ತಪ್ರತಿಗಳಲ್ಲಿ ಲಿಖಿತವಾದ ಕೃತಿಗಳನ್ನು ತಮಗೆ ಬೇಕಾದ ವಿದ್ವಾಂಸರು ಪ್ರತಿ ಮಾಡಿಕೊಳ್ಳುತ್ತಿದ್ದರು; ಇಲ್ಲವೆ ಮಾಡಿಸಿಕೊಳ್ಳುತ್ತಿದ್ದರು.

---

1. ಕ. ಗ್ರಂ. ಸಂ. ; ಪು. ೪೧-೪೨

ನ ಧರ್ಮಾದಿಗಳ ಮೂಲಕವಾಗಿಯೂ ಒಂದು ಕೃತಿಯ ಹಲವಾರು ಪ್ರತಿಗಳು ಖಿತವಾಗಿರುವುದುಂಟು. ದಾನಚಿಂತಾಮಣಿ ಎಂದು ಪ್ರಸಿದ್ಧಳಾದ ಅತ್ತಿಮಬ್ಬೆಯು ನ್ನನ 'ಶಾಂತಿಪುರಾಣ'ದ ಒಂದು ಸಾವಿರ ಪ್ರತಿಗಳನ್ನು ಓಲೆಗಳಲ್ಲಿ ಪ್ರತಿ ಮಾಡಿಸಿದುದು ದಿಗೂ ಒಂದು ದಾಖಲೆಯಾಗಿ ಉಳಿದಿದೆ.

ಹೀಗೆ ಹಸ್ತಪ್ರತಿಗಳನ್ನು ತಯಾರಿಸಲು ವ್ಯಕ್ತಿನಿರತ ಪ್ರತಿಕಾರರೇ ಇರುತ್ತಿದ್ದರು. ವರಲ್ಲಿ ಕೆಲವರು ಉದರಪೋಷಣೆಗಾಗಿ ಈ ವೃತ್ತಿಯನ್ನು ಅವಲಂಬಿಸಿದ್ದರೆ ಮತ್ತೆ ವರು ಆತ್ಮೋದ್ಧಾರಕ್ಕಾಗಿ, ಮೋಕ್ಷಚಿಂತನೆಯಿಂದ ಈ ಕಾರ್ಯಮಾಡಿರುವುದನ್ನು ವು ಹಸ್ತಪ್ರತಿಗಳಲ್ಲಿ ದಾಖಲಿಸಿದ್ದಾರೆ.

ಲಿಪಿಕಾರರೆಲ್ಲರೂ ಸಾಮಾನ್ಯವಾಗಿ ಪ್ರತಿಮಾಡುವುದಕ್ಕೆ ಮೊದಲು ತಮ್ಮ ಇಷ್ಟ ವವನ್ನು ನೆನೆದು ಆ ಹೆಸರನ್ನು ದಾಖಲಿಸಿರುವುದುಂಟು. ಹೀಗೆ ತಮ್ಮ ತಮ್ಮ ಇಷ್ಟದೈವದ ಸರುಗಳನ್ನು ಹೇಳುವುದರಿಂದ ಜೈನ, ವೀರಶೈವ, ಬ್ರಾಹ್ಮಣಕೃತಿ ಎಂಬ ತಿಳಿವು ೊದಲಿಗೇ ಆಗುತ್ತದೆ. ಹಾಗಾಗಿ 'ಶ್ರೀಮತ್ಪಂಚಪರಮೇಷ್ಠಿನೇ ನಮಃ, ಶ್ರೀಮತ್ಪಂಚಗುರು ್ಯೋ ನಮಃ, ಶ್ರೀ ವೀತರಾಗಾಯ ನಮಃ 'ಮೊದಲಾದ ಮಾತುಗಳಿಂದ ಇದು ಜೈನಸಾಹಿತ್ಯ ತಿ ಎಂದು ಖಚಿವಾಗುತ್ತದೆ. 'ಶ್ರೀ ಗುರುಬಸವಲಿಂಗಾಯ ನಮಃ' ಮೊದಲಾದ ರವಣಿಗೆಯಿದ್ದರೆ ವೀರಶೈವ ಕೃತಿ ಮತ್ತು 'ಶ್ರೀಮತೇ ರಾಮಾನುಜಾಚಾರ್ಯ ನಮಃ, ೀ ಗಣಾಧಿಪತಯೇ ನಮಃ' ಮೊದಲಾದ ಮಾತುಗಳಿಂದ ವೈದಿಕಕೃತಿ ಎಂಬ ರಿವುಂಟಾಗುತ್ತದೆ. ಇದೂ ಅಲ್ಲದೆ 'ಶ್ರೀಮತ್ಕನಕಾಚಲದ ಗುಂಡಿನ ಬ್ರಹ್ಮದೇವಾಯ ಮಃ' ಎಂಬುದು ಮಲೆಯಯೂರಿನ ಕನಗಿರಿಯ ಬ್ರಹ್ಮದೇವನನ್ನು ಹೆಸರಿಸಿ, ಇದು ನಕೃತಿ ಎಂಬುದು ತಿಳಿಯುವುದಲ್ಲದೆ ಲಿಪಿಕಾರನ ಪ್ರಾದೇಶಿಕತೆಯನ್ನೂ ಸೂಚಿಸುತ್ತದೆ. ್ರೀ ಜಯಾಭ್ಯುದಯ ಶಾಲಿವಾಹನ ಶಕವರ್ಷ ೧೯೪೧ ಶುಕ್ಲಸಂವತ್ಸರದ ್ವೀಜಮಾಸದ ಕೃಷ್ಣಪಕ್ಷದ ದಶಮಿ ಬುಧವಾರದಲ್ಲಿ ವಟಗ್ರಾಮದ ಮಾಣಿಕ್ಯಸ್ವಾಮಿಯ ತ್ಯಾಲಯದಲ್ಲಿ ಶ್ರೀ ಮಲ್ಲಕ್ಷ್ಮೀಸೇನ ಭಟ್ಟಾರಕದೇವರುಗಳ ಪ್ರಿಯಾಗ್ರಶಿಷ್ಯರು ಯಣ್ಣಗಳು.........." ಬರೆದು ಮುಗಿದುದಕ್ಕೆ ಮಂಗಳ ಮಹಾಶ್ರೀ" ಎಂದು ಗವರ್ಮನ ವರ್ಧಮಾನ ಪುರಾಣದ ಅಂತ್ಯದಲ್ಲಿ ಹೇಳಿರುವುದು ಕವಿ ಕೃತಿ ಲಿಪಿಕಾರರ ವರಗಳನ್ನು ನೀಡುವುದಲ್ಲದೆ ಅದು ಪ್ರತಿಯಾದ ಸ್ಥಳ, ಕಾಲ ಮೊದಲಾದ ವಿವರಗಳನ್ನೂ ಡುತ್ತದೆ. ಯಾವುದೇ ಗ್ರಂಥದಲ್ಲಿನ ಇಂತಹ ಬರವಣಿಗೆಗಳು ಬಹು ಉಪಯುಕ್ತ ಾಹಿತಿಯನ್ನು ಒದಗಿಸುತ್ತವೆ.

ಹಸ್ತಪ್ರತಿ ಸ್ವರೂಪ ಮತ್ತು ವಿಂಗಡಣೆ

ಹಸ್ತಪ್ರತಿಗಳ ಬರವಣಿಗೆ, ಲಿಪಿಕಾರರ ಆದರ್ಶತೆ, ತೋರಿಸಿರುವ ಕೈಚಳಕ ಹಾಗೂ ಹಸ್ತಪ್ರತಿಗಳ ವಿಂಗಡಣೆಯ ಬಗೆಗೆ ಇಲ್ಲಿ ವಿವೇಚಿಸುವುದು ವಿಹಿತವೆಂದು ಭಾವಿಸಿದ್ದೇನೆ. 'ವೀರನಾರಾಯಣನೆ ಕವಿ ಲಿಪಿಕಾರ ಕುವರವ್ಯಾಸ' ಎಂದು ಕುಮಾರವ್ಯಾಸ ಅಥವಾ ಗದುಗಿನ ನಾರಾಣಪ್ಪ ಹೇಳುವಂತೆ ಸ್ವತಃ ಕವಿಗಳೇ ಲಿಪಿಕಾರರಾಗಿರುವುದುಂಟು. ಆದರೆ ಹೀಗೆ ತಮ್ಮ ಗ್ರಂಥಗಳನ್ನು ತಾವೇ ಲಿಖಿಸಿದಂತಹ ಕವಿಗಳು ತಮ್ಮ ತಮ್ಮ ಕೃತಿಗಳ ಒಂದೊಂದು ಪ್ರತಿಗೆ ಮಾತ್ರ ಲಿಪಿಕಾರರಾಗಿದ್ದಾರೆ. ಇಂತಹ ಹಸ್ತಪ್ರತಿಗಳು ೧೯ನೆಯ ಶತಮಾನದ ಕೊನೆಯವರೆಗೂ ನಮಗೆ ದೊರೆತಿರುವುದಿಲ್ಲ; ಬೇರೆ ಲಿಪಿಕಾರರಿಂದ ಆದ ಪ್ರತಿಗಳು ಮಾತ್ರ ಲಭ್ಯವಾಗಿವೆ. ರಚನೆಯಾದ ಗ್ರಂಥಗಳನ್ನು ಆಸಕ್ತರು ಪ್ರತಿ ಮಾಡಿಸಿಕೊಳ್ಳುತ್ತಿದ್ದುದಲ್ಲದೆ ಶಾಸ್ತ್ರದಾನದಿಂದಲೂ ಪ್ರತಿಗಳು ಹುಟ್ಟಿಕೊಂಡುವು. ೧೦ನೆಯ ಶತಮಾನದಲ್ಲಿದ್ದ ಪೊನ್ನನ 'ಶಾಂತಿನಾಥ ಪುರಾಣ'ದ ಒಂದು ಸಾವಿರ ಹಸ್ತಪ್ರತಿಗಳನ್ನು ಮಾಡಿಸಿದ ಅತ್ತಿಮಬ್ಬೆಯ ಆಶ್ರಯದಲ್ಲಿ ಅದೆಷ್ಟು ಜನ ಲಿಪಿಕಾರರು ಕೆಲಸಮಾಡಿರಬಹುದು. ಹೀಗಾಗಿ ಹವ್ಯಾಸಿ ಲಿಪಿಕಾರರಲ್ಲದೆ ವೃತ್ತಿನಿರತ ಲಿಪಿಕಾರರೂ ಇದ್ದರು. ಲಿಪಿಕಾರವೃತ್ತಿಯನ್ನೇ ಅವಲಂಬಿಸಿದ್ದ ಕೆಲವರು ಅದರಿಂದಲೇ ತಮ್ಮ ಜೀವನವನ್ನು ನಡೆಸುತ್ತಿದ್ದರೆಂದು ತೋರುತ್ತದೆ. ಇವರ ಜತೆಗೆ ನಿಯುಕ್ತ ಲಿಪಿಕಾರರು ಇರುತ್ತಿದ್ದರು. ಆದುದರಿಂದಲೇ ಒಬ್ಬರೇ ಪ್ರತಿ ಮಾಡಿದ ಹಲವು ಗ್ರಂಥಗಳು ನಮಗೆ ದೊರೆಯುತ್ತವೆ.

ಕನ್ನಡ ಲಿಪಿಗಳು ಕಾಲಕಾಲಕ್ಕೆ ಬರವಣಿಗೆಯ ರೂಪದಲ್ಲಿ ಬದಲಾಗಿರುವುದುಂಟು. ಅಲ್ಲದೆ ಬರೆಯುವಾಗ ಆಯಾ ಪ್ರಾಂತೀಯ ವಿಭಾಗದಲ್ಲಿ ರೂಢಿಯಲ್ಲಿದ್ದಂತೆ, ಗುರುಗಳು ಕಲಿಸಿದ ರೀತಿಯಲ್ಲಿ ಒತ್ತಕ್ಷರಗಳನ್ನೂ ಹ್ರಸ್ವ ದೀರ್ಘಗಳನ್ನೂ ಬಳಸಿರುವುದುಂಟು. ಕರಾವಳಿ ಪ್ರದೇಶಗಳಲ್ಲಿ ಕೆಲವು ಅಕ್ಷರಗಳ ರೂಪ ಬದಲಾದರೆ, ಉತ್ತರ ಕರ್ಣಾಟಕದಲ್ಲಿ ಮತ್ತೆ ಕೆಲವು ಬದಲಾವಣೆಗಳಾಗಿವೆ. ಈ ಎಲ್ಲವನ್ನೂ ಆಯಾ ಸನ್ನಿವೇಶಕ್ಕೆ ಅರ್ಥಕ್ಕೆ ಅನುಸಾರವಾಗಿ ಓದಿಕೊಳ್ಳಬೇಕಾಗುತ್ತದೆ.

ಗುಂಡಾಗಿ ಮುದ್ದಾಗಿರುವ ಅಕ್ಷರಗಳಂತೆಯೇ ಕೋಳಿಗೀಚಿದಂತೆ ಬರೆದ, ಓದಲು ಕಷ್ಟವಾದ ಮೋಡಿ ಅಕ್ಷರಗಳೂ ಇವೆ. ಹಾಗೆಯೆ ದೊಡ್ಡ ಅಕ್ಷರಗಳಿಂದ ಅತಿ ಕ್ಷ್ಮಲಿಪಿಯನ್ನು ಹೊಂದಿರುವ ಹಸ್ತಪ್ರತಿಗಳೂ ಇವೆ. ಕ್ರಿ.ಶ. ೧೨೩೫ರಲ್ಲಿದ್ದ ಾವರ್ಮನ 'ಪುಷ್ಪದಂತ ಪುರಾಣ'ದ ೨೨.೧ ಇಂಚು ಉದ್ದದ ಓಲೆಯ ಒಂದು ಕ್ತಿಯಲ್ಲಿ ಸರಾಸರಿ ೧೧೫ ಅಕ್ಷರಗಳಿದ್ದು ಗುಂಡಾಗಿ ಸ್ಫುಟವಾಗಿವೆ. ಇದನ್ನು ಶಕ ೫೮ (ಕ್ರಿ.ಶ. ೧೪೩೬)ರಲ್ಲಿ ಪ್ರತಿ ಮಾಡಲಾಗಿದೆ. ಹಾಗೆಯೇ ಸುಲಭವಾಗಿ ಓದಲು ಧ್ಯವಾಗದಂತಹ ಕೆಲವು ಬರಹಗಳೂ ಇವೆ. ಮೋಡಿಲಿಪಿ ಎಂಬಂತಹ ಬರವಣಿಗೆಯನ್ನು ೧೬೮೫ರಲ್ಲಿ ಪ್ರತಿ ಮಾಡಿದ 'ಕೆಳದಿನೃಪ ವಿಜಯ' (ಕನ್ನಡ ಅಧ್ಯಯನ ಸಂಸ್ಥೆ, ಸೂರು) ದಂತಹ ಕಾಗದದ ಹಸ್ತಪ್ರತಿಗಳಲ್ಲಿಯೂ ಕಾಣಬಹುದು. ಪ್ರಾಚ್ಯವಿದ್ಯಾ ಶೋಧನಾಲಯದಲ್ಲಿರುವ 'ದೇವೀಸ್ತೋತ್ರ' ಮತ್ತು ರಾಮಾಯಣದ 'ಸುಂದರ ಕಾಂಡ' ಸ್ತಪ್ರತಿಗಳು ಸೂಕ್ಷ್ಮಲಿಪಿಗೆ ಪ್ರಸಿದ್ಧವಾಗಿವೆ. 'ದೇವೀಸ್ತೋತ್ರ'ದ ೨.೫ ಇಂಚು ವಣಿಗೆಯ ಅಳತೆಯಲ್ಲಿ ೨೫ ಅಕ್ಷರಗಳನ್ನು ಕೊರೆದಿದ್ದಾರೆ ; ೨.೫ ಇಂಚು ಅಗಲದಲ್ಲಿ -೨೩ ಪಂಕ್ತಿಗಳಿವೆ. ಇದು ತೆಲುಗು ಲಿಪಿಯಲ್ಲಿದೆ. 'ಸುಂದರಕಾಂಡ'ದ ಪ್ರತಿಪತ್ರ ೫x೧.೭೫ ಇಂಚು ಅಳತೆಯಲ್ಲಿ ೨೧-೨೫ ಸಾಲುಗಳೂ ಪ್ರತಿ ಸಾಲಿನಲ್ಲಿ ಸರಾಸರಿ ಅಕ್ಷರಗಳೂ ಇವೆ. ಇವುಗಳ ಜತೆಗೆ ಇದೇ ಮಾದರಿಯಲ್ಲಿ ಬರೆದಿರುವ, ಹೆಸರು ಯದ ಯಾವುದೋ ಗ್ರಂಥದ ಒಂದು ಓಲೆ ಮಾತ್ರ ದೊರೆತಿರುವ ೧೮x೧.೨೫ ಚು ಅಳತೆಯಲ್ಲಿ ೨೨ ಪಂಕ್ತಿಗಳೂ ೪೨೦ ಅಕ್ಷರಗಳೂ ಇವೆ ಎಂದಾಗ ಬೆರಗು ಟ್ಟಿ ಕುತೂಹಲವಾಗುವುದು ಸಹಜವಾಗಿದೆ.

ಇವೇ ಅಲ್ಲದೆ ನಕಲುಗಳನ್ನು ಮಾಡುವಾಗ್ಗೆ ವಿವಿಧ ಪ್ರತಿಕಾರರು ಭಿನ್ನ ಭಿನ್ನ ತಿಯಲ್ಲಿ ಬರವಣಿಗೆ ಮಾಡಿದ್ದಾರೆ. ಆಯಾ ಭಾಷಾ ಗ್ರಂಥಗಳಿಗೆ ಆಯಾ ಭಾಷಾ ಯನ್ನೇ ಸಾಮಾನ್ಯವಾಗಿ ಉಪಯೋಗಿಸಿದರೂ ಓದುಗರ ಇಚ್ಛೆಗೆ ಅನುಸಾರವಾಗಿ, ಯಾ ಪ್ರಾಂತ್ಯದ ವಿಭಾಗದ ಜನರ ರೂಢಿಗೆ ತಕ್ಕಂತೆ ಕನ್ನಡ, ತೆಲುಗು, ತುಳು, ತಿಗಳಾರಿ, ಗರಿ, ನಂದಿನಾಗರಿ, ಗ್ರಂಥ ಮೊದಲಾದ ಹಲವಾರು ಲಿಪಿಗಳನ್ನು ಕನ್ನಡ, ಸಂಸ್ಕೃತ ್ಲ ಭಾಷೆಯ ಗ್ರಂಥಗಳಲ್ಲೂ ಬಳಸಿರುವುದು ಕಂಡುಬರುತ್ತದೆ. ಕನ್ನಡ ಅಧ್ಯಯನ ಸ್ಥೆಯಲ್ಲಿರುವ 'ಕರ್ಣಾಟಕ ಭಾಷಾಭೂಷಣ' ಹಸ್ತಪ್ರತಿಯು ಈ ಮಾದರಿಗೆ ಅತ್ಯಂತ ತ್ತಮ ನಿದರ್ಶನವಾಗಿದೆ. ಇದರಲ್ಲಿ ನೋಡುವುದು ಮಲೆಯಾಳಿ ಲಿಪಿಯನ್ನು, ಓದುವುದು ಸ್ಕೃತ ಭಾಷೆಯನ್ನು, ತಿಳಿಯುವುದು ಕನ್ನಡ ವ್ಯಾಕರಣವನ್ನು ಎಂದಾಗ ಹಲವರು

ಆಶ್ಚರ್ಯಪಡುವುದು ಸಹಜವಾಗಿದೆ.

ಇದರ ಜೊತೆಗೆ ಕೆಲವು ಹಸ್ತಪ್ರತಿಗಳ ವಿವಿಧ ರೀತಿಯ ಬರವಣಿಗೆಗಳಿಂದ ಚಿತ್ರಗಳಿಂದ ಅಲಂಕೃತವಾಗಿರುವುದುಂಟು. ಅಕ್ಷರಗಳನ್ನೇ ಸಾಲಂಕೃತವಾಗಿ ಮಾಡುವುದು, ಪುಟಪುಟಕ್ಕೂ ಸುಂದರ ಚೌಕಟ್ಟನ್ನು, ಕಟ್ಟುವುದು, ವಿಷಯಕ್ಕೆ ತಕ್ಕಂತೆ ಚಿತ್ರಗಳನ್ನು ಬಿಡಿಸುವುದು, ಮೇಲು ಹೊದಿಕೆಯನ್ನು ರೇಖಾ ಹಾಗೂ ವರ್ಣಚಿತ್ರಗಳಿಂದ ಅಲಂಕರಿಸುವುದು ಲಿಪಿಕಾರರ ಕಲಾಕೌಶಲಕ್ಕೆ ನಿದರ್ಶನವಾಗಿವೆ. ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ರಾಜನೀತಿಗಳನ್ನೊಳಗೊಂಡ ಕೆಲವು ಪತ್ರಗಳಲ್ಲಿ ವಿವಿಧ ರೀತಿಯ ಸಾಲುಜೋಡಿಗಳನ್ನು ನೋಡಬಹುದು. ವಿವಿಧ ದಿಕ್ಕುಗಳಿಂದ ಓದಬಹುದಾದ ಈ ಬರೆಹ ಚಮತ್ಕಾರಯುಕ್ತವಾಗಿದೆ.

ಏಳು ಸಾವಿರ ವರ್ಷದವೆಂದು ಹೇಳುವ ಈಜಿಪ್ಟಿನ ಪಪೈರಸ್ ಸುರುಳಿಗಳು ರೇಖಾ ಹಾಗೂ ಜಲವರ್ಣಚಿತ್ರಗಳನ್ನೊಳಗೊಂಡಿವೆ. ಕ್ರಿ.ಶ. ೪ನೆಯ ಶತಮಾನದ ರೋಮನ್ ಪ್ರತಿ ಹೋಮರನ 'ಇಲಿಯಡ್' ಕಾವ್ಯ ಅಮ್ಬ್ರೋಸಿಯಾನ ಗ್ರಂಥಾಲಯದಲ್ಲಿದೆ. ಇದರಲ್ಲಿ ೫೨ ವರ್ಣಾಲಂಕೃತ ಚಿತ್ರಗಳಿವೆ. ಇದೇ ಕಾಲದ ಇನ್ನೊಂದು ರೋಮನ್ ಪ್ರತಿಯೆಂದರೆ ವರ್ಜಿಲ್ ಆಫ್ ದಿ ವ್ಯಾಟಿಕನ್.

ಈಗ ತಿಳಿದುಬರುವಂತೆ ಓಲೆಯ ಅತ್ಯಂತ ಹಳೆಯ ಚಿತ್ರಾಲಂಕೃತ ಹಸ್ತಪ್ರತಿಯೆಂದರೆ ೧೯೬೨ರಲ್ಲಿ ನ್ಯೂಯಾರ್ಕ್ ನಗರದಲ್ಲಿ ಪ್ರದರ್ಶಿತವಾದ ಸಂಸ್ಕೃತ ಗ್ರಂಥ. ಇದು ಬೌದ್ಧರ ಪ್ರಾರ್ಥನಾಗೀತೆಗಳನ್ನೊಳಗೊಂಡಿದ್ದು ಚಿತ್ರಗಳು ಅಜಂತ ಕಲೆಯನ್ನು ಹೋಲುತ್ತವೆಂದು ಹೇಳುತ್ತಾರೆ. ಈಗ ಕರ್ನಾಟಕದಲ್ಲಿಯೇ ದೊರೆಯುವ ಮತ್ತೊಂದು ಪ್ರತಿಯೆಂದರೆ ಸು. ೧೧ನೇ ಶತಮಾನದಲ್ಲಿ ಲಿಖಿತವಾಗಿರುವ 'ಧವಳ' ಮಹಾಗ್ರಂಥ. ಇದರಲ್ಲಿ ಧವಳ ಜಯಧವಳ, ಮಹಾಧವಳವೆಂಬ ಮೂರು ಭಾಗಗಳಿದ್ದು ಮೂರರಲ್ಲಿಯೂ ಕ್ರಮವಾಗಿ ೭೭೭, ೫೧೮, ೨೧೯ ಓಲೆಗಳಿವೆ. ಅರ್ಧಮಾಗಧಿ ಭಾಷೆಯಲ್ಲಿ ರಚಿತವಾಗಿ ಕನ್ನಡ ಲಿಪಿಯಲ್ಲಿ ಮೂರ್ತಿಭವಿಸಿರುವ ಈ ಪ್ರತಿಯಲ್ಲಿ ಕಾಲನಮೂದಿತಭಾಗವನ್ನು ಅಳಿಸಲಾಗಿದೆ. ಇದರ ಉದ್ದೇಶ ಅವ್ಯಕ್ತವಾಗಿದ್ದರೂ ಲಿಪಿಯ ವೈಶಿಷ್ಟ್ಯದಿಂದ ಇದು ಪ್ರಾಚೀನವಾದುದೆಂದು ಒಪ್ಪಬಹುದಾಗಿದೆ. ಮೂಡಬಿದರೆಯಲ್ಲಿ ಸಿದ್ಧಾಂತ ದರ್ಶನಕ್ಕೆ ಮೀಸಲಾಗಿರುವ ಈ ಗ್ರಂಥದಲ್ಲಿ ಅತ್ಯುತ್ತಮ ರೇಖಾ ಹಾಗೂ ವರ್ಣರಂಜಿತ ಚಿತ್ರಗಳಿವೆ. ಇದರ ಮೈಕ್ರೊಫಿಲಂ ಪ್ರತಿ ಪ್ರಾಚ್ಯವಿದ್ಯಾಸಂಶೋಧನಾಲಯದಲ್ಲಿದ್ದರೂ ಇದರಲ್ಲಿ ಚಿತ್ರಗಳು ಕಪ್ಪು-ಬಿಳುಪು ಮಾತ್ರವಾಗಿವೆ. ಇಲ್ಲಿನ ಜೈನಧರ್ಮಶಾಲೆಯಲ್ಲಿರುವ

ತ್ತೊಂದು ರೇಖಾಚಿತ್ರಗಳಿರುವ ಹಸ್ತಪ್ರತಿಯೆಂದರೆ ನೇಮಿಚಂದ್ರನ ೀಮಿನಾಥಪುರಾಣ'.[1] ಈ ಚಿತ್ರಗಳನ್ನು ವಿಷಯಕ್ಕೆ ತಕ್ಕಂತೆ ಮಧ್ಯೆ ಮಧ್ಯೆ ಲೆಗಳಲ್ಲಿ ಕೊರೆಯಲಾಗಿದೆ. ಕ.ಅ. ಸಂಸ್ಥೆಯಲ್ಲಿರುವ 'ವೀರಶೈವಾಮೃತ ಮಹಾಪುರಾಣ' ಲೆಪ್ರತಿಯಲ್ಲಿ ಹಲವಾರು ರೇಖಾಚಿತ್ರಗಳನ್ನು ಬಿಡಿಸಲಾಗಿದೆ. ಮತ್ತೂ ಕೆಲವು ತ್ರಾಲಂಕೃತ ಓಲೆಗ್ರಂಥಗಳು ಕನ್ನಡ ಅಧ್ಯಯನ ಸಂಸ್ಥೆ ಮತ್ತು ್ರಚ್ಯವಿದ್ಯಾಸಂಶೋಧನಾಲಯದಲ್ಲಿವೆ.

ಕಾಗದ ಬಳಕೆಗೆ ಬಂದಮೇಲೆ ಕ್ರಿ.ಶ. ೧೫೫೦ರಲ್ಲಿ ಬರೆದ ಜೈನ ುಮಾವಳಿಗಳನ್ನೊಳಗೊಂಡ 'ಕಲ್ಪಸೂತ್ರ' ಕಾಗದದ ಹಸ್ತಪ್ರತಿಯಲ್ಲಿ ಪಶ್ಚಿಮ ದೇಶದ ಖಾವಿನ್ಯಾಸಗಳುಳ್ಳ ಭಾರತೀಯ ಚಿತ್ರಗಳಿವೆ. ೧೬ನೇ ಶತಕದಲ್ಲಿ ಅಕ್ಬರನಿಗಾಗಿ ಚಿತವಾದ 'ಅಬ್ದುಲ್ ರಹೀಮ್' ಗ್ರಂಥವು ೩೬ ಚಿತ್ರಗಳಿಂದ ಕೂಡಿದೆ. ಕ್ರಿ.ಶ. ೬೭೭ರಲ್ಲಿ ಪ್ರಸಿದ್ಧ ಕನ್ನಡ ಲಿಪಿಕಾರ ಪಾಯಣ್ಣನಿಂದ ನಕಲಾದ ೨ನೆಯ ನಾಗವರ್ಮನ ರ್ಧಮಾನ ಪುರಾಣ'ದಲ್ಲಿ ಕೆಲವು ವರ್ಣರಂಜಿತ ಹಾಳೆಗಳನ್ನು ನೋಡಬಹುದು. ೫೫೦ರಲ್ಲಿ ಮುಮ್ಮಡಿ ಕೃಷ್ಣರಾಜರ ಕಾಲದಲ್ಲಿ ರಚಿತವಾದ 'ಶ್ರೀತತ್ವನಿಧಿ' ಹಸ್ತಪ್ರತಿಯು ಸಾವಿರ ವರ್ಣಚಿತ್ರಗಳನ್ನೂ ಹಲವಾರು ರೇಖಾಚಿತ್ರಗಳನ್ನೂ ಒಳಗೊಂಡಿದ್ದು ಬಹು ಸಿದ್ಧಿಯನ್ನು ಪಡೆದಿದೆ. ಕ.ಅ. ಸಂಸ್ಥೆಯಲ್ಲಿರುವ 'ಚದುರಂಗ ಚಕ್ರ' ಹಸ್ತಪ್ರತಿಯಲ್ಲಿ ಗಡೆ, ಚದುರಂಗ, ಗಂಜೀಪು ಮೊದಲಾದುವುಗಳ ಬಣ್ಣದ ಚಿತ್ರಗಳೂ ಅವುಗಳ ವರಣೆಯೂ ಇದೆ. ಇಲ್ಲಿಯೇ ಇರುವ 'ಅಶ್ವಪರೀಕ್ಷೆ' ಎಂಬ ಹಸ್ತಪ್ರತಿಯಲ್ಲಿ ವಿವಿಧ ತಿಯ ಕುದುರೆಗಳು, ಅವುಗಳ ಲಕ್ಷಣಗಳು ಇತ್ಯಾದಿ ವಿವರಗಳನ್ನು ೧೦೫ ಕುದುರೆಗಳ ರ್ಣರಂಜಿತ ಚಿತ್ರಗಳೊಡನೆ ನೀಡಲಾಗಿದೆ. ಇದರಲ್ಲಿ ೨೦೩ ಕುದುರೆಗಳ ವಿವರಣೆಯಿದೆ. ಿಯ ಲಿಂಗರಾಜನ 'ಪ್ರಭಾವತೀ ಪರಿಣಯ' ಓಲೆ ಪ್ರತಿಯನ್ನು ಇಟ್ಟಿರುವ ಬೀಟೆಮರದ ಟ್ಟಿಗೆ ಮತ್ತು ಅದರ ಮೇಲಣ ದಂತದ ಕೆತ್ತನೆಯ ಕೆಲಸ ತುಂಬಾ ಸೊಗಸಾಗಿದೆ. ಮಕವಿಯ 'ಬಸವಪುರಾಣ'ದ ಹಸ್ತಪ್ರತಿಯೊಂದರಲ್ಲಿ ಪ್ರತಿ ಪುಟವನ್ನೂ ವಿವಿಧ ್ಯಾಸದ ಬಣ್ಣದ ಚೌಕಟ್ಟುಗಳಿಂದ ಅಲಂಕರಿಸಿರುವುದು ಶ್ಲಾಘನೀಯವಾಗಿದೆ. ಇದರ ಾರ ರಕ್ಷಣಾ ಹಲಗೆಗಳ ಮೇಲಿರುವ ವರ್ಣರಂಜಿತ ಚಿತ್ರಗಳು ಸುಂದರವಾಗಿವೆ. ತ್ತೀಚೆಗೆ ಬೆಳಗಾಂ ಪ್ರದೇಶದಿಂದ ತೀರ್ಥಂಕರರ ವಿವರಗಳನ್ನೊಳಗೊಂಡ ಒಂದು

1. ಈ ಚಿತ್ರಗಳು 'ನೇಮಿನಾಥಪುರಾಣ' ; ಸಂ. : ಬಿ.ಎಸ್. ಸಣ್ಣಯ್ಯ, ೧೯೬೧, ಇದರಲ್ಲಿ ಕಟವಾಗಿವೆ.

ಕಾಗದದ ಹಸ್ತಪ್ರತಿಯಲ್ಲಿ ೨೪ ತೀರ್ಥಂಕರರ ವರ್ಣರಂಜಿತ ಚಿತ್ರಗಳು ಬಹಳ ಸೊಗಸಿನಿಂದ ಕೂಡಿವೆ. ಇದು ಈಗ ಶ್ರವಣಬೆಳಗೊಳದ ಆಮಗದರ್ಶನ ಗ್ರಂಥಭಂಡಾರದಲ್ಲಿದೆ.

ಹೀಗೆ ವಿವಿಧ ರೀತಿಯ ಬರವಣಿಗೆಯನ್ನೂ ಮತ್ತು ಒಂದೇ ಕೃತಿಯ ಹಲವಾರು ಪ್ರತಿಗಳನ್ನೂ ನಾವು ಕಾಣುತ್ತಿರುವುದು ಗ್ರಂಥಗಳನ್ನು ನಕಲುಮಾಡಿ ಜನರು ಉಪಯೋಗಿಸುತ್ತಿದ್ದುದರಿಂದ. ನಕಲುಗಳನ್ನೆತ್ತಿದ ಕೆಲವು ಪ್ರತಿಕಾರರು ಹಸ್ತಪ್ರತಿಗಳ ಮೊದಲಲ್ಲಿ ತಮ್ಮ ಇಷ್ಟದೈವಗಳನ್ನು ನೆನೆಯುವುದಲ್ಲದೆ, ಕೊನೆಯಲ್ಲಿ ತಮ್ಮ ಪ್ರವರಗಳನ್ನೂ ತಿಳಿಸಿ, ಪ್ರತಿಮಾಡಿದ ಕಾಲನಿರ್ದೇಶನವನ್ನೂ ಮಾಡಿದ್ದಾರೆ; ತಪ್ಪಿದ್ದರೆ ತಿದ್ದಿಕೊಳ್ಳಿರೆಂದು ಪ್ರಾರ್ಥಿಸಿದ್ದಾರೆ. ಇದೆಲ್ಲದಕ್ಕಿಂತಲೂ ಮುಖ್ಯವಾಗಿ ಪ್ರತಿಗಳನ್ನು ಮಾಡುವವರು ಬಹು ಪ್ರಾಮಾಣಿಕರಾಗಿರಬೇಕು; ಇಲ್ಲದಿದ್ದಲ್ಲಿ ಮೂಲ ಉದ್ದೇಶವೇ ಈಡೇರಿದಂತಾಗುವುದಿಲ್ಲ. ಅತ್ತಿಮಬ್ಬೆಯು 'ಶಾಂತಿನಾಥ ಪುರಾಣ'ದ ಒಂದು ಸಾವಿರ ಪ್ರತಿಗಳನ್ನು ಮಾಡಿಸುವಾಗ್ಗೆ ಲಿಪಿಕಾರರಿಂದ ವಿವಿಧ ರೀತಿಯ ಬರೆಹ ಆಗಿರಬಹುದು. ಆದರೆ ಮೂಲದ ಯಥಾವತ್ತು ನಕಲಾಗುವುದು ಅತ್ಯಂತ ಮಹತ್ತ್ವಪೂರಿತವಾದುದು; ಅಲಸಿಕೆಯವರಾಗಿದ್ದರೆ, ಬೇಗ ಮುಗಿಯಲೆಂದೊ ಅಥವಾ ಅನ್ಯತ್ರ ಯೋಚನೆಯಲ್ಲಿದ್ದೊ ಅಲ್ಲಿ ಇಲ್ಲಿ ಕೆಲವು ಅಕ್ಷರಗಳನ್ನೊ ಪದಗಳನ್ನೊ ಸಾಲುಗಳನ್ನೊ ಬಿಟ್ಟು ಪ್ರತಿಮಾಡಿರುವುದುಂಟು. ಮತ್ತೆ ಕೆಲವರು ತಾವೇ ಪ್ರೌಢರೆಂದು ಬಗೆದು ಮೂಲದಲ್ಲಿರುವುದು ತಪ್ಪೆಂದೆಣಿಸಿ ತಿದ್ದಿ ಬರೆದಿರುವುದೂ, ತಮ್ಮ ಸ್ವಂತ ರಚನೆಗಳನ್ನು ಸೇರಿಸಿರುವುದೂ ಇದೆ. ಇಂತಹ ಎಲ್ಲ ಕ್ಷುಲ್ಲಕ ಕೃತ್ಯಗಳಿಂದ ಪ್ರತಿಕಾರರು ದೂರವಿರುವುದು ಲೇಸು.

ಈ ಬಗೆಯ ಆದರ್ಶ ಎಷ್ಟರಮಟ್ಟಿಗೆ ಈಡೇರಿದೆ ಎಂದು ವಿಮರ್ಶಿಸಿದಾಗ ಕೆಲವರಾದರೂ ಆದರ್ಶ ಪ್ರತಿಕಾರರಾಗಿ ಕಂಗೊಳಿಸಿದ್ದಾರೆ.

ಯಾದೃಶಂ ಪುಸ್ತಕಂ ದೃಷ್ಟ್ವಾ ತಾದೃಶಂ ಲಿಖಿತಂ ಮಯಾ
ಅಬದ್ಧೋ ವಾ ಸುಬದ್ಧೋ ವಾ ಮಮದೋಷೋ ನ ವಿದ್ಯತೇ ||
ತಪ್ಪಂ ಬರೆದವ ಕಡು ಜಡ
ನಪ್ಪಾತಂ ಬರೆದನೆಂದು ಬಯ್ಯಲ್‌ಬೇಡಿಂ
ತಪ್ಪಕ್ಕು ಶುದ್ಧ ಮಕ್ಕುಂ
ತಪ್ಪುಳ್ಳಡೆ ತಿದ್ದಿ ಕೊಂಬುದುತ್ತಮ ಪುರುಷರ್ ||

ಎಂದು ವಿನಂತಿಸಿಕೊಂಡಿರುವುದನ್ನು ನೋಡಿದಾಗ ಮೂಲವನ್ನು ಚಾಚೂ ತಪ್ಪದೆ ನುಸರಿಸಿ ಬರೆಯಬೇಕೆಂಬ ಅವರ ಆಕಾಂಕ್ಷೆ ಹಾಗೂ ಅನವಧಾನದಿಂದ ಆಗುವ ತಪ್ಪಿಗೆ ಮಾಪಣೆ ಕೇಳುವುದು ಉತ್ತಮ ಪ್ರತಿಕಾರರ ಲಕ್ಷಣವಾಗಿದೆ. ಪ್ರತಿಕಾರರಲ್ಲಿಯೂ ಹಾಪ್ರೌಢರೂ ಪ್ರತಿಭಾಸಂಪನ್ನರೂ ಇದ್ದರೆಂಬುದಕ್ಕೆ ಅವರು ಸ್ವವಿಷ ಹೇಳಿಕೊಳ್ಳುವಲ್ಲಿ, ರೆದ ರೀತಿಯನ್ನು ವರ್ಣಿಸುವಲ್ಲಿ ಕಾಣಬಹುದು. 'ವೀರಮಾಹೇಶ್ವರಾಚಾರ ಸಂಗ್ರಹ'ದ ಂದು ಪ್ರತಿಯನ್ನು ಬರೆದ ವಿರಕ್ತ ಅನ್ನದಾನ ದೇವರು ಗ್ರಂಥಾಂತ್ಯದಲ್ಲಿ ಕೊಟ್ಟಿರುವ -

"ಪಡುವಣ ದೆಸೆಯಿಂದೊಪ್ಪುತಿರ್ದ ಲವಣಾಂಬುಧಿಗೆ ಪುರ್ಬುಂ ಪುಟ್ಟಿದ ಂಗಿರ್ದ ಘಟ್ಟದ ಸರೋವರಗಂಗಳಲ್ಲನೇಕ ಪಾದಚರ ಕೆದಜಿದ ಮಂಡೆ ಬಿಂಗದ ರೆಯಂ ತೊಂದಂದಂ ಪೊಂದಿಸಿದಿಕ್ಕೆಲದಲುಭಯಂ ಪಲಗೆಯಷ್ಟಲೋವೆಯಷ್ಟ ೂಲಿಕೆಗಳಿಂದತ್ಯಂತಲಂಕಾರಮಾಗಿ ಕಣ್ಗೆ ಚೆಲ್ವಾಗೊಪ್ಪಲ್ಪಟ್ಟ ದಿವ್ಯ ಶಿವಾಲಯವಂ ರ್ಜಿಸಿದಂತಿರಬಾರದೆಂದು ಬಿಂದು ವಿಸರ್ಗಂ ದಡ್ಡತೆ ಪೊಂದಿತಾವ್ರತೋರ್ಧ್ವ ರೇಫೆ ರ್ಘ ಹ್ರಸ್ವದಿಂದೊಪ್ಪುತ್ತಿರ್ದ ಅಕ್ಷರಮೂರ್ತಿಗಳಂ ಲೇಖನವಂ ಮಾಡೆಂದು ಕ್ಕೆಯನವರು ದಿವ್ಯ ಅಲೇಖಮಂ ಪಟ್ಟಲಜ್ಞಾನಸಂಪನ್ನರಾದ ಅನ್ನದಾನದೇವರ ಸ್ತದಲ್ಲಿ ಪಾಲಿಸಲು ಯಿಂತೀ ಶಿವಗಣಂಗಳ ನಿರೂಪವಂ ಕೈಗೊಂಡು ಬರವುದಕ್ಕೆ ಯನ್ನ ಗಳು ಜಿಹ್ವೆ ಕರ ಕರ್ನಂಗಳು ಗತಿಮಿತಿ ಚೈತನ್ಯಕ್ಕೆ ಸಮಸ್ತ ಸದ್ಭಕ್ತ ವೀರ ಾಹೇಶ್ವರರುಗಳೇ ಕರ್ತರಾದ ಕಾರಣ ಯಿಂತಿವರ ಕರುಣಪ್ರಸಾದಮಂ ಕೈಕೊಂಡು ಈ ರಮಾಹೇಶ್ವರಾಚಾರ ಸಂಗ್ರಹವ ಬರದನಲ್ಲದೆ ನನ್ನಿಚ್ಛೆಯೊಳಂ ನಾ ಬರದುದಿಲ್ಲ ..... ಈ ಪುಸ್ತಕವಂ ಬರದ ಸ್ಥಿತಿಯಂತೆಂದಡೆ ಸ್ವಸ್ತಿಶ್ರೀ ಜಯಾಭ್ಯುದಯ ವಿಧಿಷ್ಟ ವಿಕ್ರಮಶಕಯೊ ದ್ವಿತೀಯ ಶಕ ಸಂದದು ೪೦೦೦ ವರುಷ ಶಾಲಿವಾಹನ ಶಕ ಸಂದದು ೧೮೩ ವರುಷ ಸಂದು ವರ್ತಮಾನದ ಶಾರ್ವರಿಸಂವತ್ಸರದ ಚೈತ್ರಮಾಸದ ಶುಕ್ಲಪಕ್ಷದ ವತಿನಕ್ಷತ್ರದ ಶುದ್ಧ ದಶಮಿ ಶಶಿವಾರದಲು ಬರದ ವಿರಕ್ತ ಅನ್ನದಾನದೇವರು ಕಾರ್ಯ ಚಿಕ್ಕೈಯದೇವಗೆ ನೀಲಕಂಠ ನಾಗನಾಥಾಚಾರ್ಯರು ವಿರಚಿಸಿದಂಥಾ ರಮಾಹೇಶ್ವರಾಚಾರ ಸಂಗ್ರಹವೆಂಬ ಬಾಹುಲ್ಯವಾದ ವ್ಯಾಖ್ಯಾನಶಾಸ್ತ್ರವ ಬರೆದು ಪೂರ್ನವಾಯಿತ್ತು ಯಿಂತೀ ಪುಸ್ತಕಕ್ಕೈಶ್ವರ್ಯಮಸ್ತು ಶುಭಮಸ್ತು ನಿರ್ವಿಘ್ನಮಸ್ತು ಜೀರ್ಣಮಸ್ತು ಆಯುರಾರೋಗ್ಯಮಸ್ತು ಚಂದ್ರಾರ್ಕತಾರಾ ನಭವುಳ್ಳನಕಂ ಯಿಯಸ್ತು

ಭಗ್ನಪೃಷ್ಠ ಕಟಿಗ್ರೀವ ಬದ್ಧದೃಷ್ಟಿರಧೋಮುಖಂ
ಕಷ್ಟೇನ ಲಿಖಿತಂ ಶಾಸ್ತ್ರಂ ಯತ್ನೇನ ಪರಿಪಾಲಯ ||

ಇಂತೆಂದುದಾಗಿ ಈ ಪುಸ್ತಕವಂ ಬರದವರ್ಗಂ ಓದುವರ್ಗಂ ಶಿವಾನುಭವವಂ ನಿರೂಪಿಸುವರ್ಗಂ ಸಹಸ್ರಕೋಟಿ ನಮಸ್ಕಾರವಂ ಮಾಡುತ್ತಿದೇನೆ ಎನ್ನ ಬಿಂನಪವನವಧರಿಸಿಯಿದಂ ಬರದ ನಿಂಮ್ಮ ಕರುಣದ ಕಂದನಿಗೆ ನಿಮ್ಮ ಕೃಪಾಮೃತರಸವನೆಱಿದು ನೋಡಿ ಸಲಹಿ ನಿಮ್ಮ ಶ್ರೀಪಾದಪದ್ಮಾರಾಧನೆಯು ಯೆಂದೆಂದು ಪಿಂಗದಂತೆ ಮಾಡಯ್ಯಾ ಲಿಂಗತಂದೆ ಶರಣು ಶರಣಾರ್ಥಿ."

ಎಂದೆಲ್ಲಾ ಹೇಳುವ ಮಾತುಗಳನ್ನು ನೋಡಿದಾಗ ಪ್ರತಿಕಾರರ ಹೆಗ್ಗಳಿಕೆ, ಬರವಣಿಗೆಯ ಶಕ್ತಿ ಆಸಕ್ತಿ ಶ್ರಮ ಎಲ್ಲವೂ ಮನದಟ್ಟಾಗುತ್ತವೆ; ಅವರ ಬಗೆಗೆ ಅಪಾರ ಗೌರವ ಮೂಡಿಬರುತ್ತದೆ,

ಕೆಲವು ಪ್ರತಿಕಾರರು ಪದ್ಯರಚನೆಯ ಮೂಲಕವೂ ವಿಷಯವನ್ನು ಹೇಳಿರುವುದುಂಟು. ಉದಾಹರಣೆಗಾಗಿ ನೇಮಿಚಂದ್ರನ 'ನೇಮಿನಾಥ ಪುರಾಣ'ದ ಒಂದು ಓಲೆ ಪ್ರತಿಯಲ್ಲಿ ಬರುವ ಈ ಪದ್ಯಗಳನ್ನು ಗಮನಿಸಬಹುದು.

ಬರೆ ಶಾಲೀವಾಹನಂ ಬೇಗದೆ ಶಕವರುಷಂ ಸಾರೆ ಸಂವತ್ಸರಂ ಸಾ
ಸಿರದಾನೂರ್ಱಾಱು ಸಂದೊಪ್ಪುವ ಕಲಿಯುಗ ರಕ್ತಾಕ್ಷಿ ಯಾ ಮಾಘಮಾಸಾ
ಪರಪಕ್ಷಂ ಸಚ್ಚತುರ್ದಶ ಹಿಮಕಿರಣವಾರಂ ಬರಲ್ ಪದ್ಮರಾಜಂ
ಬರೆದತ್ಯಂತಕ್ಕಱಿಂದತ್ಯಧಿಕ ಬಕುತಿಯಿಂ ನೇಮಿಸತ್ಕಾವ್ಯಮಂ ತಾಂ ||೧||

ಅರಿಕುಠಾರದ ಸೂರಿಪಂಡಿತರಾತ್ಮಜಂ ಚಿಕತಮ್ಮನಾ
ವರ ಸುಪುತ್ರನು ಪದ್ಮರಾಜನು ನೇಮಿನಾಥಪುರಾಣಮಂ
ಬರೆದನಿಂತಿದನೋದೆ ಕೇಳ್ದೊಡೆ ಮೋಕ್ಷಮಾರ್ಗದ ಸಂಪದಂ
ಭರದೆ ಸೇರ್ವುದು ಮಾನಸರ್ಗದಱಿತ್ತಣಿಂದವೆ ರಕ್ಷಿಪಂ ||೨||

ಬರೆದಂ ನೇಮಿಪುರಾಣಮಂ ವಿಬುಧರತ್ಯಾನಂದದಿಂದೋದೆ ಕೇ
ಳ್ದರೆ ಪುಣ್ಯಂ ಮುದದಿಂದೆ ಸೇರುವುದು ಮತ್ತಲ್ಲಿ ರ್ದ ದೋಷಂಗಳಂ
ಭರದಿಂ ತಿರ್ದುದನೀಗಳರ್ಕ ಶಶಿತಾರಾಮೊತ್ತಮುಳ್ಳನ್ನ ಸು
ಸ್ಥಿರದಿಂದೊಪ್ಪಲಿ ಧಾತ್ರಿಯಲ್ಲಿ ನಿಜದಿಂ ಭದ್ರಂ ಶುಭಂ ಮಂಗಳಂ ||೩||

ಎಂಬಿತ್ಯಾದಿ ರಚನೆಯಲ್ಲಿ ಪ್ರತಿಕಾರರ ಪ್ರೌಢಿಮೆ ಅರಿವಾಗುತ್ತದೆ. ಹಾಗೆಯೇ ಕವಿಯ

ಾಲ ತಿಳಿಯದಿದ್ದರೆ ಕಾಲಸೂಚಿತ ಪ್ರತಿಯಕಾಲದಿಂದ ಕವಿಯು ಇದಕ್ಕಿಂತ ಿಂದಕ್ಕಿದ್ದನೆಂಬುದು ಖಚಿತವಾಗುತ್ತದೆ. ಕವಿಯ ಕಾಲ ತಿಳಿದಿದ್ದರೆ ಕವಿಗೆ ಎಷ್ಟು ಹತ್ತಿರದ ಾಲದ ಪ್ರತಿಯಿದು ಎಂದು ತಿಳಿಯಬಹುದು.

ಯಾವುದೇ ಗ್ರಂಥದ ಪ್ರತಿ ಕವಿಗೆ ಹತ್ತಿರದಾಗಿದ್ದರೆ ಅಷ್ಟರವಟ್ಟಿಗೆ ಿಶ್ವಾಸಾರ್ಹವೆಂಬುದನ್ನು ಮನಗಾಣಬೇಕು. ಕವಿಗಿಂತ ದೂರದೂರ ಹೋದಂತೆ ಪ್ರತಿ ುರುಪ್ರತಿಗಳಾಗಿ ಹಲವಾರು ಲೋಪದೋಷಗಳುಂಟಾಗುತ್ತವೆ.

ಓಲೆ ಕಾಗದ ಮೊದಲಾದುವುಗಳನ್ನು ಪ್ರತಿ ಮಾಡುವಾಗ ಒಬ್ಬನ ಪಾತ್ರವಿದ್ದರೆ ಶಾಸನದ ವಿಷಯದಲ್ಲಿ ಮೂವರ ಪಾತ್ರವಿರುತ್ತದೆಂಬುದನ್ನು ಡಿ.ಎಲ್. ನರಸಿಂಹಾಚಾರ್ ಅವರು ಪ್ರತಿಪಾದಿಸಿದ್ದಾರೆ. ಸಾಹಿತ್ಯ ರಚಿಸುವವನೊಬ್ಬನಾದರೆ ಶಿಲೆಯ ಮೇಲೋ ಪಟ್ಟದ ಮೇಲೋ ಬರೆಯುವವನೊಬ್ಬ ಮತ್ತು ಅದನ್ನು ಕಂಡರಿಸುವ ಅಥವಾ ಕೆತ್ತುವವನೊಬ್ಬನಾಗುತ್ತಾನೆ. ಧಾರವಾಡಜಿಲ್ಲೆಯ ೯೨೯ರ ಶಾಸನಸಾಹಿತ್ಯವನ್ನು ಶ್ರೀ ವಿಜಯನು ರಚಿಸಿದರೆ, ನಾಗಭಟ್ಟನು ಕಲ್ಲಿನ ಮೇಲೆ ಬರೆದನಂತೆ, ಆಮೇಲೆ ಯಾವನೋ ಒಬ್ಬ ಕಲ್ಕುಟಿಗ ಅದನ್ನು ಕಂಡರಿಸಿರಬೇಕು. ಶಕ ೧೧೧೩ರ ಚನ್ನರಾಯಪಟ್ಟಣದ ೧೭೭೩ನೆಯ ತಾಮ್ರಶಾಸನದ ಅಂತ್ಯದಲ್ಲಿ 'ಜಂನಯ್ಯನ ಕವಿತೆ ದಾವಣ್ಣನ ಬರಹ ಮಲ್ಲೊಜನ ಕಂಡರಣೆ' ಎಂದಿದೆ.

ಇಷ್ಟು ಕಷ್ಟದಿಂದ ತಯಾರಿಸಿದ ಹಸ್ತಪ್ರತಿಗಳನ್ನು ಹೇಗೆ ಕಾಪಾಡಿಕೊಳ್ಳಬೇಕೆಂಬ ಬಗೆಗೂ ಅತೀವ ಕಾಳಜಿ ವಹಿಸಿರುವ ಕೆಲವು ಲಿಪಿಕಾರರು

ತೈಲಾದ್ರಕ್ಷೇತ್ ಜಲಾದ್ರಕ್ಷೇಚ್ಛಿಥಿಲಬಂಧನಾತ್
ಮೂರ್ಖಹಸ್ತೇನ ನ ದಾತವ್ಯಮೇವಂ ವದತಿ ಪುಸ್ತಕಂ

[ನನ್ನನ್ನು ಎಣ್ಣೆಯಿಂದ ರಕ್ಷಿಸಿರಿ, ನೀರಿನಿಂದ ರಕ್ಷಿಸಿರಿ, ಕಟ್ಟು ಸಡಿಲವಾಗದಂತೆ ನೋಡಿಕೊಳ್ಳಿರಿ, ಮೂರ್ಖರ ಕೈಯಲ್ಲಿ ನನ್ನನ್ನು ಕೊಡಬೇಡಿರಿ] ಎಂದು ಪುಸ್ತಕ ಬೇಡಿಕೊಳ್ಳುತ್ತದೆ ಎಂಬಿವೆಲ್ಲಾ ಮಾತುಗಳು ಹಸ್ತಪ್ರತಿಗಳಲ್ಲಿ ಕಂಡುಬರುವುದನ್ನು ನೋಡಿದರೆ ಅವುಗಳ ಸಿದ್ಧತೆಯಲ್ಲಿ ಅನುಭವಿಸುತ್ತಿದ್ದ ಶಾರೀರಕವೇದನೆಗಳು, ಅವುಗಳ ರಕ್ಷಣೆಯಲ್ಲಿ ಪ್ರತಿಕಾರರಿಗಿದ್ದ ಆಸಕ್ತಿ, ಸದುಪಯೋಗವಾಗಬೇಕೆಂಬುದರಲ್ಲಿ ಅವರಿಗಿದ್ದ ಕಳಕಳಿ ಅದೆಷ್ಟು ತೀವ್ರತರವಾದುದು ಎಂಬುದು ವೇದ್ಯವಾಗದಿರದು.

ಲಿಪಿಕಾರರು ಕನ್ನಡಲಿಪಿಯ ಬಗೆಗೆ ಹೊಂದಿದ್ದ ಅನನ್ಯಭಾವನೆ, ಅದರ

ಸೊಗಸುಗಳನ್ನು ಇಮ್ಮಡಿ ಗುಣವರ್ಮನ 'ಪುಷ್ಪದಂತಪುರಾಣ'ವನ್ನು ಪ್ರತಿಮಾಡಿದ ನವಿಲ್ಗುಂದದ ಮಾದಿರಾಜನು

ಬಿಂದುವಿನೊಂದು ಶೋಭೆ ತಲೆಕಟ್ಟಿನ ಪೊರ್ಕುಳಿ ಚೆಲ್ವು ಮಾತ್ರೆಯೊಳ್
ನಿಂದ ಬೆಡಂಗು ಬಳ್ಳಿಯೊಳೊಡಂಬಡುತಿರ್ಪ ನಯಂ ವಿಸರ್ಗದೊ
ಳ್ಪೊಂದಿದಕ್ಕರಕ್ಕೆ ಬರೆವಂ ಚದುರರ್ ಪರಿವರ್ಣಿಸಲ್ ನವಿ
ಲ್ಗುಂದದ ಮಾದಿರಾಜವಿಬುಧಂ ವಿಬುಧೋದಿತ ನವ್ಯಕಾವ್ಯಮಂ ||

ಎಂದು ಹೇಳಿರುವುದು ಕನ್ನಡ ಲಿಪಿಯ ಬಗೆಗೆ ಹೊಂದಿರುವ ಅತ್ಯುನ್ನತ ಭಾವನೆಯನ್ನು ತೋರಿಸುತ್ತದೆ.

ಮತ್ತೆ ಕೆಲವು ಹಸ್ತಪ್ರತಿಗಳಲ್ಲಿ ಲಿಖಿತವಾದ ವಾರ್ಷಿಕ ಸಂಖ್ಯೆಯನ್ನು ಪದಗಳ ಬಳಕೆಯಿಂದ ಹೇಳಿರುವುದುಂಟು. ಇದಕ್ಕೆ ಉದಾಹರಣೆಯಾಗಿ ೧೦೪೨ರಲ್ಲಿದ್ದ ಎರಡನೆಯ ನಾಗವರ್ಮನ ವರ್ಧಮಾನ ಪುರಾಣದಲ್ಲಿ ಬರುವ ಪದ್ಯದಿಂದ ಕವಿಯ ಕಾಲ ನಿರ್ಧಾರವಾಗಿದೆ. ಕವಿಯೇ ಹೇಳಿರುವ

ವಸುವರ್ಗಾಂಕಮಿದಂತತೀತ ಶಕಭೂಭೃತ್ವತ್ಸರಂ ಚಿತ್ರಭಾ
ನು ಸಮಾಖ್ಯಾಬ್ದ ಕಮಾಶ್ವಯುಗ್ ಬಹುಳ ಷಷ್ಠೀವಾಸರಂ ತಾಂ ಪುನ
ರ್ವಸುಪಕ್ಷಂ ಸುರಮಂತ್ರಿವಾರಮಭಿಜಿಲ್ಲಗ್ನೋದಯಂ ಕೂಡೆ ವ
ರ್ತಿಸೆ ಪೇಟ್ದಂ ಕವಿತಾಗುಣೋದಯನಿದಂ ಚೆಲ್ವಾಗೆ ತಾತ್ಪರ್ಯದಿಂ ||೧೬-೪೭||

ಎಂದು ಹೇಳಿರುವಲ್ಲಿ ದೊರೆಯುವಂತೆ 'ಚಿತ್ರಭಾನು ಸಂವತ್ಸರ, ಆಶ್ವಯುಜ, ಬಹುಳ ಷಷ್ಠಿ, ಪುನರ್ವಸುನಕ್ಷತ್ರ, ಗುರುವಾರ ಅಭಿಜಿಲ್ಲಗ್ನ' ಮೊದಲಾದುವೆಲ್ಲವೂ ಕ್ರಿ.ಶ. ೧೦೪೨ನೆಯ ಅಕ್ಟೋಬರ್ ತಿಂಗಳ ಏಳನೆಯ ದಿವಸಕ್ಕೆ ಸರಿಹೊಂದುತ್ತವೆ. ಎಂದರೆ ಶಾಲಿವಾಹನಶಕ ೯೬೪ ಎಂದಾಗುತ್ತದೆ. ಆಗ್ಗೆ ಇಲ್ಲಿ ಬರುವ ಅಂಕಿಯ ಸಂಕೇತ ಪದಗಳು 'ವಸುವರ್ಗಾಂಕ' ಎಂಬುದರ ಅರ್ಥವನ್ನು ಪರಿಶೀಲಿಸಬೇಕಾಗುತ್ತದೆ. ಆಗ್ಗೆ ಅಂಕ - ೯, ವರ್ಗ -೬ ಎಂಬುದಾಗಿ ಹೇಳಬಹುದಾಗಿದೆ. ಇದರಲ್ಲಿರುವ ಮತ್ತೊಂದು 'ವಸು' ಪದಕ್ಕೆ '೮' ಎಂಬ ಅರ್ಥವಾಗುವುದೇ ಹೊರತು '೪' ಎಂಬ ಅರ್ಥ ಇಲ್ಲ. ಆದರೆ 'ವಸು' ಎಂದರೆ '೮' ಎಂದಿಟ್ಟುಕೊಂಡು ಅಧರ ವರ್ಗ ಎಂದರೆ ೮x೮=೬೪ ಎಂದು ಅರ್ಥಮಾಡಬಹುದಾಗಿದೆ. ಹೀಗಾದಾಗ ಅಂಕಿಗಳು ಮತ್ತು ಸಂವತ್ಸರ ಎರಡು ರೀತಿಯಿಂದಲೂ ನಾಗವರ್ಮನ ಕಾಲ ಕ್ರಿ.ಶ. ೧೦೪೨ಕ್ಕೆ ಸರಿಹೋಗುತ್ತದೆ. ಎರಡನೆಯ

ರೀತಿಯಿಂದ ಅರ್ಥಮಾಡುವುದನ್ನು ತಿರಸ್ಕರಿಸಿದರೂ ೯೬೮ ಎಂಬುದು ಸ್ಪಷ್ಟವಾಗಿದೆ ಎಂದರೆ ಈ ಮೂರು ಸಂಖ್ಯೆಗಳಲ್ಲಿ ಒಂಬೈನೂರ ಅರವತ್ತನ್ನು ಯಾರೂ ಅಲ್ಲಗಳೆಯಲಾಗುವುದಿಲ್ಲ. ಕೊಟ್ಟಿರುವ ಸಂವತ್ಸರಾದಿ ವಿಷರಗಳು ಮತ್ತಾವ ವರ್ಷಕ್ಕೂ ಸರಿಹೊಂದುವುದಿಲ್ಲ. ಆದುದರಿಂದ ನಾಗವರ್ಮನ ಕಾಲವನ್ನು ಕ್ರಿ.ಶ. ೧೦೪೨ ಎಂದು ಹೇಳಲೇಬೇಕಾಗುತ್ತದೆ.

ಹಸ್ತಪ್ರತಿಗಳನ್ನು ಕೆಲವು ಗುಂಪುಗಳನ್ನಾಗಿ ವಿಂಗಡಿಸುವುದು ರೂಢಿಗೆ ಬಂದಿದೆ. ಅದರಂತೆ ಪ್ರತಿಕಾರರು ಎಂಬ ಅಂಶದ ಮೇಲೆ ಇದರ ನಿರ್ಣಯವಾಗುತ್ತದೆ. ಡಿ.ಎಲ್. ನರಸಿಂಹಾಚಾರ್ ಅವರು. ೧. ಕವಿಯ ಸ್ವಹಸ್ತಾಕ್ಷರ ಪ್ರತಿ ೨. ಏಕೈಕ ಹಸ್ತಪ್ರತಿ, ೩. ಮಾತೃಕೆ, ೪. ಪರಂಪರಾಗತ ಹಸ್ತಪ್ರತಿಗಳು, ೫. ಮಿಶ್ರಪ್ರತಿಗಳು ಎಂಬ ಐದು ವಿಭಾಗಗಳನ್ನು ಮಾಡಿದ್ದಾರೆ.[1] ಎಂ.ಎಂ. ಕಲಬುರ್ಗಿ ಅವರು ೧. ಮೂಲಪ್ರತಿ ೨. ಪರಂಪರಾಗತ ಪ್ರತಿ : ಶುದ್ಧ ಸಂತಾನ ಪ್ರತಿ, ಅಶುದ್ಧ ಸಂತಾನ ಪ್ರತಿ ೩. ಏಕೈಕ ಹಸ್ತಪ್ರತಿ ೪. ಸಂರಕ್ಷಿತ ಹಸ್ತಪ್ರತಿ ಎಂದು ವಿಭಾಗಿಸಿದ್ದಾರೆ.[2] ಹಾಗೆಯೇ ಸೀತಾರಾಮ ಜಾಗೀರದಾರರು ೧. ಸ್ವಹಸ್ತಾಕ್ಷರ ಪ್ರತಿ ೨. ಏಕೈಕ ಹಸ್ತಪ್ರತಿ ೩. ಪರಂಪರಾಗತ ಹಸ್ತಪ್ರತಿ ೪. ಸಂರಕ್ಷಿತಹಸ್ತಪ್ರತಿ ೫. ಮಿಶ್ರ ಹಸ್ತಪ್ರತಿ ಎಂದು ವಿಂಗಡಿಸಿದ್ದಾರೆ.[3]

ಇವುಗಳಲ್ಲಿ ಡಿ.ಎಲ್.ಎನ್. ಮತ್ತು ಜಾಗೀರ್‌ದಾರರು ಐದು ವಿಭಾಗಗಳನ್ನಾಗಿ ಮಾಡಿಕೊಂಡಿದ್ದರೆ, ಕಲಬುರ್ಗಿಯವರು ನಾಲ್ಕು ಭಾಗಗಳನ್ನಾಗಿ ಮಾಡಿ ಒಂದರಲ್ಲಿ ಎರಡು ಉಪವಿಭಾಗಗಳನ್ನು ಗುರುತಿಸಿದ್ದಾರೆ. ಕವಿಯ ಸ್ವಹಸ್ತಾಕ್ಷರ ಪ್ರತಿ ಅಥವಾ ಮೂಲಪ್ರತಿ, ಏಕೈಕ ಹಸ್ತಪ್ರತಿ, ಪರಂಪರಾಗತ ಹಸ್ತಪ್ರತಿ ಎಂಬ ಮೂರು ವಿಧಗಳು ಮೂವರಲ್ಲಿಯೂ ಕಂಡುಬರುತ್ತದೆ. ಉಳಿದಂತೆ ಡಿ.ಎಲ್.ಎನ್. ಅವರ ಮಾತೃಕೆ ಎಂಬುದೂ, ಕಲಬುರ್ಗಿ ಅವರ ಪರಂಪರಾಗತ ಹಸ್ತಪ್ರತಿಯಲ್ಲಿನ ಶುದ್ಧಸಂತಾನ, ಅಶುದ್ಧಸಂತಾನ ಎಂಬಿವನ್ನು ಬೇರೆಯಾಗಿಯೂ, ಸಂರಕ್ಷಿತ ಎಂಬುದು ಕಲಬುರ್ಗಿ ಮತ್ತು ಜಾಗೀರದಾರರಿಬ್ಬರಲ್ಲಿಯೂ ಮಿಶ್ರಹಸ್ತಪ್ರತಿ ಎಂಬುದು ಡಿ.ಎಲ್.ಎನ್. ಮತ್ತು ಜಾಗೀರದಾರರಿಬ್ಬರಲ್ಲಿಯೂ ಕಂಡುಬರುತ್ತವೆ. ಸಂರಕ್ಷಿತ ಪ್ರತಿಯನ್ನು ಡಿ.ಎಲ್.ಎನ್.

1. ಕ. ಗ್ರಂ. ಸಂ. ೫೮-೬೮
2. ಕನ್ನಡ ಗ್ರಂಥ ಸಂಪಾದನ ಶಾಸ್ತ್ರ ; ಪು. ೧೨೩-೧೨೯
3. ಗ್ರಂಥ ಸಂಪಾದನಾ ಶಾಸ್ತ್ರ ಪರಿಚಯ ; ಪು. ; ೪೯-೫೪

ಅವರು ಮಿಶ್ರಪ್ರತಿ ವಿಭಾಗದಲ್ಲಿಯೇ ಗುರುತಿಸಿದ್ದಾರೆ. ಇವುಗಳನ್ನು ಕೆಳಕಂಡಂತೆ ಪಟ್ಟಿಮಾಡಿ ತೋರಿಸಬಹುದು.

ಡಿಎಲ್ಎನ್	ಸ್ವಹಸ್ತಾಕ್ಷರ	ಏಕೈಕ ಮಾತೃಕೆ	ಪರಂಪರಾಗತ	ಮಿಶ್ರ	ಸುರಕ್ಷಿತ
ಕಲಬುರ್ಗಿ	ಮೂಲಪ್ರತಿ	" "	ಶುದ್ಧ ಸಂತಾನ ಅಶುದ್ಧ ಸಂತಾನ	-	"
ಜಾಗೀರದಾರ್	ಸ್ವಹಸ್ತಾಕ್ಷರ	" "	ಪರಂಪರಾಗತ	ಮಿಶ್ರ	"

೧. ಸ್ವಹಸ್ತಾಕ್ಷರ ಪ್ರತಿ ಅಥವಾ ಮೂಲಪ್ರತಿ (Autograph)

೧೮ನೆಯ ಶತಮಾನದ ಕೊನೆಯಲ್ಲಿದ್ದ ಬಸವಪ್ಪ ಶಾಸ್ತ್ರಿ, ನಂದಳಿಕೆ ಲಕ್ಷ್ಮೀನಾರಣಪ್ಪ (ಮುದ್ದಣ) ಇವರ ಮತ್ತು ಅವರಿಗಿಂತ ಈಚಿನವರ ಸ್ವಹಸ್ತ ಪ್ರತಿಗಳು ದೊರೆಯುತ್ತವೆಯೇ ಹೊರತು, ಇದಕ್ಕೆ ಹಿಂದಿನವಾವುವೂ ಇದುವರೆಗೆ ದೊರೆತಿಲ್ಲ. ಇಂತಹುಗಳು ದೊರೆತಾಗ ಮಾತ್ರ ಪ್ರತಿಗಳು ಸುಸ್ಥಿತಿಯಲ್ಲಿದ್ದ ಯಾವ ಎಡರು ತೊಡರುಗಳೂ ಇಲ್ಲದೆ ಸಂಪಾದಿಸಿ ಪ್ರಕಟಿಸಬಹುದು; ಬೇರೆ ಹಸ್ತಪ್ರತಿಗಳ ಅವಶ್ಯಕತೆಯೇ ಉಂಟಾಗುವುದಿಲ್ಲ. ತಾಮ್ರ ಮತ್ತು ಶಿಲೆಯ ಮೇಲಿರುವ ಸಾಹಿತ್ಯವನ್ನೂ ಸ್ವಹಸ್ತಾಕ್ಷರಪ್ರತಿಗಳೆಂದು ಕರೆಯಬಹುದೆಂದು ಹೇಳುತ್ತಾರೆ. ಏಕೆಂದರೆ ಕವಿ ರಚಿಸಿಕೊಟ್ಟ ಸಾಹಿತ್ಯವನ್ನು ತಾಮ್ರ ಅಥವಾ ಶಿಲೆಯ ಮೇಲೆ ಕಂಡರಿಸಿದ ಮೇಲೆ ರಚಕನು ಮತ್ತೊಮ್ಮೆ ಅದನ್ನು ನೋಡುತ್ತಿದ್ದನೆಂಬ ಊಹೆಯೇ ಕಾರಣವಾಗಿದೆ. ಆದರೆ ಇದರಲ್ಲಿಯೂ ಸಮಯಾಭಾವದಿಂದ ಕವಿ ನೋಡದಿರಲೂ ಬಹುದೆಂಬ ಶಂಕೆ ಇದಕ್ಕೆ ತೊಡಕಾಗಿದೆ. ಆದರೂ ಇವು ಪ್ರತಿ ಮರುಪ್ರತಿಗಳಾಗುವುದು ತುಂಬಾ ವಿರಳವಾದುದರಿಂದ ಇವುಗಳನ್ನು ಈ ಗುಂಪಿನಲ್ಲಿ ಪರಿಭಾವಿಸಬಹುದೆಂದು ಹೇಳಬಹುದು." ಬೊಪ್ಪಣಪಂಡಿತನ (ಕ್ರಿ.ಶ.ಸು. ೧೧೮೦) ಕೃತಿ. 'ಗೊಮ್ಮಟ ಜಿನಸ್ತುತಿ'ಯನ್ನು ಕವಿಯ ಸ್ವಹಸ್ತಪ್ರತಿ ಅಥವಾ ಮೂಲಪ್ರತಿ ಎಂದು ಹೇಳಬಹುದು.

೨. ಏಕೈಕ ಹಸ್ತಪ್ರತಿ (Codex unicus)

ನಾಗವರ್ಮನ 'ಕರ್ಣಾಟಕ ಕಾದಂಬರಿ', ಚೌಂಡರಸನ 'ನಳಚಂಪು', ೨ನೆಯ ನಾಗವರ್ಮನ 'ವರ್ಧಮಾನ ಪುರಾಣ', ಬಂಧುವರ್ಮನ 'ಹರಿವಂಶಾಭ್ಯುದಯ'

ಮೊದಲಾದ ಗ್ರಂಥಗಳ ಒಂದೊಂದೇ ಹಸ್ತಪ್ರತಿಗಳು ದೊರೆತು ಸಂಪಾದನಾಕಾರ್ಯ ಬಹು ತೊಡಕಾಗಿ ಪರಿಣಮಿಸಿರುವುದು ಕಂಡುಬರುತ್ತದೆ. ಈ ಹಸ್ತಪ್ರತಿಗಳು ಅಶುದ್ಧವಾಗಿದ್ದರೆ, ತ್ರುಟಿತವಾಗಿದ್ದರೆ ಅವುಗಳನ್ನು ತಿದ್ದುವುದು ಅಥವಾ ತುಂಬುವುದು ತುಂಬಾ ತ್ರಾಸದಾಯಕ. 'ಕರ್ಣಾಟಕ ಕಾದಂಬರಿ' ಗ್ರಂಥದಲ್ಲಿ ತ್ರುಟಿತಭಾಗಗಳನ್ನು ತುಂಬಿ ಸರಿಪಡಿಸಲು ಸಂಪಾದಕರಾದ ಬಿ. ಮಲ್ಲಪ್ಪನವರು ಪಟ್ಟ ಶ್ರಮ ಶ್ಲಾಘನೀಯವಾದುದು. ಇದನ್ನು ಸಂಪಾದಿಸುವಾಗ್ಗೆ ಮೂಲಗ್ರಂಥವಾದ ಬಾಣನ 'ಕಾದಂಬರಿಯನ್ನೂ, ಸಂಸ್ಕೃತ ಪಂಡಿತರ ಸಹಾಯವನ್ನೂ ಪಡೆದು ಕಾರ್ಯನಿರ್ವಹಣೆ ಮಾಡಿದ್ದಾರೆ. ಏಕೆಂದರೆ ಇಂತಹ ಏಕೈಕ ಹಸ್ತಪ್ರತಿಗಳಲ್ಲಿ ದೊರೆತ ಗ್ರಂಥಗಳು ಆದಷ್ಟು ಬೇಗ ಅಚ್ಚಾದರೆ ದೊರೆತ ಗ್ರಂಥ ಶಾಶ್ವತವಾಗಿ ಉಳಿದಂತಾಗುವುದಲ್ಲದೆ ಮತ್ತೂ ತ್ರುಟಿತವಾಗಿ ಹಾಳಾಗುವುದನ್ನು ತಪ್ಪಿಸಬಹುದು. ಎಷ್ಟೇ ಕಷ್ಟಗಳು ಎದುರಾದರೂ ಕ್ವಚಿತ್ತಾಗಿ ಎಡವಿದರೂ ಇಂತಹ ಕೆಲಸವನ್ನು ಯಾರಾದರೂ ಮಾಡಿಯೇತೀರಬೇಕು. ಇದೇ ಉದ್ದೇಶದಿಂದ ನಾನು 'ಹರಿವಂಶಾಭ್ಯುದಯ', 'ವರ್ಧಮಾನ ಪುರಾಣ' ಮೊದಲಾದ ಗ್ರಂಥಗಳ ಕಾರ್ಯವನ್ನು ನಿರ್ವಹಿಸಿದ್ದೇನೆ.

೩. ಮಾತೃಕೆ (Exemplar)

ಇದನ್ನು ಡಿ.ಎಲ್.ಎನ್. ಅವರು ಮಾತ್ರ ಗುರುತಿಸಿದ್ದಾರೆ. ಯಾವುದೇ ಗ್ರಂಥದ ಒಂದಕ್ಕಿಂತ ಹೆಚ್ಚು ಹಸ್ತಪ್ರತಿಗಳು ದೊರೆತಾಗ, ದೊರೆತ ಎಲ್ಲ ಬೇರೆ ಬೇರೆ ಮಾತೃಕೆಗಳ ನಕಲಾಗಿರಬಹುದು. ಇವೆಲ್ಲಕ್ಕೂ ಮೂಲವಾಗಿರಬಹುದಾದ ಹಸ್ತಪ್ರತಿಯನ್ನು ಮಾತೃಕೆ ಎಂದು ಹೇಳಬಹುದು. 'ಕಖಗ' ಸಂಕೇತಗಳ ಮೂರು ಪ್ರತಿಗಳಿಗೆ 'ಯ' ಎಂಬ ಅಲಭ್ಯ ಪ್ರತಿ ಮಾತೃಕೆಯಾಗುತ್ತದೆ. 'ಖಗ'ಗಳಿಗೆ 'ಕ' ಪ್ರತಿ ಮೂಲವಾಗಿದ್ದಲ್ಲಿ 'ಕ' ಎಂಬುದನ್ನು ಲಬ್ಧ ಮಾತೃಕೆಯೆಂದೂ, 'ಯ' ಎಂಬುದನ್ನು ಅಲಭ್ಯ ಮಾತೃಕೆಯೆಂದೂ ಹೇಳಲಾಗಿದೆ.[1]

೪. ಪರಂಪರಾಗತ ಹಸ್ತಪ್ರತಿಗಳು (Transmitted Texts)

ಯಾವುದೇ ಗ್ರಂಥದ ಹಸ್ತಪ್ರತಿಯಾಗಲಿ ಸ್ವಹಸ್ತಪ್ರತಿಯಾಗದಿದ್ದರೆ ಪರಂಪರಾಗತ ಪ್ರತಿಯಾಗುತ್ತದೆ. ಇಂತಹವು ಎಷ್ಟೇ ಪ್ರತಿಗಳು ದೊರೆತರೂ ಅವುಗಳೆಲ್ಲವೂ ಮೂಲದಿಂದ

---

1. ಕ. ಗ್ರಂ. ಸಂ. ; ಪು. ೬೦

ಬಂದಿರುತ್ತವೆ. ಇವುಗಳಲ್ಲಿ ಪ್ರತಿ ಮಾಡಿದ ಕಾಲದ ಲಿಪಿಯ ವೈಶಿಷ್ಟ್ಯ, ಅಕ್ಷರಸ್ಖಾಲಿತ್ಯ ಮೊದಲಾದುವುಗಳ ಆಧಾರದ ಮೇಲೆ ವಿಂಗಡಿಸಿ ಯಾವ ಯಾವ ಪೀಳಿಗೆಗೆ ಸೇರಿದುವೆಂಬುದನ್ನು ಗುರುತುಮಾಡಬೇಕಾಗುತ್ತದೆ. ಡಿ.ಎಲ್.ಎನ್. ಅವರು ಒಬ್ಬನೇ ಕವಿ ಮತ್ತೊಮ್ಮೊ ಮಗದೊಮ್ಮೆ ತಿದ್ದಿ ಪಾಠಗಳನ್ನು ಬದಲಾಯಿಸಿದಾಗ (ಉದಾ : ಡಿ.ವಿ.ಜಿ. ಅವರ ಬೇಲೂರಿನ ಶಿಲಾಬಾಲಿಕೆಯರು) ಅವುಗಳ ಬೇರೆ ಬೇರೆ ಪ್ರತಿಗಳನ್ನು ಇದೇ ಗುಂಪಿಗೆ ಸೇರಿಸಿದ್ದಾರೆ. ಕಲಬುರ್ಗಿ ಅವರು ಈ ಪ್ರತಿಗಳಲ್ಲಿ ಶುದ್ಧ ಸಂತಾನ, ಅಶುದ್ಧ ಸಂತಾನ ಎಂಬೆರಡು ಪ್ರಭೇದಗಳನ್ನು ಮಾಡಿದ್ದಾರೆ. ಒಂದು ಪೀಳಿಗೆಯ ಪರಂಪರಾಗತ ಪ್ರತಿ ಮೂಲಕ್ಕೆ ಪ್ರಾಮಾಣಿಕವಾಗಿದ್ದರೆ ಶುದ್ಧ ಸಂತಾನವೆಂದೂ, ಪೀಳಿಗೆ ಪರಂಪರೆ ಮೂಲಕ್ಕೆ ಪ್ರಾಮಾಣಿಕವಾಗಿರದಿದ್ದಲ್ಲಿ ಅಥವಾ ಒಂದು ಕೃತಿಯ ಪ್ರತಿ ಮಾಡಲು ಹಲವು ಲಿಪಿಕಾರರು ಕೂಡಿ ಬರೆಯುವುದು ಇಲ್ಲವೆ ಒಂದಕ್ಕಿಂತ ಹೆಚ್ಚು ಪ್ರತಿಗಳನ್ನುಪಯೋಗಿಸಿ ಒಂದು ಪ್ರತಿ ಮಾಡುವುದು ಇವುಗಳು ಅಶುದ್ಧ ಸಂತಾನ ಪ್ರತಿಗಳೆಂದೂ ಹೇಳಿದ್ದಾರೆ.

ಅಲ್ಲದೆ ಶುದ್ಧ ಸಂತಾನ, ಅಶುದ್ಧ ಸಂತಾನ ಎರಡರಲ್ಲಿಯೂ ಮಾತೃಕಾ ಪ್ರತಿ, ಪುತ್ರಿಕಾ ಪ್ರತಿ, ಸೋದರ ಪ್ರತಿ, ಸದಸ್ಯ ಪ್ರತಿ ಎಂಬ ಒಳಭೇದಗಳನ್ನು ನೀಡುತ್ತಾರೆ.[1]

೫. ಮಿಶ್ರ ಪ್ರತಿಗಳು (Misch - codices; Conflated Texts)

ಈ ಐದನೆಯ ವಿಭಾಗದ ಹಸ್ತಪ್ರತಿಗಳನ್ನು ಡಿ.ಎಲ್.ಎನ್ ಮತ್ತು ಜಾಗೀರ್‌ದಾರರು ಗುರುತಿಸಿದ್ದರೆ ಕಲಬುರ್ಗಿಯವರು ಬಿಟ್ಟಿದ್ದಾರೆ. ಎಂದರೆ ಕಲಬುರ್ಗಿಯವರು ಅಶುದ್ಧ ಸಂತಾನ ಎಂದು ಹೇಳಿರುವುದೇ ಮಿಶ್ರಪ್ರತಿಯಾಗಿ ಕಂಡುಬರುತ್ತದೆ. ಬೇರೆ ಬೇರೆ ಪೀಳಿಗೆಯ ಎರಡು ಅಥವಾ ಹೆಚ್ಚು ಪ್ರತಿಗಳನ್ನು ಉಪಯೋಗಿಸಿ ಒಂದು ಪ್ರತಿಯನ್ನು ತಯಾರುಮಾಡುವುದು ಅಥವಾ ಒಂದು ಪ್ರತಿಗೆ ಮತ್ತೊಂದು ಪ್ರತಿಯಿಂದ ದೊರೆತ ಬೇರೆ ಪಾಠಗಳನ್ನು ಗುರುತಿಸಿರುವುದು ಮಿಶ್ರಪ್ರತಿಯೆನ್ನಿಸಿಕೊಳ್ಳುತ್ತದೆ. ಇಲ್ಲವೆ ಕೃತಿ ಸಾಕಷ್ಟು ವಿಸ್ತಾರವಾಗಿದ್ದು ಒಬ್ಬನಿಂದಲೇ ಬರೆಯಲು ಸಾಧ್ಯವಿಲ್ಲದಾದಾಗ ಬೇರೆ ಬೇರೆ ಭಾಗಗಳನ್ನು ಬೇರೆ ಬೇರೆ ಪ್ರತಿಕಾರರು ಲಿಖಿಸಿರುವುದೂ ಇದಕ್ಕೆ ಸೇರುತ್ತದೆ. "ಇಂಥ ಪ್ರತಿಗಳನ್ನು ಬಹುಲಿಪಿಕಾರ ಪ್ರತಿಗಳೆಂದು ಕರೆದಿದೆ" ಎಂದು ಡಿ.ಎಲ್.ಎನ್. ಸೂಚಿಸುತ್ತಾರೆ.

ಈ ಮಿಶ್ರಪ್ರತಿಗೆ ಉದಾಹರಣೆಯಾಗಿ "ಯರಡು ಮೂಲಪ್ರತಿಗಳನ್ನು ಇಟ್ಟುಕೊಂಡು

---

1. ಕನ್ನಡ ಗ್ರಂಥ ಸಂಪಾದನಾ ಶಾಸ್ತ್ರ; ಪು. ೧೨೫-೧೨೬

ಸಮಗ್ರವಾಗಿ ಬರೆಯಲ್ಪಟ್ಟಿದೆ. ಕವಿಕುಂಜರ ಲೀಲಾವತಿ ಸಂಪೂರ್ಣಂ" ಮತ್ತು "ಕಟ್ಟಿಗೆ ಲಕ್ಷುಮಯ್ಯನವರ ಮನೆ ಪ್ರತಿ ಹೋಗಿ ಬಂದುಯಿದ್ದುದಕ್ಕೆ ೩ ಪರ್ವವಂನು ಚವಡಪ್ಪ ಬರದು ಶೇರಿಸಿಯಿರುವಕ್ಕೆ ನಿರ್ವಿಘ್ನಮಸ್ತು"[1] ಎಂಬಿವುಗಳನ್ನು ಜಾಗೀರ್‌ದಾರರು ನೀಡಿದ್ದಾರೆ. ಇದೇ ಲೀಲಾವತಿ ಗ್ರಂಥದ ಹಸ್ತಪ್ರತಿಯನ್ನು ಅಶುದ್ಧ ಸಂತಾನ ಪ್ರತಿಗೆ ಉದಾಹರಣೆಯಾಗಿ ಕಲಬುರ್ಗಿಯವರು ನೀಡಿದ್ದಾರೆ.

೨. ಸಂರಕ್ಷಿತ ಹಸ್ತಪ್ರತಿ (Protected Text)

ಡಿ.ಎಲ್.ಎನ್. ಅವರು ಇದನ್ನು ಬೇರೆ ಒಂದು ವಿಭಾಗದಲ್ಲಿ ವಿವರಿಸಿವಾದರೂ ಮಿಶ್ರಪ್ರತಿ ವಿಭಾಗದಲ್ಲಿಯೇ ಇದನ್ನು ಸೂಚಿಸಿ, ಇದಕ್ಕೆ ಉದಾಹರಣೆಯಾಗಿ ವರ್ಜಿಲ್‌ಕವಿಯ 'ಏನಾಡ್' ಎಂಬ ಮಹಾಕಾವ್ಯದ ಮತ್ತು ಅವನ ಇತರ ಕಾವ್ಯಗಳ ಹಸ್ತಪ್ರತಿಗಳು ಈ ತೆರನಾದವು. 'ಧವಲಾ', 'ಜಯಧವಲಾ', 'ಮಹಾಧವಲಾ' ಎಂಬ ಈ ಮಹಾಗ್ರಂಥಗಳ ಅತಿಪ್ರಾಚೀನ ಅಧಿಕೃತವೂ ಆದ ಹಸ್ತಪ್ರತಿ ಮೂಡಬಿದರೆಯ ಜೈನಭಂಡಾರದಲ್ಲಿದೆ. ಇದರ ಪ್ರತಿಗಳನ್ನು ಮಾಡಲು ಹಲವು ಶತಮಾನಗಳಿಂದ ಯಾರಿಗೂ ಅವಕಾಶವನ್ನು ಕೊಡಲಿಲ್ಲ. ಇದು ಮಠಾಧಿಪತಿಗಳಿಂದ ಒಂದು ರೀತಿಯಲ್ಲಿ ಸಂರಕ್ಷಿತವಾಗಿರುವ ಪ್ರತಿ"[2] ಎಂದು ಹೇಳಿದ್ದಾರೆ. ಕಲಬುರ್ಗಿಯವರು ಸಂರಕ್ಷಿತ ಹಸ್ತಪ್ರತಿಗೆ ಇದೇ ಗ್ರಂಥಗಳ ವಿವರಣೆಯನ್ನು ನೀಡಿರುವುದಲ್ಲದೆ "ಕಲಬುರ್ಗಿಜಿಲ್ಹೆಯ ಕೊಡೆಕಲ್ಲ ಗ್ರಾಮದ ಬಸವೇಶ್ವರ ದೇವಾಲಯದಲ್ಲಿ ವರ್ಷಕ್ಕೊಮ್ಮೆ ಹೊರತೆಗೆದು ಓದಲ್ಪಡುವ, ದೇವರಂತೆ ಗದ್ದುಗೆಯಲ್ಲಿ ಪೂಜೆಗೊಳ್ಳುತ್ತಿದ್ದ ಶರಣರ ವಚನಗ್ರಂಥಗಳಿವೆ. ಇವೂ ಸಂರಕ್ಷಿತ ಹಸ್ತಪ್ರತಿಗಳು"[3] ಎಂದು ಹೇಳಿದ್ದಾರೆ. ಜಾಗೀರ್‌ದಾರರು ಮತ್ತು ಡಿ.ಎಲ್.ಎನ್. ಅವರು ಹೇಳಿರುವ ಎರಡು ಗ್ರಂಥಗಳ ಜತೆಗೆ ಏಕನಾಥನೆಂಬುವನು 'ಜ್ಞಾನೇಶ್ವರಿ' ಗ್ರಂಥದ ಪಾಠ ಕೆಡಬಾರದೆಂದು ಪ್ರಯತ್ನಿಸಿ ೧೫೮೪ರಲ್ಲಿ ಹಲವು ಪ್ರತಿಗಳನ್ನುಪಯೋಗಿಸಿ ಒಂದು ಶುದ್ಧಪ್ರತಿ ತಯಾರಿಸಿ ಏಕನಾಥ ಮಠದಲ್ಲಿ ಕಾಪಾಡಿರುವ ಪ್ರತಿಯನ್ನು ಸಂರಕ್ಷಿತ ಹಸ್ತಪ್ರತಿಯೆಂದು ಹೇಳಿದ್ದಾರೆ.[4]

---

1. ಗ್ರಂಥ ಸಂಪಾದನಾ ಶಾಸ್ತ್ರ; ಪು. ೫೪-೫೫
2. ಕ. ಗ್ರಂ. ಸಂ.; ಪು. ೬೬
3. ಕನ್ನಡ ಗ್ರಂಥ ಸಂಪಾದನ ಶಾಸ್ತ್ರ; ಉಪು. ೧೩೦
4. ಗ್ರಂಥ ಸಂಪಾದನಾಶಾಸ್ತ್ರ; ಪು. ೫೪-೫೫

ಹೀಗೆ ಹಸ್ತಪ್ರತಿಗಳನ್ನು ಬೇರೆ ಬೇರೆ ಹೆಸರುಗಳಿಂದ ವಿವಿಧ ಗುಂಪುಗಳನ್ನಾಗಿ ಮಾಡಿದರೂ ಕೆಲವು ಹಸ್ತಪ್ರತಿಗಳು ಒಂದಕ್ಕಿಂತ ಹೆಚ್ಚು ಗುಂಪುಗಳಲ್ಲಿ ಗಣನೆಗೆ ಬರುತ್ತವೆ. ಕವಿಯ ಸ್ವಹಸ್ತಪ್ರತಿ ಏಕೈಕಹಸ್ತಪ್ರತಿಯಾಗಿಯೂ, ಸಂರಕ್ಷಿತಪ್ರತಿಯಾಗಿಯೂ ಆಗಬಹುದು. ಮಾತೃಕಾಪ್ರತಿ ಎಂಬುದು ನಮಗೆ ದೊರೆಯದಿರುವ ಮೂಲವನ್ನೊ; ಕವಿಯ ಸ್ವಹಸ್ತಾಕ್ಷರಪ್ರತಿಯನ್ನೊ ಅಥವಾ ದೊರೆತವುಗಳಲ್ಲಿಯೇ ಮೂಲವೆಂದು ಕಂಡುಬಂದುದನ್ನೊ ಹೇಳುವಂತಹ ಮಾತಾಗಿರುವುದರಿಂದ ಇದನ್ನು ಇಲ್ಲಿ ಬಿಡಬಹುದಾಗಿದೆ. ಕಲಬುರ್ಗಿ ಅವರು ಸ್ವಹಸ್ತಾಕ್ಷರಪ್ರತಿಯನ್ನೇ ಮೂಲಪ್ರತಿ ಎಂದು ಕರೆದಿದ್ದಾರೆ ಎಂದರೆ ಇದೂ ಕೂಡ ಮಾತೃಕಾಪ್ರತಿಯೇ ಆಗುತ್ತದೆ. ಶುದ್ಧ ಸಂತಾನ, ಅಶುದ್ಧ ಸಂತಾನ ಎಂಬ ಪದಗಳೇ ಶುದ್ಧವಾಗಿ ಕಾಣುವುದಿಲ್ಲ. ಅವುಗಳಲ್ಲಿ ಮಾತೃಕಾ, ಸೋದರಾ, ಪುತ್ರಿಕಾ - ಮೊದಲಾದುವುಗಳನ್ನು ಗುರುತಿಸುವುದು ಅಗತ್ಯವಾಗಿ ಕಾಣುವುದಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಕವಿಯ ಸ್ವಹಸ್ತಾಕ್ಷರಪ್ರತಿ, ಏಕೈಕ ಹಸ್ತಪ್ರತಿ, ಪರಂಪರಾಗತ ಪ್ರತಿ, ಮಿಶ್ರಪ್ರತಿ ಮತ್ತು ಸಂರಕ್ಷಿತಪ್ರತಿ ಎಂಬ ಐದು ಭಾಗಗಳನ್ನು ಮಾಡಿಕೊಳ್ಳುವುದು ಸಾಧುವಾಗಿ ಕಾಣುತ್ತದೆ.

ಕವಿಗಳು ತಮ್ಮ ಪ್ರತಿಭಾಸಾಮರ್ಥ್ಯದಿಂದ ರಚಿಸಿದ ಕಾವ್ಯಗಳನ್ನು, ವಿದ್ವತ್ಪೂರ್ಣ ಪಂಡಿತರಿಂದ ನಿರೂಪಗೊಂಡ ಶಾಸ್ತ್ರಗ್ರಂಥಗಳನ್ನು ಪ್ರತಿಕಾರರು ಪ್ರತಿಮಾಡಿ ಆ ಗ್ರಂಥ ಸಂಪತ್ತನ್ನು ಕಾಪಾಡಿಕೊಂಡುಬಂದಿರುವುದು ಪುಣ್ಯವಿಶೇಷವೆಂದೇ ಹೇಳಬೇಕು. ಅತ್ತಿಮಬ್ಬೆಯಂತಹ ಶಾಸ್ತ್ರದಾನಿಗಳಿಂದ, ರಾಜರ, ಆಸಕ್ತರ ಗ್ರಂಥಾಭಿರುಚಿಯಿಂದ ಗ್ರಂಥಗಳ ಪ್ರತಿ ಮರುಪ್ರತಿಗಳಾಗಿ ಕೆಲವಾದರೂ ಉತ್ತಮ ಗ್ರಂಥಗಳು ನಮಗೆ ಲಭ್ಯವಾಗಿವೆ. ಇಂತಹ ಸಾಹಿತ್ಯಸಂಪತನ್ನು ಸಂಗ್ರಹಿಸಿ, ಸಂರಕ್ಷಿಸಿ, ಸಂಪಾದಿಸಿ, ಪ್ರಕಟಿಸಿ ಜನತೆಗೆ ದೊರೆಯುವುವಂತೆ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಸಂಗ್ರಹ

ಹಸ್ತಪ್ರತಿಗಳು ಮಠಮಂದಿರಗಳಲ್ಲಿ, ಖಾಸಗಿವ್ಯಕ್ತಿಗಳಲ್ಲಿ ಸಂಗ್ರಹವಾಗಿರುವುದುಂಟು. ಂಡಿತರು ತಮ್ಮ ವ್ಯಾಸಂಗಕ್ಕಾಗಿ ತಮಗೆ ಬೇಕಾದ ಕೃತಿಗಳನ್ನು ದೊರೆಯುವವರಿಂದ ಡೆದು ಅಥವಾ ಅಲ್ಲಿಯೇ ಪ್ರತಿ ಮಾಡಿಸಿಕೊಳ್ಳುತ್ತಿದ್ದರು. ಜ್ಯೋತಿಷ ವೈದ್ಯ ಮೊದಲಾದ ಷಯಗಳ ಗ್ರಂಥಗಳು ಪ್ರತಿಗಳಾಗಿ ಇತರೆಡೆಗೆ ಹೋಗಲೇಬೇಕಾಗಿರುವುದು ಹಜವಾಗಿದೆ. ಅಲ್ಲದೆ ಗ್ರಂಥಪಠನ ಮಾಡುವವರಿಗೆ ಅಭ್ಯಾಸಿಗಳಿಗೆ ಹೊಸ ಹೊಸ ಂಥಗಳ ಆವಿಷ್ಕಾರವಾದಂತೆ ಅವುಗಳ ಪ್ರತಿಗಳನ್ನು ಮಾಡಿಸಿ ತರಿಸುವ ಹಂಬಲ ಇದ್ದೇ ರುತ್ತಿದ್ದಿತು. "ಅರಮನೆ, ಮಠ, ಮಂದಿರ, ಬಸದಿಗಳಲ್ಲಿ ಸಾಹಿತ್ಯಾಭಿಮಾನಿಗಳ ಧಿಕಾರಿಗಳ ಮತ್ತು ಶ್ರೀಮಂತರ ಮಹಾಮನೆಗಳಲ್ಲಿ ಲೇಖಕ ವಾಚಕ ವಾದಿಗಳ ಬಳಗವೇ ರುತ್ತಿದ್ದಿತು. ಸರಸ್ವತೀ ಭಂಡಾರಗಳು ಅರಮನೆಗಳ ಐಶ್ವರ್ಯದ ಪ್ರತಿಷ್ಠೆ ಘನತೆ ಂಭೀರ್ಯಗಳ ಪ್ರತೀಕಗಳಾಗಿದ್ದುವು."[1] ಎಂದು ಹೆಚ್. ದೇವೀರಪ್ಪನವರು ೀಳಿರುವುದು ಸಮಂಜಸವಾಗಿದೆ.

ಧಾರ್ಮಿಕವಾಗಿ ಮಾಡುವ ಇತರ ದಾನಕಾರ್ಯಗಳಂತೆ ಶಾಸ್ತ್ರದಾನವೂ ಒಂದು ್ರಧಾನ ಕಾರ್ಯವಾಗಿದ್ದಿತು. ಧಾರ್ಮಿಕ ಭಾವನೆಯುಳ್ಳ ವ್ಯಕ್ತಿಗಳಲ್ಲಿ ಈ ಕಾರ್ಯ ನೂಚಾನವಾಗಿ ನಡೆದುಬಂದಿರುವುದರಿಂದ ಹಸ್ತಪ್ರತಿಗಳು ನಾಡಿನ ಉದ್ದಗಲಕ್ಕೂ ಂಬಲು ಸಹಕಾರಿಯಾಯಿತು. ಅದರಲ್ಲಿಯೂ ರಾಮಾಯಣ, ಭಾರತಗಳಂತಹ ಪುರಾಣ ಾವ್ಯಗಳು ಎಲ್ಲಿಹೋದರಲ್ಲಿ ದೊರೆಯುತ್ತವೆ. ಅತ್ತಿಮಬ್ಬೆಯು ಪೊನ್ನನ ಾಂತಿನಾಥಪುರಾಣ'ದ ಒಂದು ಸಾವಿರ ಪ್ರತಿಗಳನ್ನು ಮಾಡಿಸಿ ದಾನಚಿಂತಾಮಣಿಯಾದುದು ಸಿದ್ಧವಾಗಿದೆ. ಹೀಗೆ ಮಾಡಿರಬಹುದಾದ ಮತ್ತೂ ಹಲವು ಜನರ ಕಾರ್ಯಗಳು ಯಾವ ೀಖನಿಯ ಹಿಡಿತಕ್ಕೂ ಸಿಕ್ಕದೆ ಹೋಗಿರಬಹುದು.

ದೇಶದ ಹಾಗೂ ಪ್ರಪಂಚದ ವಿವಿಧೆಡೆಗಳಲ್ಲಿ ಹರಡಿಹೋಗಿ ಅಲ್ಲಲ್ಲಿ ಂಗ್ರಹವಾಗಿರುವ ಮತ್ತು ಈಗಲೂ ಖಾಸಗಿವ್ಯಕ್ತಿಗಳಲ್ಲಿ ಸೇರಿರುವ ಹಸ್ತಪ್ರತಿಗಳ ಮಾಹಿತಿ

1. ಹಸ್ತಪ್ರತಿ ಶಾಸ್ತ್ರ; ಪು. ೧೫

ಸಂಗ್ರಹಣೆಯಾಗಲಿ, ಹಸ್ತಪ್ರತಿಗಳ ಸಂಗ್ರಹವಾಗಲಿ ಅತ್ಯಂತ ದುಸ್ತರವಾದ ಕಠಿಣ ಸಮಸ್ಯೆಗಳನ್ನೊಡ್ಡುವ ಕೆಲಸ ಎಂಬುದನ್ನು ಈ ಕ್ಷೇತ್ರದಲ್ಲಿ ಕೆಲಸ ಮಾಡಿರುವವರು ಮಾತ್ರ ಅರ್ಥಮಾಡಿಕೊಳ್ಳಬಲ್ಲರು. "ಹಸ್ತಪ್ರತಿಗಳ ಭಂಡಾರದ ಅಧಿಕಾರಿಗಳು ಆಗಿಂದಾಗ್ಗೆ ಸಂಗ್ರಹಕಾರ್ಯವನ್ನು ನಡೆಸುವುದುಂಟು. ಇಂಥ ಪವಿತ್ರಕಾರ್ಯವನ್ನು ಎಷ್ಟು ಶ್ರದ್ಧೆಯಿಂದ ಮಾಡಿದರೂ ಅದಕ್ಕೆ ಇತಿಮಿತಿಗಳಿಲ್ಲ. ಕೇವಲ ಹೊಟ್ಟೆಪಾಡಿಗಾಗಿ ಕೈಗೊಳ್ಳುವ ಉದ್ಯೋಗವೆಂದು ಎಣಿಸದೆ, ಅದೊಂದು ಅಪೂರ್ವವಾದ ಸದವಕಾಶವೆಂದು ಮಾಡಿದರೆ ಆಗ ಅದು ಸಂಗ್ರಹಕಾರನಿಗೂ ಸಂಸ್ಥೆಗೂ ಮಹದುಪಕಾರವಾದಂತಾಗುವುದು. ನಾನು ತಿಳಿದಂತೆಯೇ ಕೆಲವರಿಗೆ ಇದರಲ್ಲಿ ಸ್ವತಃ ಒಂದು ಅಪ್ರತಿಮವಾದ ಸಾಮರ್ಥ್ಯವಿರುತ್ತದೆ. ಈ ಕೆಲಸಕ್ಕೆ ಅಂತಹ ಆಸಕ್ತರು ಅತ್ಯಗತ್ಯ"[1] ಎಂದು ಡಾ|| ಜಿ. ವರದರಾಜರಾಯರು ಹೇಳಿರುವುದು ಈ ಮಹತ್ವದ ಕೆಲಸದ ಬಗೆಗೆ ಹಿಡಿದ ಕೈಗನ್ನಡಿಯಾಗಿದೆ.

ಮೇಲೆ ಅಧಿಕಾರಿಗಳು ಸಂಗ್ರಹಕಾರ್ಯ ಮಾಡುತ್ತಾರೆಂದು ಹೇಳಿದ್ದಾರೆ. ಇದರಲ್ಲಿ ಎಷ್ಟು ಜನ ಆಸಕ್ತರಿರುತ್ತಾರೆಂಬುದು ಮುಖ್ಯವಾಗಿದೆ. ಅಲ್ಲದೆ ಈಗ ದೊರೆತಿರುವ ಗ್ರಂಥಗಳು, ಹೆಸರು ತಿಳಿದಿದ್ದರೂ ಲಭ್ಯವಿಲ್ಲದ ಗ್ರಂಥಗಳು, ಹೀಗೆ ವಿವಿಧ ರೀತಿಯ ಕೃತಿಗಳ ಬಗೆಗೆ ಸೂಕ್ತವಾದ ಅರಿವು ಅತ್ಯಗತ್ಯ. ದೊರೆತ ಗ್ರಂಥಗಳು ತಮ್ಮಲ್ಲಿ ಇವೆಯೆ? ಇದ್ದರೆ ಎಷ್ಟಿವೆ? ಎಂಬೆಲ್ಲ ಮಾಹಿತಿಗಳನ್ನು ಪರಿಶೀಲಿಸುವ ಸಾವಧಾನವಾದರೂ ಇರಬೇಕು. ಇಲ್ಲದಿದ್ದಲ್ಲಿ ಯಾವ ಹಸ್ತಪ್ರತಿಗೆ ಎಷ್ಟು ಪ್ರಾಮುಖ್ಯ ಕೊಡಬೇಕೆಂಬ ಪರಿಜ್ಞಾನವೇ ಇರುವುದಿಲ್ಲ. ಹಲವಾರು ಹಸ್ತಪ್ರತಿಗಳು ದೊರೆತಾಗ ಎಲ್ಲವನ್ನೂ ಒಂದು ಸಂಸ್ಥೆಗೆ ನೀಡಿದರೆ ಪರಿಶೀಲಿಸಲು ಸಮಯವಿರುತ್ತದೆ; ಇಲ್ಲದಿದ್ದರೆ ಅಂತಹವುಗಳ ಸಂಗ್ರಹ ಕಷ್ಟವಾಗುತ್ತದೆ. ಹಸ್ತಪ್ರತಿಗಳಲ್ಲಿ ಮುಖ್ಯವಾದುವನ್ನು ಕಾಡಿಯೋ ಬೇಡಿಯೋ ತರಲು ಅಥವಾ ಮೈಕ್ರೊಫಿಲಂ ಮತ್ತಿತರ ಸಾಧನಗಳ ಮೂಲಕ ಪ್ರತಿ ಮಾಡಿಕೊಳ್ಳಲು ದೊರೆಯುವ ಕೃತಿಗಳ ಪ್ರಾಮುಖ್ಯ ತಿಳಿದಿರಬೇಕು. ಇದಕ್ಕೆ ಸಂಗ್ರಹಕಾರರಿಗೆ ಸಾಹಿತ್ಯದ ಆಳವಾದ ಜ್ಞಾನ ಅತ್ಯಾವಶ್ಯಕ.

ಹಸ್ತಪ್ರತಿಗಳನ್ನು ನೋಡುವವರಿರಲಿ ಇಲ್ಲದಿರಲಿ, ಒಳಗಣ ವಿಷಯ ತಿಳಿಯಲಿ ತಿಳಿಯದಿರಲಿ ಒಟ್ಟಿನಲ್ಲಿ ಸಂಗ್ರಹ ಮಾಡುವ ಒಂದು ಹವ್ಯಾಸ ಕೆಲವರಲ್ಲಿ ಉಂಟಾಯಿತು. ಇಂತಹ ಕಾರ್ಯದಿಂದಲೇ ಕನ್ನಡ ಹಸ್ತಪ್ರತಿಗಳು ಭಾರತದ ಹಲವೆಡೆಗಳಲ್ಲಲ್ಲದೆ

1. ಅದೇ. ; ಪು. ೫೮-೫೯

ರದೇಶದಲ್ಲಿಯೂ ತಂಗಿರುವುದುಂಟು. ಈ ಹಸ್ತಪ್ರತಿಗಳ ಸಂಗ್ರಹ ಇಂತಹ ಷೆಗೆಂದು ಮೀಸಲಾಗಿರಲಿಲ್ಲ. ಹೀಗೆ ಸಂಗ್ರಹ ಮಾಡುವಾಗ ಇಂತಹ ಭಾಷೆಗೇ ಹೆಚ್ಚು ನ ಕೊಡಬೇಕೆಂಬುದು ಇತ್ತೀಚೆಗೆ ರೂಢಿಗೆ ಬಂದಿದೆ. ಆಯಾಯಾ ಭಾಷೆಗಳಲ್ಲಿ ್ಯೇಕವಾದ ಸಂಶೋಧನೆ, ಸಂಪಾದನೆ, ಪ್ರಕಟಣೆಗಳು ಪ್ರಾರಂಭವಾದ ಮೇಲೆ ತಮಗೆ ಕಾದುವನ್ನೇ ಸಂಗ್ರಹಿಸಿ ಸಂರಕ್ಷಿಸುವ ಹೊಣೆಯನ್ನು ಆಯಾ ಇಲಾಖೆ ಹೊತ್ತಿರುವುದು ಾ ಇತ್ತೀಚಿನದು.

೧೭೮೩ರಲ್ಲಿ ಇಂಜಿನಿಯರ್ ಆಗಿ ಭಾರತಕ್ಕೆ ಬಂದು, ಅನಂತರ ಪ್ರಥಮ ಸರ್ವೆಯರ್ ರಲ್ ಆಗಿ ನೇಮಕಗೊಂಡ ಕರ್ನಲ್ ಮೆಕೆಂಜಿಯೇ ಹಸ್ತಪ್ರತಿಗಳ ಸಂಗ್ರಹದ ಕೆಲಸ ಡಿದ ಮೊತ್ತಮೊದಲಿಗ ಎಂದೂ ಈತನ ಸಂಗ್ರಹದಲ್ಲಿ ಸೇರಿದ ಕನ್ನಡ ಹಸ್ತಪ್ರತಿಗಳು ೨೫೮ರಲ್ಲಿ ಸ್ಥಾಪಿತವಾದ ಮದರಾಸು ಸರ್ಕಾರಿ ಹಸ್ತಪ್ರತಿ ಭಂಡಾರಕ್ಕೆ ಸೇರ್ಪಡೆಯಾದ ಕೆಂಜಿ ಸಂಗ್ರಹವೇ ಪ್ರಪ್ರಥಮ ಸಾರ್ವಜನಿಕ ಕನ್ನಡ ಹಸ್ತಪ್ರತಿ ಭಂಡಾರ"[1] ಎಂದೂ ಎಚ್. ದೇವೀರಪ್ಪನವರು ಹೇಳಿದ್ದಾರೆ. ಮೈಸೂರಿನಲ್ಲಿ ೧೮೯೧ರಲ್ಲಿ ಸ್ಥಾಪಿತವಾದ ರ್ನಮೆಂಟ್ ಓರಿಯಂಟಲ್ ಲೈಬ್ರರಿಯೇ ಕರ್ನಾಟಕದಲ್ಲಿ ಹಸ್ತಪ್ರತಿಗಳನ್ನು ಗ್ರಹಿಸುವ ಸರ್ಕಾರದ ಮೊದಲ ಸಂಸ್ಥೆಯಾಯಿತು. ಇದನ್ನು ಬಿಟ್ಟರೆ ಸರ್ಕಾರೀ ಯಿಂದ ಸಂಗ್ರಹಿಸಿದ ಮತ್ತೊಂದು ಸಂಸ್ಥೆಯೆಂದರೆ ೧೯೩೯ರಲ್ಲಿ ಸ್ಥಾಪಿತವಾದ ರವಾಡದ ಕನ್ನಡ ಸಂಶೋಧನ ಸಂಸ್ಥೆ. ಕರ್ನಾಟಕದಲ್ಲಿ ಈಗ ಹಸ್ತಪ್ರತಿಗಳ ಸಂಗ್ರಹ ಡಿರುವ ಸಂಸ್ಥೆಗಳೆಂದರೆ ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾಲಯ, ಕುವೆಂಪು ಡ ಅಧ್ಯಯನ ಸಂಸ್ಥೆ, ಅರಮನೆಗೆ ಸೇರಿದ ಸರಸ್ವತೀ ಭಂಡಾರ, ಬೆಂಗಳೂರು ಕನ್ನಡ ್ಯಯನ ಕೇಂದ್ರ, ಕನ್ನಡ ಸಾಹಿತ್ಯ ಪರಿಷತ್ತು, ಧಾರವಾಡದ ಕನ್ನಡ ಅಧ್ಯಯನ ಪೀಠ ಖ್ಯವಾದುವಾಗಿವೆ. ಅಲ್ಲದೆ ಮಂಡ್ಯ ಶ್ರವಣಬೆಳಗೊಳ ಹೊಂಬುಜ ವರಾಂಗ ಡಬಿದರೆ ಕಾರ್ಕಳಗಳಲ್ಲಿನ ಜೈನ ಮಠಗಳು, ಮೂಡಬಿದರೆಯ ವೀರವಾಣಿ ಸಿದ್ಧಾಂತ ನ, ಶೃಂಗೇರಿ, ಉಡುಪಿ, ಮೇಲುಕೋಟೆ, ಸಿರಿಗೆರೆ, ಚಿತ್ರದುರ್ಗ, ಬಳ್ಳಾರಿ, ಹುಬ್ಬಳ್ಳಿಯ ಠಗಳಲ್ಲಿ ಹಸ್ತಪ್ರತಿಗಳ ಸಂಗ್ರಹವಿದೆ. ಈಚೆಗೆ ಬಿ.ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ ತ್ತು ಧರ್ಮಸ್ಥಳದ 'ಮಂಜೂಷಾ' ಹಸ್ತಪ್ರತಿ ಭಂಡಾರಗಳು ರೂಪುಗೊಂಡಿವೆ. ಹೀಗೆ ಶಮಂದಿರಗಳಲ್ಲಿ ದೊರೆಯುವ ಹಸ್ತಪ್ರತಿಗಳಲ್ಲದೆ ಹಲವಾರು ವಿದ್ವಾಂಸರ

---

1. ಕನ್ನಡ ಹಸ್ತಪ್ರತಿಗಳ ಇತಿಹಾಸ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೭೭. . ೬೮, ೧೦೧.

ಮನೆಗಳಲ್ಲಿಯೂ ಹಲವು ಅಳಿದುಳಿದ ಹಸ್ತಪ್ರತಿಗಳು ದೊರೆಯುತ್ತವೆ. ಇನ್ನು ಕೆಲವು ವಿದ್ವಾಂಸರು ತಮ್ಮ ಕೈಗೆ ಸಿಕ್ಕಿದವುಗಳನ್ನು ತಮ್ಮ ಮನೆಗಳಲ್ಲಿಯೇ ಸಂಗ್ರಹಿಸಿಟ್ಟು ಎಲ್ಲಿಯೋ ಹಾಳಾಗುತ್ತಿದ್ದುವನ್ನು ತಾವೇ ನಾಶಮಾಡುತ್ತಿರುವುದೂ ಉಂಟು.

ಕರ್ನಾಟಕದ ಹೊರಗೆ ಮದರಾಸು ಗೌರ್ನಮೆಂಟ್ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ, ಅಡಿಯಾರ್ ಲೈಬ್ರರಿ, ಕೊಲ್ಲಾಪುರದ ಶ್ರೀ ಲಕ್ಷ್ಮೀಸೇನ ಜೈನಮಠ, ಬಾಹುಬಲಿ ಆಶ್ರಮ, ಪೂನಾದ ಭಂಡಾರ್ಕರ್ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾನಿಲಯದ ಗ್ರಂಥಭಂಡಾರ, ಬಿಹಾರದ ಆರಾದಲ್ಲಿನ ಜೈನ ಸಿದ್ಧಾಂತಭವನ, ತಂಜಾವೂರು ಸರಸ್ವತೀಮಹಲ್ ಲೈಬ್ರರಿ ಮತ್ತು ಇತರೆಡೆ ಕನ್ನಡ ಹಸ್ತಪ್ರತಿಗಳು ಸಂಗ್ರಹವಾಗಿರುವುದು ಕಂಡುಬರುತ್ತದೆ. ಈ ಎಲ್ಲ ಹಸ್ತಪ್ರತಿ ಭಂಡಾರಗಳನ್ನೂ ಸಂಗೃಹೀತ ಕೃತಿಗಳನ್ನೂ ನಾನೇ ನೋಡಿದ್ದೇನೆ. ಕೆಲವೆಡೆ ಪೂರ್ಣವಾಗಿ ಇಲ್ಲವೇ ಭಾಗಶಃ ಕನ್ನಡ ಹಸ್ತಪ್ರತಿಗಳ ಮೈಕ್ರೊಫಿಲಂ ಕಾರ್ಯ ಮಾಡಲಾಗಿದೆ. ಅವುಗಳು ಈಗ ಕನ್ನಡ ಅಧ್ಯಯನ ಸಂಸ್ಥೆಯಲ್ಲಿವೆ.[1] ನಾನು ನೋಡಲಾಗದಿರುವ ಇನ್ನೂ ಅನೇಕ ಕಡೆಗಳಲ್ಲಿ ಕನ್ನಡ ಹಸ್ತಪ್ರತಿಗಳು ದೊರೆಯುತ್ತವೆಂದು ತಿಳಿದುಬರುತ್ತದೆ. ಅವೆಂದರೆ ಮಹಾರಾಷ್ಟ್ರದ ಕರಂಜಾ, ಮುಂಬಯಿಯ ಐಲಕಲಾಲ್ ಪನ್ನಾಲಾಲ್ ದಿಗಂಬರ ಜೈನ ಸರಸ್ವತೀ ಭಂಡಾರ, ಆಂಧ್ರಪ್ರದೇಶದ ಮೆಹಬೂಬ್ ನಗರದ ಒಬ್ಬ ಖಾಸಗೀ ವ್ಯಕ್ತಿಯ ಮನೆಯಲ್ಲಿ ಹಸ್ತಪ್ರತಿ ಸಂಗ್ರಹವಿದೆಯೆಂದು ತಿಳಿದುಬರುತ್ತದೆ. ಖಾಸಗೀ ವ್ಯಕ್ತಿಗಳೆಂದಾಗ ನೆನಪಿಗೆ ಬರುವ ಅಂಶವೆಂದರೆ ಕರ್ನಾಟಕದ ಮೂಲೆಮೂಲೆಗಳಲ್ಲಿ, ಮನೆಮನೆಗಳಲ್ಲಿ ಹೆಚ್ಚೊ ಕಡಮೆಯೊ ಹಸ್ತಪ್ರತಿಗಳು ದೊರೆಯುತ್ತವೆಂಬುದನ್ನು ನೆನಪಿನಲ್ಲಿಡಬೇಕು. ಭಾರತದ ಹೊರಗಡೆ ಎಂದರೆ ಲಂಡನ್ನಿನ ಇಂಡಿಯಾ ಆಫೀಸ್ ಲೈಬ್ರರಿಯಲ್ಲಿ ಕೆಲವು ಕನ್ನಡ ಹಸ್ತಪ್ರತಿಗಳು ದೊರೆಯುತ್ತವೆ.[2]

ನಾನು ಈ ಮೊದಲೇ ತಿಳಿಸಿರುವಂತೆ ಇದರ ಸಂಗ್ರಹಕಾರ್ಯ ತುಂಬಾ ಕಷ್ಟಸಾಧ್ಯವೂ, ಶ್ರಮಪೂರಿತವೂ ಆದುದಾಗಿದೆ. ಸಂಗ್ರಹಕಾರ್ಯಕ್ಕೆ ಹೊರಟಾಗ ಅನೇಕ ಎಡರುತೊಡರುಗಳಾಗಿರುವುದುಂಟು. ದಿ|| ರಾ. ನರಸಿಂಹಾಚಾರ್ಯರು ಮತ್ತು ಅವರ ಸಹೋದ್ಯೋಗಿಗಳು ಶಾಸನ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವಾಗ್ಗೆ ೧೯ನೇ ಶತಮಾನದ

---

1. ವಿವರಗಳಿಗೆ : ಕನ್ನಡ ಹಸ್ತಪ್ರತಿಗಳ ಮೈಕ್ರೊಫಿಲಂ ಸೂಚಿ; ಸಂ. ಬಿ.ಎಸ್. ಸಣ್ಣಯ್ಯ.
2. ಎನ್. ಅನಂತರಂಗಾಚಾರ್ ಅವರು ೨೮ ಹಸ್ತಪ್ರತಿ ಭಂಡಾರಗಳ ಪಟ್ಟಿ ಮಾಡಿದ್ದಾರೆ. (ಪ್ರ. ಕ. ೩೧-೨)

ನೆಯ ಭಾಗದಲ್ಲಿ ಗಂಟುಮೂಟೆಗಳನ್ನು ಕಟ್ಟಿಕೊಂಡು, ಲಾಟೀನುಗಳನ್ನು ಡಿದುಕೊಂಡು ಹಳ್ಳಿಹಳ್ಳಿಗಳನ್ನು ಸುತ್ತಿ ಹಸ್ತಪ್ರತಿಗಳ ಸಂಗ್ರಹ ಮಾಡಿರುವುದುಂಟು. ಘಗು. ಹಳಕಟ್ಟಿಯವರು ಯಾರ ನೆರವೂ ಇಲ್ಲದೆ ಶ್ರದ್ಧಾಪೂರ್ವಕವಾಗಿ ವಚನಸಾಹಿತ್ಯದ ಸ್ತಪ್ರತಿಗಳ ಸಂಗ್ರಹಕ್ಕಾಗಿ ಹಗಲಿರುಳೂ ದುಡಿದಿರುವುದುಂಟು. ಹಸ್ತಪ್ರತಿಗಳ ಸಂಗ್ರಹ, ರಕ್ಷಣೆ, ಸಂಪಾದನೆ ಮತ್ತು ಪ್ರಕಟಣೆಗಾಗಾಯೇ ೧೮೯೧ರಲ್ಲಿ ಸರ್ಕಾರೀ ಪ್ರಾಚ್ಯ ಂಥಭಂಡಾರ ಮೈಸೂರಿನಲ್ಲಿ ಸ್ಥಾಪಿತವಾದಮೇಲೆ ಎ. ಮಹದೇವ ಶಾಸ್ತ್ರೀ, ್. ಶಾಮಶಾಸ್ತ್ರೀ ಮೊದಲಾದ ಹಿರಿಯರು ಸಂಗ್ರಹಕಾರ್ಯವನ್ನು ತೀವ್ರಗೊಳಿಸಿ ಲವಾರು ಉತ್ತಮ ಗ್ರಂಥಗಳನ್ನು ಸಂಸ್ಥೆಗೆ ಸೇರಿಸಿದ್ದಾರೆ. ಎಚ್. ದೇವೀರಪ್ಪನವರು ರಕ್ಕಾಗಿ ಅಪಾರ ಕಾಣಿಕೆ ಸಲ್ಲಿಸಿದ್ದಾರೆ. ಇತ್ತೀಚೆಗೆ ಎಸ್. ಶಿವಣ್ಣ ಅವರು ಬೆಂಗಳೂರು ಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರಕ್ಕಾಗಿ ಶ್ರದ್ಧೆಯಿಂದ ದುಡಿದು ಹಲವಾರು ತ್ತಮ ಹಸ್ತಪ್ರತಿಗಳ ಸಂಗ್ರಹ ಮಾಡಿದ್ದಾರೆ. ಹಾಗೆಯೆ ಬೆಂಗಳೂರಿನ ಬಿ.ಎಂ.ಶ್ರೀ. ತಿಷ್ಠಾನ ಮತ್ತು ಧರ್ಮಸ್ಥಳದ ಮಂಜೂಷಾ ಹಸ್ತಪ್ರತಿ ಭಂಡಾರಗಳು ಹಸ್ತಪ್ರತಿಗಳ ಗ್ರಹದಲ್ಲಿ ಸ್ತುತ್ಯ ಕಾರ್ಯ ಮಾಡುತ್ತಿವೆ. ಇವು ಇನ್ನೂ ತೀವ್ರ ಕಾರ್ಯಕ್ರಮಗಳನ್ನು ೊಂಡು ಮತ್ತೂ ಹೆಚ್ಚಿನ ಸಂಗ್ರಹ ಮಾಡಬೇಕಿದೆ. ಹೀಗೆ ಹತ್ತಾರು ಜನ ವಿದ್ವಾಂಸರು ಯರು ಆಸಕ್ತಿವಹಿಸಿ ಈ ಕೆಲಸ ಮಾಡಿರುವುದರಿಂದಲೇ ಇಂದು ಪ್ರಾಚೀನ ಸಾಹಿತ್ಯದ ಕಟಣೆಗೆ ಹಸ್ತಪ್ರತಿಗಳು ದೊರೆಯುತ್ತಿವೆ.

ಹಸ್ತಪ್ರತಿಗಳ ಸಂಗ್ರಹಕ್ಕಾಗಿ ಕೆಲಸಮಾಡಿದ ಅನೇಕರಿಗೆ ವಿವಿಧ ರೀತಿಯ ುಭವಗಳಾಗಿರಬಹುದು. ನನ್ನ ಅನುಭವಗಳಲ್ಲಿ ಕೆಲವನ್ನಾದರೂ ಇಲ್ಲಿ ನಿರೂಪಿಸಿದರೆ ಗ್ರಹಕಾರ್ಯದ ಬಗೆಗೆ ತಿಳುವಳಿಕೆ ಮೂಡಿದಂತಾಗುತ್ತದೆಂದು ಭಾವಿಸಿದ್ದೇನೆ.

ಮಠಗಳು ಮತ್ತು ಖಾಸಗಿ ವ್ಯಕ್ತಿಗಳು ಕೆಲವರು ಪರಿಶೀಲಿಸಲೂ ಅವಕಾಶ ಾಕರಿಸಿರುವುದುಂಟು. ಆಂಧ್ರಪ್ರದೇಶದಲ್ಲಿರುವ ಮಂತ್ರಾಲಯದ ಮಠದಲ್ಲಿ ಕೆಲವು ್ನಡ ಹಸ್ತಪ್ರತಿಗಳಿವೆಯೆಂದು ತಿಳಿದುಬಂದಮೇರೆಗೆ ವಿಶ್ವವಿದ್ಯಾನಿಲಯದಿಂದ ುತ್ತಿದ್ದೇವೆಂದು ಕಾಗದ ಬರೆದು ಹೋದರೂ ಅಲ್ಲಿಯ ವ್ಯವಸ್ಥಾಪಕರು ನೋಡಲೂ ಡ ಅವಕಾಶ ಕೊಡಲು ನಿರಾಕರಿಸಿದರು. ಮತ್ತೊಮ್ಮೆ ಅಲ್ಲಿಗೆ ಹೋಗಿ ನೋಡುವ ರಕಾಶವೇ ಒದಗಿಬರಲಿಲ್ಲ. ಹಾಗೆಯೇ ಕೊಳ್ಳೇಗಾಲ ಮತ್ತಿತರ ಕೆಲವು ಖಾಸಗಿ ಕ್ತಿಗಳಲ್ಲಿಯೂ ಇಂತಹುದೇ ಅನುಭವವಾಯಿತು. ಚಾಮರಾಜನಗರ ತಾಲ್ಲೂಕಿನ ರವೆ ಎಂಬ ಗ್ರಾಮದ ಪಂಡಿತರೊಬ್ಬರ ಮನೆಯಲ್ಲಿ ಸಂಗ್ರಹವಾಗಿದ್ದ ಅಮೂಲ್ಯ

ಹಸ್ತಪ್ರತಿಗಳು ನಾವು ಪರಿಶೀಲಿಸಲು ಹೋಗುವವೇಳೆಗೆ ಜಾಯಿಕಾಯಿ ಪೆಟ್ಟಿಗೆಯಲ್ಲಿದ್ದು ನೀರು ತುಂಬಿಕೊಂಡು ಕೊಳೆತು ನಾರುತ್ತಿದ್ದುವು. ಬಾಯಿ ಮೂಗಿಗೆ ಬಟ್ಟೆ ಕಟ್ಟಿಕೊಂಡು ಸಾಧ್ಯವಾದಷ್ಟುವುಟ್ಟಿಗೆ ತೆಗೆದು ಪರಿಶೀಲಿಸಿ ಕೆಲವನ್ನಾದರೂ ಖರೀದಿಸಿ ಸಂಶೋಧಾನಾಲಯಕ್ಕೆ ಸೇರಿಸಲು ಸಾಧ್ಯವಾಯಿತು. ಮತ್ತೆ ಕೆಲವಡೆ ಆತ್ಮೀಯವಾಗಿ ಬರಮಾಡಿಕೊಂಡು ಹಸ್ತಪ್ರತಿಗಳ ಪರಿಶೀಲನೆಗೆ, ಪ್ರತಿಮಾಡಿಕೊಳ್ಳುವುದಕ್ಕೆ ತುಂಬು ಸಹಕಾರ ನೀಡಿದ ಮಹನೀಯರೂ ಇದ್ದಾರೆ. ಇದೇ ಚಾಮರಾಜನಗರ ತಾಲ್ಲೂಕಿನ ಬೇಡಮೂಡಲು ಎಂಬ ಚಿಕ್ಕ ಹಳ್ಳಿಯಲ್ಲಿ ಶ್ರೀ ಪಂಡಿತ ಸಂಪತ್ಕುಮಾರಾಚಾರ್ಯ ಎಂಬುವವರ ಮನೆಯಲ್ಲಿ ಸಂಗ್ರಹವಾಗಿದ್ದ ಸಂಸ್ಕೃತ ಕನ್ನಡ ಹಸ್ತಪ್ರತಿಗಳು ಅತ್ಯಂತ ಸುಸ್ಥಿತಿಯಲ್ಲಿದ್ದುವು. ಅವರು ನಮ್ಮನ್ನು ಊಟೋಪಚಾರಗಳಿಂದ ಸತ್ಕರಿಸಿ ಗೋಣಿಚೀಲಗಳಲ್ಲಿ ತುಂಬಿ ಮೋಟಾರುರಸ್ತೆಯವರೆಗೆ ತಮ್ಮ ಗಾಡಿಯಲ್ಲಿ ಹೇರಿಕಳುಹಿಸಿದ ಸುಸಂಸ್ಕೃತ ಹಿರಿತನ ನನ್ನ ಕಣ್ಮುಂದೆ ಇಂದೂ ಅಚ್ಚಳಿಯದಿದೆ. ಹಾಗೆಯೇ ಶ್ರವಣಬೆಳಗೊಳದ ಶ್ರೀ ರಾಜೇಂದ್ರಕುಮಾರ್ ಎಂಬುವವರ ಮನೆಯಲ್ಲಿ ಸಂಗ್ರಹವಾಗಿದ್ದ ಹಸ್ತಪ್ರತಿಗಳನ್ನು ಅವರ ಸಹಧರ್ಮಿಣಿಯವರು ತಮ್ಮ ಪತಿ ಊರಿನಲ್ಲಿಲ್ಲದಿದ್ದರೂ, ಪರಿಶೀಲಸಿ ಮೈಕ್ರೊಫಿಲಂ ಮಾಡಿಕೊಳ್ಳಲು ಅವಕಾಶ ನೀಡಿದುದನ್ನು ಎಂದೂ ಮರೆಯುವಂತಿಲ್ಲ. ಸಹಕಾರ ನೀಡುವ ಮಠಗಳಲ್ಲಿ ಬಹು ಮುಂಚೂಣಿಯ ಪಾತ್ರಗಳೆಂದರೆ ಜೈನಮಠಗಳು. ಇಲ್ಲಿಯ ಆತ್ಮೀಯತೆ ಸಹಕಾರಗಳನ್ನು ತುಂಬು ಹೃದಯದಿಂದ ನೆನೆಸಿಕೊಳ್ಳಬೇಕಾಗಿದೆ. ಅವರು ನಮ್ಮನ್ನು ಸಾಂಸ್ಕೃತಿಕ ಸಂಪತ್ತಿನ ರಕ್ಷಣೆಗಾಗಿ ಟೊಂಕಕಟ್ಟಿ ನಿಂತಿರುವ ಹಿರಿಯ ವ್ಯಕ್ತಿಗಳೆಂದೇ ಪರಿಗಣಿಸುತ್ತಾರೆ. ಶ್ರವಣಬೆಳಗೊಳ ಹೊಂಬುಜ ಮೊದಲಾದೆಡೆಗಳಲ್ಲಿ ಹಸ್ತಪ್ರತಿಗಳ ಪರಿಶೀಲನೆಗೆ ಹೋದವರಿಗೆಲ್ಲಾ ಈ ಅನುಭವವಾಗಿರಬಹುದು.

ಹಸ್ತಪ್ರತಿಗಳು ಇಂತಿಲ್ಲಿ ದೊರೆಯುತ್ತವೆ ಎಂಬ ಬಗೆಗೆ ಮಾಹಿತಿಯನ್ನು ಒದಗಿಸಿಕೊಳ್ಳುವುದು ಹೇಗೆಂದು ಕೆಲವರು ನನ್ನನ್ನು ಪ್ರಶ್ನಿಸಿರುವುದುಂಟು. ಇದಕ್ಕಾಗಿ ಹಲವು ವಿಧದಿಂದ ಪ್ರಯತ್ನಿಸಬಹುದು. ಸಂಸ್ಥೆಗೆ ಬರುವ ಕೆಲವರಾದರೂ ಈ ಬಗೆಗೆ ಆಸಕ್ತಿಯುಳ್ಳವರಾಗಿರುತ್ತಾರೆ. ಅವರಿಗೆ ತಮ್ಮಲ್ಲಿ ಸಂಗ್ರಹವಾಗಿರುವ ಹಸ್ತಪ್ರತಿಗಳನ್ನು ತೋರಿಸಿ, ಕೆಲಸ ಮಾಡುವ ರೀತಿಯನ್ನು ವಿವರಿಸಿ, ಅದರ ಪ್ರಾಮುಖ್ಯತೆಯನ್ನು ಅರಿವು ಮಾಡಿಕೊಟ್ಟಾಗ ತಮಗೆ ತಿಳಿದಂತಹ ಕೆಲವು ಸಂಸ್ಥೆಗಳನ್ನೊ ವ್ಯಕ್ತಿಗಳನ್ನೊ ತೋರಿಸುವುದುಂಟು; ಇಲ್ಲವೆ ಆ ಬಗೆಗೆ ತಿಳಿದು ಮಾಹಿತಿ ಒದಗಿಸಿಕೊಡಬಹುದು.

ಸ್ತಪ್ರತಿಗಳ ಪ್ರದರ್ಶನವನ್ನೇರ್ಪಡಿಸಿ ಕರಪತ್ರಗಳನ್ನು ಮುದ್ರಿಸಿ ಹಂಚಿ ಉಪಯೋಗ ಡೆಯಬಹುದು. ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ ವಿವರಗಳನ್ನು ತಿಳಿದು ಮುಂದುವರಿಯಬಹುದು. ಖಾಸಗಿ ವ್ಯಕ್ತಿಗಳಲ್ಲಿರುವುದನ್ನು ಪತ್ತೆ ಹಚ್ಚುವುದು ಸ್ವಲ್ಪ ಷ್ಟದ ಕೆಲಸವೇ ಆಗಿದೆ. ಅದಕ್ಕಾಗಿ ಹಳ್ಳಿಯಿಂದ ಹಳ್ಳಿಗೆ ಹೋಗಿ ಮಾಹಿತಿ ಸಂಗ್ರಹಿಸಿ, ವಕಾಶ ದೊರೆತಲ್ಲಿ ಪರಿಶೀಲಿಸುವುದುಂಟು. ಇಂತಹ ಕಡೆಗಳಲ್ಲಿ ಅಲ್ಲಿಯವರೆಗೆ ಳಿದಿರುವ ಬೇರೆಡೆಯಲ್ಲಿ ದೊರೆಯುವ ಹಸ್ತಪ್ರತಿಗಳ ವಿಷಯ ತಿಳಿಸುತ್ತಾರೆ. ಹೀಗೆ ಲ್ಲಿಂದಲ್ಲಿಗೆ, ಅಲ್ಲಿಂದ ಮತ್ತೊಂದೆಡೆಗೆ ಹೋಗಲು ಅವಕಾಶ ಒದಗಿಬರುತ್ತದೆ. ಹಿಂದೆ ್ರಾಚ್ಯವಿದ್ಯಾ ಸಂಶೋಧನಾಲಯದಿಂದ ಹಸ್ತಪ್ರತಿಗಳ ಪ್ರಾಮುಖ್ಯತೆ, ಪವಿತ್ರತೆ ೊದಲಾದುವುಗಳ ಬಗೆಗೆ ವಿವರಿಸಿ, ಉಚಿತವಾಗಿ ಕೊಟ್ಟರೆ ಅವರ ಹೆಸರನ್ನು ಸಂಸ್ಥೆಯಲ್ಲಿ ಾಕುವುದು, ಮಾರಾಟದಿಂದ ಬರುವ ಹಣ ಇತ್ಯಾದಿ ಮಾಹಿತಿಗಳನ್ನೊಳಗೊಂಡ 'ಪ್ರಸಿದ್ಧ ತ್ರಿಕೆ'ಯನ್ನು ವಿವಿಧ ಸಂಸ್ಥೆಗಳಿಗೆ ವ್ಯಕ್ತಿಗಳಿಗೆ ಸರಕಾರಿ ಕಚೇರಿಗಳಿಗೆ ರವಾನಿಸಿ ಾಹಿತಿಯನ್ನು ಪಡೆದಿರುವುದುಂಟು.

ನಾನು ಕೆಲವು ತಾಲ್ಲೂಕುಗಳ ತಹಸೀಲ್ದಾರರುಗಳಿಗೆ ಪ್ರಸಿದ್ಧ ಪತ್ರಿಕೆಗಳನ್ನು ಕಳುಹಿಸಿ ಸ್ತಪ್ರತಿಗಳ ಬಗೆಗೆ ಮಾಹಿತಿಯನ್ನು ಒದಗಿಸಿಕೊಡಬೇಕೆಂದು ಕೇಳಿಕೊಂಡೆನು. ಕೆಲವರು ುತ್ತರವನ್ನೇ ನೀಡದಿದ್ದರೂ, ಮತ್ತೆ ಕೆಲವರು ಸುಲಭವಾದ ನಕಾರಾತ್ಮಕ ಮರುಓಲೆ ಳುಹಿಸಿದರು. ಹೊನ್ನಾವರ ಮತ್ತು ಚಾಮರಾಜನಗರ ತಾಲ್ಲೂಕುಗಳ ತಹಸೀಲ್ದಾರರು ತ್ಯಂತ ಶ್ರದ್ಧೆಯಿಂದ ತಮ್ಮ ರೆವಿನ್ಯೂ ಇನ್‌ಸ್ಪೆಕ್ಟರುಗಳ ಮೂಲಕ ಆದಷ್ಟು ಮಾಹಿತಿ ಂಗ್ರಹಿಸಿ ವಿಷಯ ತಿಳಿಸಿದರು. ನಾನು ಸಹೋದ್ಯೋಗಿಗಳೊಡನೆ ಹೋದಾಗ್ಗೆ ನಮ್ಮ ೊತೆಯಲ್ಲಿ ತಮ್ಮ ಸಹಾಯಕರನ್ನು ಕಳುಹಿಸಿ ಹಸ್ತಪ್ರತಿಗಳ ಪರಿಶೀಲನೆಗೆ ಹಾಗೂ ಂಗ್ರಹಕ್ಕೆ ಅನುವು ಮಾಡಿಕೊಟ್ಟುದನ್ನು ಇಲ್ಲಿ ನೆನೆಯಲೇಬೇಕಾಗಿದೆ. ಹೊನ್ನಾವರದ ಹಸೀಲ್ದಾರರ ಸಹಾಯವಿಲ್ಲದಿದ್ದರೆ ಮಾವಿನಕುರ್ವೆಯಂತಹ ದ್ವೀಪಕ್ಕೆ ಹೋಗಿ ಕೆಲವು ಸ್ತಪ್ರತಿಗಳನ್ನಾದರೂ ಸಂಗ್ರಹಿಸಲು ಸಾಧ್ಯವಾಗುತ್ತಿರಲಿಲ್ಲ; ಚಾಮರಾಜನಗರದ ಹಸೀಲ್ದಾರರ ಸಹಾಯವಿಲ್ಲದಿದ್ದರೆ ಚಾಮರಾಜನಗರ ಮಲೆಯೂರು ಹರವೆ ಮತ್ತು ತರ ಹಳ್ಳಿಗಳಲ್ಲಿ ದೊರೆತ ಹಸ್ತಪ್ರತಿಗಳನ್ನು ಪರಿಶೀಲನೆ ಮಾಡಿ ಸಾಕಷ್ಟು ಹಸ್ತಪ್ರತಿ ಂಗ್ರಹ ಮಾಡಲು ಅವಕಾಶ ಒದಗಿಬರುತ್ತಿರಲಿಲ್ಲವೇನೊ. ಹೀಗೆ ಒಂದಲ್ಲ ಒಂದು ೀತಿಯಲ್ಲಿ ಪ್ರಯತ್ನಮಾಡಿ ಹಸ್ತಪ್ರತಿಗಳ ಸಂಗ್ರಹಕ್ಕೆ ಪ್ರಯತ್ನಿಸುವುದು ಸೂಕ್ತವಾಗಿದೆ.

ಹಸ್ತಪ್ರತಿಗಳ ಸಗ್ರಹಕ್ಕೆ ಹೋದವರು ಮೊದಲು ಅವುಗಳ ಪರಿಶೀಲನೆ

ಮಾಡಬೇಕಾಗುತ್ತದೆ. ಈಗಾಗಲೆ ದೊರೆತಿರುವ ಕೃತಿಗಳ ಮಾಹಿತಿಯನ್ನು ಹಸ್ತಪ್ರತಿ ಸೂಚಿಗಳ ಮೂಲಕ ಪರಿಶೀಲಿಸುವುದಲ್ಲದೆ ತಾವೂ ಮಹತ್ವದ ಕೃತಿಗಳಾವುವೆಂಬುದನ್ನು ತಿಳಿದಿರಬೇಕಾಗುತ್ತದೆ. ಇದಕ್ಕೆ ಪೂರಕವಾಗಿ ಅತ್ಯಗತ್ಯವಾಗಿ ಬೇಕಾದ ಶ್ರದ್ಧೆ ನಿಷ್ಠೆ ತಾಳ್ಮೆಯುಳ್ಳವರಾಗಬೇಕಾಗುತ್ತದೆ. ಹಸ್ತಪ್ರತಿಗಳ ಮೇಲೆ ಯಾರೋ ಹಚ್ಚಿದ ತಲೆಬರಹವನ್ನು ನೋಡಿ ಇದು ಈ ಕೃತಿ ಎಂದು ತೀರ್ಮಾನಿಸಿ ಮುಂದುವರಿಯುವುದು ಖಂಡಿತ ಕೂಡದು. ಇದಕ್ಕೆ ನನ್ನ ಅನುಭವದ ಕೆಲವು ಮಾತುಗಳನ್ನು ಓದುಗರ ಅವಗಾಹನೆಗೆ ತರುತ್ತಿದ್ದೇನೆ.

ಡಿ.ಎಲ್. ನರಸಿಂಹಚಾರ್ ಅವರು ಕಂಡುಹಿಡಿದ 'ವಡ್ಡಾರಾಧನೆ' ಕೃತಿಯ ಅನಂತರ ದೊರೆತ ಮಹತ್ವದ ಶೋಧನೆಯ ಕೃತಿಯೆಂದರೆ ೨ನೇ ನಾಗವರ್ಮನ 'ವರ್ಧಮಾನಪುರಾಣ' ಇದನ್ನು ಕಂಡುಹಿಡಿದದ್ದು ಬಹುರೋಚಕ ಸನ್ನಿವೇಶದಲ್ಲಿ. ಮೊದಲೇ ಬಹಳ ಜನ ಮೂಡಬಿದರೆಯ ಜೈನಧರ್ಮಶಾಲೆಯಲ್ಲಿದ್ದ ಹಸ್ತಪ್ರತಿಗಳನ್ನು ಪರಿಶೀಲಿಸಿದ್ದರು. ಆದರೆ ನಾನು ಹೋದಾಗ್ಗೆ 'ವರ್ಧಮಾನ ಪುರಾಣ' ದೊರೆತದ್ದು ಹಸ್ತಪ್ರತಿಗಳ ಕೂಲಂಕಷ ಪರಿಶೀಲನೆಯಿಂದ. ೧೯೭೦ರಲ್ಲಿ ಅಲ್ಲಿ ದೊರೆಯುವ ಮುಖ್ಯ ಹಸ್ತಪ್ರತಿಗಳೆಲ್ಲವನ್ನೂ ಪರಿಶೀಲಿಸುವ, ಮುಖ್ಯವಾದುವನ್ನು ಮೈಕ್ರೊಫಿಲಂ ಮಾಡಿಸುವ ಕೆಲಸದಲ್ಲಿ ನಿರತನಾಗಿದ್ದ ನನಗೆ ಕೊನೆಯಲ್ಲಿ ಮಹಡಿಯ ಮೇಲೆ ಕೆಲವು ಕಟ್ಟುಗಳಿವೆ ಎಂದು ತಿಳಿದುಬಂದಿತು. ಮೇಲ್ವಿಚಾರಕರಿಗೆ ಇವನ್ನು ನೋಡಬೇಕೆಂಬ ನನ್ನ ಅಭಿಲಾಷೆಯನ್ನು ತಿಳಿಸಿದಾಗ "ಅಲ್ಲಿ ಎಲ್ಲ ಹಿಂದೆಯೇ ನೋಡಿಯಾಗಿದೆ, ಯಾವ ಉತ್ತಮ ಕೃತಿಗಳೂ ಇಲ್ಲ" ಎಂಬ ಉತ್ತರ ಬಂದಿತು. ಇದರಿಂದ ಸಮಾಧಾನಗೊಳ್ಳದ ನಾನು ಅವುಗಳನ್ನು ನೋಡಿಯೇ ತೀರಬೇಕೆಂಬ ಹಠದೊಡನೆ ಅವರನ್ನು ಒಪ್ಪಿಸುವಲ್ಲಿ ಯಶಸ್ವಿಯಾದೆನು. ಎಲ್ಲ ಕಟ್ಟುಗಳನ್ನೂ ಬಿಚ್ಚಿ, ನೋಡುತ್ತಿರುವಾಗ್ಗೆ ಅಗ್ಗಳನ 'ಚಂದ್ರಪ್ರಭಪುರಾಣ' ಎಂಬ ತಲೆಬರಹವುಳ್ಳ ಕಾಗದದ ಬಿಡಿಹಾಳೆಗಳ ಕಟ್ಟೊಂದು ದೊರೆಯಿತು. ಯಾವತ್ತೂ ತಲೆಬರಹ ನೋಡಿ ಮುಂದುವರಿಯದ ನಾನು ಅದನ್ನು ಬಿಚ್ಚಿ ಹಾಳೆಗಳನ್ನು ತಿರುವುತ್ತಾ ಆಶ್ವಾಸಾಂತ್ಯಗಳನ್ನು ನೋಡುತ್ತಾ ಹೋದಂತೆ ಒಂದು ಹಾಳೆಯಲ್ಲಿ ನಾಗವರ್ಮನ ವರ್ಧಮಾನ ಪುರಾಣದ ಒಂದು ಅಶ್ವಾಸಾಂತ್ಯದ ಬರಹ ಕಣ್ಣಿಗೆ ಬಿದ್ದಿತು. ಈ ಹಸ್ತಪ್ರತಿಯ ಪ್ರಾಮುಖ್ಯವರಿತಿದ್ದ ನನಗೆ ರೋಮಾಂಚನಾಯಿತು. ಆ ಇಡೀ ಹಸ್ತಪ್ರತಿಯ ಹಾಳೆಗಳನ್ನೆಲ್ಲಾ ಪರಿಶೀಲಿಸಿ 'ವರ್ಧಮಾನ ಪುರಾಣ'ಕ್ಕೆ ಸಂಬಂಧಿಸಿದುವನ್ನು ಕ್ರಮವಾಗಿ ಜೋಡಿಸಿ ಮೈಕ್ರೊಫಿಲಂ ಮಾಡಿಸಿ ತಂದೆನು; ಅದನ್ನು ಕಂಡುಹಿಡಿದ ಯಶಸ್ಸಿಗೆ ಪಾತ್ರನಾದೆನು. ಆ ಕಟ್ಟಿನಲ್ಲಿ ಅಗ್ಗಳನ 'ಚಂದ್ರಪ್ರಭಪುರಾಣ' ಆಚಣ್ಣನ 'ವರ್ಧಮಾನ ಪುರಾಣ' ಮತ್ತು ನಾಗವರ್ಮನ

'ವರ್ಧಮಾನ ಪುರಾಣ' ಈ ಮೂರು ಕೃತಿಗಳ-ಒಂದೇ ಆಕಾರದ ಮತ್ತು ಬರಹದ ಹಾಳೆಗಳು ಅಸ್ತವ್ಯಸ್ತವಾಗಿ ಸೇರಿಕೊಂಡಿದ್ದುವು. ಹೀಗೆ ಹಸ್ತಪ್ರತಿಯನ್ನು ಒಳತೆರೆದು ಕೂಲಂಕಷ ಪರಿಶೀಲನೆ ನಡೆಸದಿದ್ದಲ್ಲಿ ಈ ಕೃತಿ ನಮಗೆ ದೊರೆಯುತ್ತಿತ್ತೊ ಇಲ್ಲವೋ ಹೇಳುವುದು ಕಷ್ಟವಾಗಿದೆ.

ಹಾಗೆಯೆ ನಾನು ಪದ್ಮಕವಿಯ 'ವರ್ಧಮಾನ ಚರಿತೆ'ಯನ್ನು ಸಂಪಾದಿಸುತ್ತಿದ್ದಾಗ ದೊರೆಯುವ ಎಲ್ಲ ಪ್ರತಿಗಳ ಪಾಠಾಂತರಗಳನ್ನು ಗುರುತಿಸುತ್ತಿದ್ದೆನು. ಮೈಕ್ರೊಫಿಲಂ ರೂಪದಲ್ಲಿ ಪದ್ಮಕವಿಯ ಹೆಸರಿನಲ್ಲಿದ್ದ ಒಂದು ಹಸ್ತಪ್ರತಿ ಇದುವರೆಗೂ ಗೊತ್ತಿಲ್ಲದಿದ್ದ ಜಿನಸೇನ ದೇಶವ್ರತಿಯ 'ವರ್ಧಮಾನ ಪುರಾಣ'ವೆಂಬ ಸಾಂಗತ್ಯ ಕೃತಿ ಎಂಬುದು ತಿಳಿದು ಬಂದಿತು. ಮತ್ತೊಂದು ಸಂದರ್ಭದಲ್ಲಿ ಹೊಸಕೃತಿ ದೊರೆತುದೆಂದರೆ ಮೂಡಬಿದರೆಯ ಜೈನಧರ್ಮಶಾಲೆಯಲ್ಲಿಯೆ. ಈ ಪ್ರತಿಯ ತಲೆಬರಹ ಬಂಧುವರ್ಮನ 'ಜೀವಸಂಬೋಧನಂ' ಎಂದಿದ್ದಿತು. ಇದೇ ರೀತಿಯಲ್ಲಿ ಅದು ಗ್ರಂಥಸೂಚಿಯಲ್ಲಿಯೂ ಅಚ್ಚಾಗಿದ್ದಿತು. ಆದರೆ ತೆರೆದು ನೋಡಿದಾಗ ಬೇರೆ ಕೃತಿಯಾಗಿರುವುದು ಕಂಡುಬಂದಿತು. 'ಜೀವ ಸಂಬೋಧನೆ'ಯ ಪರಿಚಯ ನನಗಿದ್ದುದರಿಂದ ಮೊದಲು ಓದುತ್ತಿದ್ದಂತೆಯೇ ಇದುವರೆಗೆ ಯಾರಿಗೂ ತಿಳಿಯದಿದ್ದ ಬಂಧುವರ್ಮನ 'ಸತಿಧರ್ಮಸಾರ'ವೆಂಬ ಹೊಸ ಸಾಂಗತ್ಯ ಕೃತಿಯೆಂಬುದು ಖಚಿತವಾಯಿತು.

ಹೀಗೆ ಒಂದು ಕೃತಿಯನ್ನು ಮತ್ತೊಂದರ ಹೆಸರಿನಲ್ಲಿ ಗುರುತಿಸಿರುವುದು ಕನ್ನಡದಂತೆ ಇತರ ಭಾಷೆಗಳಲ್ಲಿಯೂ ಕಂಡುಬರುತ್ತದೆ. ಕಲ್ಕತ್ತದ ಚಿಂತಾಹರಣ ಚಕ್ರವರ್ತಿ ಅವರು ತಮ್ಮ ಲೇಖನದಲ್ಲಿ[1] ನಿಜಾನಂದನಾಥನ ತಾಂತ್ರಿಕ ಗ್ರಂಥವೊಂದು ನಾಲ್ಕು ಬೇರೆ ಬೇರೆ ವರ್ಣನಾತ್ಮಕ ಸೂಚೀಗ್ರಂಥಗಳಲ್ಲಿ ನಾಲ್ಕು ಬೇರೆ ಬೇರೆ ಹೆಸರುಗಳಿಂದ ವರ್ಣಿತವಾಗಿರುವುದನ್ನು ಉಲ್ಲೇಖಿಸಿದ್ದಾರೆ. 'ಮನೋರಮಾ ಕುಚಮರ್ದಿನಿ' ಎಂಬ ವ್ಯಾಕರಣ ಗ್ರಂಥವನ್ನು ಶೃಂಗಾರಕಾವ್ಯವೆಂದು ವರ್ಣಿಸಲಾಗಿದೆ ಎಂದು ಹೇಳಿದ್ದಾರೆ. ಹೀಗೆಯೇ ಇವರು ಇನ್ನೂ ಕೆಲವು ಗ್ರಂಥಗಳನ್ನು ತಪ್ಪು ತಪ್ಪಾಗಿ ಗುರುತಿಸಿರುವುದನ್ನು ಉಲ್ಲೇಖಿಸಿದ್ದಾರೆ. ಇದಕ್ಕೆ ಹಸ್ತಪ್ರತಿಗಳಲ್ಲಿ ಶ್ರದ್ಧಾಸಕ್ತಿಗಳ ಕೊರತೆ ಮತ್ತು ಇಂತಹ ಕೆಲಸ ಮಾಡುವವರಿಗೆ ಸಾಕಷ್ಟು ಪ್ರೋತ್ಸಾಹವಿಲ್ಲದಿರುವುದು ಮುಖ್ಯ ಕಾರಣವೆಂದು ಹೇಳಿದ್ದಾರೆ.

ಶ್ರದ್ಧಾಸಕ್ತಿಗಳಿಂದ ಹಸ್ತಪ್ರತಿಗಳ ಪರಿಶೀಲನೆ ನಡೆಸಿದಾಗ ಮಾತ್ರ ನಮಗೆ ಅಪೂರ್ವ

---

1. Chinthaharan Chakravarti : Study of Manuscripts Page 78

ಕೃತಿಗಳು ದೊರೆತು ಸಾಹಿತ್ಯಕ್ಕೆ ಸೇರ್ಪಡೆಯಾಗುವುವೇ ಹೊರತು ಇಲ್ಲದಿದ್ದಲ್ಲಿ ಸಾಧ್ಯವಾಗುವುದಿಲ್ಲ. ಇವು ಯಾರ ಕಣ್ಣಿಗೂ ಬೀಳದೆ ಹಾಗೆಯೇ ಹಾಳಾಗಿಹೋಗುವ ಸಂಭವ ಇಲ್ಲದಿಲ್ಲ. "ಎಷ್ಟೋ ಅಪೂರ್ವ ಹಸ್ತಪ್ರತಿಗಳು ಗ್ರಂಥಭಂಡಾರಗಳಲ್ಲಿಯೇ ಹುದುಗಿದ್ದು ವಿದ್ವಾಂಸರ ಲಕ್ಷ್ಯಕ್ಕೆ ಬಾರದಂತೆ ತಲೆತಪ್ಪಿಸಿಕೊಂಡು ಇರುವ ಸಂಭವವುಂಟು"[1] ಎಂದು ಡಾ|| ಜಿ. ವರದರಾಜ ರಾಯರು ಹೇಳಿದ್ದಾರೆ. ಮೇಲಣ ನನ್ನ ನಿರೂಪಣೆಯಿಂದ ಕಂಡುಬರುವ ಅಂಶವೆಂದರೆ ಅವು ತಲೆತಪ್ಪಿಸಿಕೊಂಡಿರುವುದಿಲ್ಲ; ನಾವು ಅವುಗಳನ್ನು ಗುರುತಿಸಲು ಸರಿಯಾದ ಪ್ರಯತ್ನ ಮಾಡುವುದಿಲ್ಲವೆಂಬುದು ನಿಶ್ಚಿತವಾಗುತ್ತದೆ.

ಈಗ ತಿಳಿದುಬರುವಂತೆ ಅನೇಕ ಅತ್ಯುತ್ತಮ ಕನ್ನಡ ಗ್ರಂಥಗಳು ಮಣ್ಣುಪಾಲಾಗಿವೆ. 'ಹರಿವಂಶ', 'ಶೂದ್ರಕ', 'ರಘುವಂಶ ಮಹಾಪುರಾಣ', 'ಭುವನೈಕ ರಾಮಾಭ್ಯುದಯ' ಮೊದಲಾದ ಹೆಸರು ತಿಳಿಯುವ ಕೆಲವು ಮಹತ್ಕೃತಿಗಳೂ, ಹೆಸರೇ ಇಲ್ಲದಂತೆ ಹಾಳಾಗಿಹೋಗಿರುವ ಹಲವಾರು ಕೃತಿಗಳೂ ನಮಗೆ ಇಂದು ದೊರೆಯದಾಗಿವೆ. ಅತ್ಯಂತ ಉಪಯುಕ್ತವಾದ ಅನೇಕ ಹಳೆಯ ಗ್ರಂಥಗಳು ಇಂದು ಕೂಡ ಹುಳುಗಳ ಪಾಲೋ ಕೆರೆ ನದಿಗಳ ಪಾಲೋ ಆಗುತ್ತಿವೆ. ಹಲವು ಓಲೆಪ್ರತಿಗಳನ್ನು ಕಟ್ಟಿಗೆಗಳಾಗಿ ಉಪಯೋಗಿಸಿರುವುದುಂಟು. ಹಲವು ಮನೆಗಳಲ್ಲಿ ಇಂದಿಗೂ ಓಲೆಕಟ್ಟುಗಳು ಪೂಜಾಗೃಹವನ್ನು ಸೇರಿ ಹುಳುಗಳ ಆಹಾರವಾಗುತ್ತಿರುವುದೂ, ಎಣ್ಣೆ ಬೆಣ್ಣೆಗಳ ಮಜ್ಜನದಿಂದ ಕಟ್ಟಿಗೆಯಂತಾಗಿರುವುದೂ ತೀರಾ ಶೋಚನೀಯ ಸಂಗತಿ. ಕೆಲವರಲ್ಲಿ ಹೊರಗೆ ಕೊಡಬಾರದೆಂಬ ಅಂಧಃಶ್ರದ್ಧೆ, ಕೊಟ್ಟರೆ ಒಳಗಿರಬಹುದಾದ ಮನೆತನದ ಗುಟ್ಟು ಎಲ್ಲಿ ರಟ್ಟಾಗುವುದೋ ಎಂಬ ಹೆದರಿಕೆ ಅಪಾರ ಜ್ಞಾನರಾಶಿಯನ್ನೇ ಕ್ರಿಮಿಕೀಟಗಳ ತುತ್ತಾಗಿಸಿದೆ.

ಹೀಗೆ ಹಲವಾರು ಕಡೆಗಳಲ್ಲಿ ಹಾಳಾಗುತ್ತಿರುವ ಹಸ್ತಪ್ರತಿಗಳನ್ನು ಸಂಗ್ರಹಿಸುವುದರಿಂದ ಎಷ್ಟೋ ಕೃತಿಗಳನ್ನು ಸಂರಕ್ಷಿಸಿದಂತಾಗುತ್ತದೆ. ಇಂತಹ ಕಾರ್ಯಗಳಿಂದ ಹೊಸ ಹೊಸ ಕೃತಿಗಳು ಬೆಳಕಿಗೆ ಬರುತ್ತಲೇ ಇರುತ್ತವೆ. ಈ ಕೆಲಸ ವ್ಯಾಪಕವಾಗಿ ತ್ವರಿತವಾಗಿ ನಡೆಯಬೇಕಾಗಿದೆ.

---

1. ಹಸ್ತಪ್ರತಿಶಾಸ್ತ್ರ ಪುಟ.; ೫೮

ಹಸ್ತಪ್ರತಿ ಸೂಚಿಗಳು

ಸಂಗ್ರಹಿಸಿದ ಹಸ್ತಪ್ರತಿಗಳಿಗೆ ಮೊದಲು ಮಾಡಬೇಕಾದ ತುರ್ತು ಕೆಲಸವೆಂದರೆ ಅವುಗಳನ್ನು ಚೊಕ್ಕಟಗೊಳಿಸುವುದು. ಪತ್ರದ ಅಥವಾ ಹಾಳೆಯ ಪ್ರತಿಯೊಂದು ಪಕ್ಕವನ್ನೂ ಕುಂಚದಿಂದ ಇಲ್ಲವೆ ಬಟ್ಟೆಯಿಂದ ನಯವಾಗಿ ಒರೆಸಿ ಅದರಲ್ಲಿರಬಹುದಾದ ಧೂಳನ್ನು ಮೊದಲು ಹೋಗಲಾಡಿಸಬೇಕು. ಅನಂತರ ಪತ್ರಸಂಖ್ಯೆಗನುಸಾರವಾಗಿ ಜೋಡಿಸಿ ಲುಪ್ತ ಅಥವಾ ಹರಿದ ಪತ್ರಸಂಖ್ಯೆಗಳನ್ನು ಗುರುತಿಸಿಕೊಳ್ಳಬೇಕು. ಹಸ್ತಪ್ರತಿ ಸಂಖ್ಯೆ, ಕರ್ತೃ, ಕೃತಿ, ಭಾಷೆ, ಲಿಪಿ, ಪತ್ರ ಸಂಖ್ಯೆ, ಗ್ರಂಥ ಸಂಖ್ಯೆ ದಾನಿಗಳ ಇಲ್ಲವೆ ಮಾರಾಟಗಾರರ ವಿಳಾಸ, ಸಮಗ್ರ ಅಥವಾ ಅಸಮಗ್ರ ಮೊದಲಾದ ಅಗತ್ಯವಾದ ವಿವರಗಳನ್ನು ಸೂಚಿ ಪಟ್ಟಿಕೆಯಲ್ಲಿ ಹಾಗೂ ದಾಖಲೆ ರಿಜಿಸ್ಟರಿನಲ್ಲಿ ನಮೂದಿಸಬೇಕು. ಜೊತೆಗೆ ಹಸ್ತಪ್ರತಿಗೆ ವರ್ಗೀಕರಣ ಸಂಖ್ಯೆಯನ್ನು ಕೊಟ್ಟು ಇದನ್ನು ದಾಖಲೆ ರಿಜಿಸ್ಟರಿನಲ್ಲಿಯೂ ಸೂಚೀ ಪಟ್ಟಿಕೆಯಲ್ಲಿಯೂ ಗ್ರಂಥಪಾಲನಾ ನಿಯಮಕ್ಕನುಸಾರವಾಗಿ ದಾಖಲಿಸಬೇಕು. ದಾಖಲೆ ರಿಜಿಸ್ಟರು ಹಸ್ತಪ್ರತಿ ಭಂಡಾರದಲ್ಲಿ ಶಾಶ್ವತವಾಗಿರಬೇಕಾದುದರಿಂದ ಉತ್ತಮ ಕಾಗದವನ್ನೊಳಗೊಂಡ ರಿಜಿಸ್ಟರನ್ನು ಉಪಯೋಗಿಸಬೇಕು.

ಮೇಲೆ ಹಸ್ತಪ್ರತಿಯ ವಿವರಗಳನ್ನೊಳಗೊಂಡ ಸೂಚೀಪಟ್ಟಿಕೆ ತಯಾರಿಕೆಯನ್ನು ಹೇಳಲಾಗಿದೆ. ಅದರಂತೆ ಇಲ್ಲವೆ ಹಸ್ತಪ್ರತಿಗಳ ಸೂಚೀಪಟ್ಟಿಕೆಗಳನ್ನೊಳಗೊಂಡ ಹಸ್ತಪ್ರತಿ ಸೂಚಿಯನ್ನು ಇಲ್ಲವೆ ವರ್ಣನಾತ್ಮಕ ಸೂಚಿಯನ್ನು ಒದಗಿಸುವುದು ಅತ್ಯಂತ ಮುಖ್ಯವಾದುದಾಗಿದೆ. ಇದರಿಂದ ಗ್ರಂಥಭಂಡಾರದಲ್ಲಿರುವ ಹಸ್ತಪ್ರತಿಗಳ ವಿವರ ಎಲ್ಲ ಕಡೆಯ ಆಸಕ್ತರಿಗೂ ದೊರೆತಂತಾಗುತ್ತದೆ. ಹಸ್ತಪ್ರತಿ ಸೂಚಿಯಲ್ಲಿ ಸೂಚೀಪಟ್ಟಿಕೆಗಳಲ್ಲಿ ಕೊಟ್ಟಿರುವಷ್ಟು ವಿಷಯವನ್ನು ನಮೂದಿಸಿದರೆ ಸಾಕಾಗುತ್ತದೆ. ವರ್ಣನಾತ್ಮಕ ಸೂಚಿಗಳಲ್ಲಿ ಮಾತ್ರ ಸಾಕಷ್ಟು ವಿವರಗಳನ್ನು ಒದಗಿಸಬೇಕಾಗುತ್ತದೆ. ಕರ್ತೃ ಕೃತಿ ಕಾಲ ಭಾಷೆ ಲಿಪಿ ಪತ್ರಸಂಖ್ಯೆ, ಪತ್ರದ ಒಂದು ಮಗ್ಗುಲಲ್ಲಿರುವ ಪಂಕ್ತಿಗಳು, ಪ್ರತಿ ಪಂಕ್ತಿಯಲ್ಲಿರುವ ಸರಾಸರಿ ಅಕ್ಷರಗಳು, ಸಮಗ್ರ ಅಥವಾ ಅಸಮಗ್ರ, ಪ್ರತಿಯಕಾಲ, ಲುಪ್ತ ಅಥವಾ ಹರಿದ ಹಾಳೆಗಳ ವಿವರ, ಹಸ್ತಪ್ರತಿಯ ವಸ್ತು, ಶುದ್ಧಾಶುದ್ಧ, ಪ್ರತಿಮಾಡಿದವರ ಹೆಸರು,

ಹಸ್ತಪ್ರತಿ ದೊರೆತ ಸ್ಥಳ, ಅಚ್ಚಾಗಿದೆಯೆ ಇಲ್ಲವೆ ಮುಂತಾದ ವಿಶೇಷ ವಿಷಯಗಳನ್ನು ಕೊಡಬೇಕಾಗುತ್ತದೆ. ಅಲ್ಲದೆ ಕೃತಿಯ ಆದಿ ಅಂತ್ಯ ಭಾಗಗಳನ್ನೂ ಕವಿಯ ಹೆಸರು ಕಾಲ ಪ್ರತಿಕಾರರ ಹೆಸರು ಬರುವ ಭಾಗಗಳನ್ನೂ ಉದ್ಧರಿಸಬೇಕಾಗುತ್ತದೆ. ಹೀಗೆ ಉದ್ಧರಿಸುವಾಗ ಮೂಲದ ಯಥಾವತ್ತಾದ ನಕಲಾಗಿದ್ದರೆ ಹಸ್ತಪ್ರತಿಯ ಲಕ್ಷಣಗಳನ್ನು ತಿಳಿಯಲು ಸಹಾಯಕವಾಗುತ್ತದೆ. ಇದರಿಂದ ಪ್ರತಿಕಾರರ ಪ್ರೌಢತೆಯನ್ನು ಅರಿಯಬಹುದಾಗಿದೆ. ಈ ಉದ್ದೇಶದಿಂದಲೇ ಪ್ರಾಚ್ಯವಿದ್ಯಾ ಸಂಶೋಧನಾಲಯ ಮತ್ತು ಕನ್ನಡ ಅಧ್ಯಯನ ಸಂಸ್ಥೆಗಳಿಂದ ಎರಡು ಕಂತುಗಳಲ್ಲಿ ಪ್ರಕಟವಾಗಿರುವ ಒಂಬತ್ತು ಸಂಪುಟಗಳಲ್ಲಿ ಆದಿ ಅಂತ್ಯ ಭಾಗಗಳನ್ನು ಕೊಡುವಾಗ ಮೂಲದಲ್ಲಿದ್ದಂತೆಯೇ ಕೊಡಲಾಗಿದೆ. ಇವುಗಳನ್ನು ಶ್ರದ್ಧೆಯಿಂದ ಅಲ್ಪಸಮಯದಲ್ಲಿಯೇ ಸಿದ್ಧಪಡಿಸಿ ಪ್ರಕಟಿಸಲಾಗಿದೆ. ಆದರೆ ಇಂತಹ ಉತ್ತಮ ಕಾರ್ಯದ ಬಗ್ಗೆಯೂ ಪ್ರಶಂಸೆಯ ಮಾತಂತಿರಲಿ, ಇದರ ಮಹತ್ವವನ್ನರಿತವರೂ ಟೀಕಿಸುವುದು ವಿಷಾದನೀಯವೆಂದು ಹೇಳಲೇಬೇಕಾಗಿದೆ.

ಹಸ್ತಪ್ರತಿಗಳ ಸೂಚೀಕರಣ ಬಹುಹಿಂದಿನಿಂದಲೂ ನಡೆದುಬಂದಿದೆ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಬಾಡ್ಲೆಯನ್ ಗ್ರಂಥಾಲಯದಲ್ಲಿದ್ದ ಭಾರತೀಯ ಹಸ್ತಪ್ರತಿಗಳ ಸೂಚಿಯೊಂದನ್ನು ಥಿಯೋಡೋರ ಜೌಫ್ರೆಟ್ ಎಂಬ ಪಾಶ್ಚಾತ್ಯ ವಿದ್ವಾಂಸನು ಸಂಕಲಿಸಿ ೧೮೫೯ರಲ್ಲಿಯೇ ಪ್ರಕಟಿಸಿದ; ತದನಂತರ ಪ್ರಾಂಝ ಕೀಲ್‌ಹಾರ್ನ್, ಜಾರ್ಜ್ ಬುಹ್ಲರ್, ಎ.ಸಿ. ಬರ್ನೆಲ್ ಮುಂತಾದವರು ಈ ಕೆಲಸ ಮುಂದೆ ಸಾಗಿಸಿಕೊಂಡು ಬಂದು ಭಾರತದಲ್ಲಿನ ಕೆಲವೊಂದು ಗ್ರಂಥಾಲಯಗಳಲ್ಲಿನ ಹಸ್ತಪ್ರತಿಗಳ ಸೂಚಿಗಳನ್ನು ಸಂಕಲಿಸಿ ಈ ಮಹಾಕಾರ್ಯಕ್ಕೆ ನಾಂದಿ ಹಾಡಿದರು. ಕೀಲ್‌ಹಾರ್ನ್ ಆಗಿನ ಮುಂಬೈ ಪ್ರಾಂತದ ದಕ್ಷಿಣ ಹಾಗೂ ಮಧ್ಯ ಪ್ರಾಂತದಲ್ಲಿನ ವಿಭಾಗದಲ್ಲಿದ್ದ ಖಾಸಗಿ ಹಸ್ತಪ್ರತಿಗಳ ಗ್ರಂಥಾಲಯಗಳ ಸೂಚಿಗಳನ್ನು ತಯಾರಿಸಿದರೆ, ಬುಹ್ಲರ್ ಅವರು ಗುಜರಾತ, ಸಿಂಧ, ರಾಜಪುತಾನಾ ಮುಂತಾದುವುಗಳಲ್ಲಿ ಸಂಗ್ರಹಿಸಿದ ಹಸ್ತಪ್ರತಿಗಳ ಸೂಚಿಗಳನ್ನು ಹಾಗೂ ಬರ್ನೆಲ್ ಅವರು ತಂಜಾವೂರು ಅರಮನೆಯಲ್ಲಿದ್ದ ಹಸ್ತಪ್ರತಿಗಳ ಸೂಚಿಗಳನ್ನು ತಯಾರಿಸಿದರು. ಈ ದಿಸೆಯಲ್ಲಿ ಕೃಷಿ ಮಾಡಿದ ಪ್ರಪ್ರಥಮ ಭಾರತೀಯರೆಂದರೆ ರಾಮಕೃಷ್ಣ ಗೋಪಾಳ ಭಂಡಾರಕರ, ಹರಿಪ್ರಸಾದ ಶಾಸ್ತ್ರಿ, ನ್ಯಾಯಭೂಷಣ ಕುಂಜವಿಹಾರಿ ಮುಂತಾದವರು"[1] ಎಂದು ಶ್ರೀ ಕೆ.ಎಸ್. ದೇಶಪಾಂಡೆ ಅವರು ಹೇಳಿದ್ದಾರೆ.

1. ಕರ್ನಾಟಕ ಭಾರತಿ ೧-೧-೨, ೧೯೮೨, ಪು. ೧೫೪-೫೫

ಕನ್ನಡ ಹಸ್ತಪ್ರತಿಗಳ ಸೂಚೀಪಟ್ಟಿಕೆಗಳು ಸೇರಿರುವ ಮೊಟ್ಟ ಮೊದಲ ವರ್ಣನಾತ್ಮಕ ಹಸ್ತಪ್ರತಿ ಸೂಚಿಯೆಂದರೆ ಎಚ್.ಎಚ್. ವಿಲ್ಸನ್ ಅವರು ಸಂಪಾದಿಸಿರುವ 'A Descriptive catalogue of the Oriental Manuscripts Vol. I. 1828' ಎಂಬುದಾಗಿದೆ. ಇದರಲ್ಲಿ ೧೫೨ ಕನ್ನಡ ಕೃತಿಗಳ ವಿವರವಿದೆಯೆಂದು ಶ್ರೀ ಎಚ್. ದೇವೀರಪ್ಪನವರು ತಿಳಿಸಿರುವುದನ್ನು ಶ್ರೀ ಎಸ್. ಶಿವಣ್ಣನವರು ಉಲ್ಲೇಖಿಸಿದ್ದಾರೆ.[1] ಇದು ಮೆಕೆಂಜಿ ಅವರು ಸಂಗ್ರಹಿಸಿದ ಹಸ್ತಪ್ರತಿಗಳ ಸೂಚಿಯಾಗಿದೆ. ಹೀಗೆ ಕನ್ನಡ ಹಸ್ತಪ್ರತಿಗಳ ಸೂಚೀಪಟ್ಟಿಕೆಗಳನ್ನೊಳಗೊಂಡ ಮತ್ತೂ ಕೆಲವು ಸೂಚಿಗಳು ಪ್ರಕಟವಾದರೂ ಕನ್ನಡಕ್ಕೇ ಮೀಸಲಾಗಿ ಪ್ರಕಟಗೊಂಡ ವರ್ಣನಾತ್ಮಕ ಸೂಚಿಗಳೆಂದರೆ ಮದರಾಸು ಸರ್ಕಾರೀ ಪ್ರಾಚ್ಯಕೋಶಾಗಾರದಿಂದ ಸಿದ್ಧವಾದುವಾಗಿವೆ. ಈ ಸಂಸ್ಥೆಯು ೧೯೩೪ರಷ್ಟು ಹಿಂದೆಯೇ ಪ್ರಕಟಿಸಿ ಉಳಿದ ವಿಶ್ವವಿದ್ಯಾನಿಲಯಗಳಿಗೆ ಸಂಸ್ಥೆಗಳಿಗೆ ಮಾದರಿಯಾಯಿತು. ಈ ಸೂಚಿಗಳಲ್ಲಿ ಕ್ರಮಾಂಕ, ಶಿರೋನಾಮೆ, ವಸ್ತು, ಆಕಾರ, ಪತ್ರಸಂಖ್ಯೆ, ಸಾಲುಗಳು, ಲಿಪಿ, ಸ್ಥಿತಿ, ಬರವಣಿಗೆ, ಪೂರ್ಣಾಪೂರ್ಣ ವಿವರಣೆ, ಪ್ರಾರಂಭ, ಕೊನೆ, ಸಮಾಪ್ತಿವಚನ ಇದಿಷ್ಟನ್ನೂ ಕೊಡುವುದಲ್ಲದೆ ಕೆಲವು ಪ್ರತಿಗಳಿಗೆ ಮೂಲ, ಬರೆಯಲು ಪ್ರೇರಣೆ ಮೊದಲಾದ ಮಾಹಿತಿಯನ್ನೂ ನೀಡಲಾಗಿದೆ. ಈ ವಿವರಗಳಲ್ಲಿ ಕೆಲವನ್ನು ಬಿಟ್ಟು ಕೆಲವನ್ನು ಸೇರಿಸಿ ತಮಗೆ ಸರಿತೋರಿದ ರೀತಿಯಲ್ಲಿ ಮೈಸೂರು, ಕರ್ಣಾಟಕ, ಉಸ್ಮಾನಿಯಾ, ಬೆಂಗಳೂರು ಮೊದಲಾದ ವಿಶ್ವವಿದ್ಯಾನಿಲಯಗಳು ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಯನ್ನು ಪ್ರಕಟಿಸಿವೆ. ಯಾವ ವಿವರಣೆಯೂ ಇಲ್ಲದೆ ಕೃತಿ, ಕರ್ತೃ, ಪತ್ರ -ಮೊದಲಾದ ಸಾಮಾನ್ಯ ವಿಷಯಗಳೊಡನೆ ಹಸ್ತಪ್ರತಿಗಳ ಪಟ್ಟಿಯನ್ನು ಮೈಸೂರು ಗೌರ್ನಮೆಂಟ್ ಓರಿಯಂಟಲ್ ಲೈಬ್ರರಿ ೧೯೨೧ರಲ್ಲಿ ಪ್ರಕಟಿಸಿದೆ. ಇದರಲ್ಲಿ ೧೫೦೦ ಕೃತಿಗಳನ್ನು ನಮೂದಿಸಿದೆ. ಇದೇ ರೀತಿಯಲ್ಲಿ ಕೆ.ಜಿ. ಕುಂದಣಗಾರರು ತಾವು ಸ್ವಾದಿ, ಸಿರ್ಸಿ - ಮೊದಲಾದೆಡೆಗಳಲ್ಲಿ ಪರಿಶೀಲಿಸಿದ ಹಸ್ತಪ್ರತಿಗಳ ಪಟ್ಟಿಯನ್ನು ೧೯೨೯ರಲ್ಲಿ ಜಯಕರ್ನಾಟಕದಲ್ಲಿ ಪ್ರಕಟಿಸಿದ್ದಾರೆ. ಮದರಾಸು ಸರ್ಕಾರೀ ಪ್ರಾಚ್ಯಕೋಶಾಗಾರದಲ್ಲಿ ಸಂಗ್ರಹವಾಗಿದ್ದ ಕನ್ನಡ ಹಸ್ತಪ್ರತಿಗಳ ಅಕಾರಾದಿ ಪಟ್ಟಿಯನ್ನು ಎನ್. ಕುಪ್ಪುಸ್ವಾಮಿಶಾಸ್ತ್ರಿಯವರು ಸಂಪಾದಿಸಿದ್ದು ೧೯೨೯ರಲ್ಲಿ ಪ್ರಕಟವಾಗಿದೆ.[2] ಇದರಲ್ಲಿ

---

1. ಹಸ್ತಪ್ರತಿಶಾಸ್ತ್ರ, ಪು. ೭೦
2. ವಿವರಗಳಿಗೆ ನೋಡಿ : ಹಸ್ತಪ್ರತಿಶಾಸ್ತ್ರ, ಪು. ೬೯-೭೭

೧೫೪೦ ಕೃತಿಗಳ ವಿವರವಿದೆ. ಕೆ. ಭುಜಬಲಿಶಾಸ್ತ್ರಿಗಳಿಂದ ಸಂಪಾದಿತವಾಗಿ ದೇವನಾಗರಿ ಲಿಪಿಯಲ್ಲಿ ೧೯೪೮ರಲ್ಲಿ ಪ್ರಕಟವಾಗಿರುವ 'ಕನ್ನಡ ಪ್ರಾಂತೀಯ ತಾಡಪತ್ರೀಯ ಗ್ರಂಥಸೂಚಿ'ಯು ತುಂಬಾ ಉಪಯುಕ್ತ ಮಾಹಿತಿಯನ್ನು ನೀಡುತ್ತದೆ. ಇದರಲ್ಲಿ ಸಂಸ್ಕೃತ ಪ್ರಾಕೃತ ಕನ್ನಡ ಗ್ರಂಥಗಳೆಲ್ಲವೂ ಸೇರ್ಪಡೆಯಾಗಿವೆ. ಇಂತಹ ಹಸ್ತಪ್ರತಿಸೂಚಿಗಳು ಚಿಕ್ಕವಾಗಿ ದೊಡ್ಡವಾಗಿ ಹಲವರಿಂದ ಸಿದ್ಧಗೊಂಡು ವಿವಿಧ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿವೆ.

ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಯಲ್ಲಿ ಇರಬೇಕಾದ ಅಂಶಗಳನ್ನು ವಿವರಿಸುತ್ತಾ ಚಿಂತಾಹರಣ ಚಕ್ರವರ್ತಿ ಅವರು ಕೆಲವು ಉಪಯುಕ್ತ ಸಲಹೆಗಳನ್ನು ನೀಡಿದ್ದಾರೆ.[1] ಇವುಗಳಲ್ಲಿ ಕೆಲವನ್ನು ನಾವು ಗಮನಿಸಬಹುದಾಗಿದೆ. ಅಚ್ಚಾದ ಗ್ರಂಥಗಳ ಬಗೆಗೆ ದೊರೆಯುವ ಹಸ್ತಪ್ರತಿಗಳ ವಿವರಣೆಗಳನ್ನು ಕೊಡುವಾಗ ಪ್ರಕಟವಾದ ಗ್ರಂಥಗಳಿಗಿಂತ ಹೆಚ್ಚಿನ ಅಂಶಗಳಿದ್ದರೆ ಅದನ್ನು ಮಾತ್ರ ಸೂಚಿಸಬೇಕು; ಅಲ್ಲದೆ ಇಂತಹ ಪ್ರತಿಗಳ ಭಾಗಗಳನ್ನು ಉದ್ಧರಿಸಬೇಕಾದುದು ಅನಾವಶ್ಯಕ. ಇವುಗಳಿಂದ ಸೂಚೀ ಗ್ರಂಥಗಳ ಗಾತ್ರ ಕಡಿಮೆಯಾಗಲು ಸಹಾಯವಾಗುತ್ತದೆ" ಎಂದು ಹೇಳಿರುವುದು ಸರಿಯೆಂದು ಒಪ್ಪಬೇಕಾಗುತ್ತದೆ. ಇತಂಹ ಪ್ರತಿಗಳ ಭಾಗಗಳನ್ನು ಉದ್ಧರಿಸುವುದರಿಂದ ಹಸ್ತಪ್ರತಿಗಳ ಸ್ವರೂಪವನ್ನು ತಿಳಿಯಬಹುದೇ ಹೊರತು ಬೇರೆ ಪ್ರಯೋಜನವಾಗುವುದಿಲ್ಲ. ಅಂತಹ ವಿಶೇಷಗಳೇನಾದರೂ ಇದ್ದರೆ ಅವುಗಳನ್ನು ಮಾತ್ರ ಸೂಚಿಸಿ ಮುಂದುವರಿಯಬಹುದು.

ಈ ಎಲ್ಲ ಪ್ರಕಟಿತ ಹಸ್ತಪ್ರತಿ ಸೂಚಿಗಳ ಸಹಾಯದಿಂದ ಹಸ್ತಪ್ರತಿಗಳ ಸಮಗ್ರ ಸೂಚಿಗಳ ಸೂಚಿ (Catalogus Catalogorum)ಯನ್ನು ತಯಾರಿಸಿ ಪ್ರಕಟಿಸಿದಲ್ಲಿ ವಿದ್ವಜ್ಜನರಿಗೆ ಬಹುಮಟ್ಟಿಗೆ ಉಪಕಾರವಾದಂತಾಗುತ್ತದೆ. ಎಸ್. ಶಿವಣ್ಣನವರು "ಈ ಸೂಚಿಯ ನಿರ್ಮಾಣದಲ್ಲಿ ಮಾದರಿಯಾಗಿ ಆಫ್ರೆಟ್ (Aufrecht) catalogus ctalogorum (1891, 1896, 1903ರಲ್ಲಿ 3 ಭಾಗಗಳಲ್ಲಿ ಪ್ರಕಟವಾಗಿದೆ) ಸೂಚಿಯಲ್ಲಿನ ಕೆಲವು ಅಂಶಗಳನ್ನು ಅನುಸರಿಸಬಹುದೆಂದು ಹೇಳಿ ಅದನ್ನು ಈ ರೀತಿ ಸೂಚಿಸಿದ್ದಾರೆ.[2]

೧. ಸೂಚಿಯು ಅಕಾರಾದಿ ಕ್ರಮದಲ್ಲಿದೆ.

---

1. Chinthaharan Chakravarthi - Study of Manuscripts Page ; 80
2. ಹಸ್ತಪ್ರತಿಶಾಸ್ತ್ರ, ಪು. ೭೬-೭೭

೨. ಕವಿಯ ಉಲ್ಲೇಖದೊಡನೆ ಆತನ ಲಭ್ಯ ಹಾಗೂ ಅಲಭ್ಯ ಕೃತಿಗಳ ಪಟ್ಟಿ.
೩. ಕೃತಿಯ ಉಲ್ಲೇಖದೊಡನೆ ಇತರ ಪ್ರತಿಗಳು ದೊರೆಯುವ ಸ್ಥಳಗಳ ನಿರ್ದೇಶನ.
೪. ಮುದ್ರಿತ ಹಸ್ತಪ್ರತಿಗಳ ಸೂಚಿ ಮತ್ತು ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಉಲ್ಲೇಖ.
೫. ಪ್ರಕಟವಾದ ಕೃತಿಯ ವಿವರ ವಿವಿಧ ಆವೃತ್ತಿಗಳಲ್ಲಿ.
೬. ಪ್ರಕಟವಾಗದಿರುವ ಕೃತಿಯ ಬಗೆಗೆ ಪರಿಚಯಾತ್ಮಕ ಲೇಖನದ ವಿವರ.
೭. ಇತರ ಭಾಷೆಗಳಲ್ಲಿ ಕೃತಿಯ ಅನುವಾದ.
೮. ಕವಿಯ ಬಗೆಗೆ ಪ್ರಕಟಿತ ಅಪ್ರಕಟಿತ ರೂಪದ ಮಹಾಪ್ರಬಂಧಗಳು.
೯. ಕವಿ ಕೃತಿಗಳ ಬಗೆಗೆ ದೊರೆಯುವ ಸಾಹಿತ್ಯಚರಿತ್ರೆಯ ಸಂಗತಿಗಳು.
೧೦. ಕವಿ, ಕಾಲ, ಕೃತಿಗಳ ಬಗೆಗೆ ಸಮಕಾಲೀನ ಸಂಶೋಧನೆಯ ವಿವರ.

ಇನ್ನೂ ಸೂಚೀಕರಣವಾಗದಿರುವ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಗಳಲ್ಲದಿದ್ದರೂ ಕೊನೆಯ ಪಕ್ಷ ಸೂಚಿಗಳಾದರೂ ಪ್ರಕಟವಾಗಿ, ಮೇಲೆ ಹೇಳಿದ ಸಮಗ್ರ ಸೂಚಿ ಸಿದ್ಧವಾಗಿ ಎಲ್ಲರಿಗೂ ದೊರೆಯುವಂತಾದಲ್ಲಿ ತುಂಬಾ ಮಹತ್ವಪೂರಿತ ಕೆಲಸ ಆದಂತಾಗುತ್ತದೆ. ಇದು ಆದಷ್ಟು ಬೇಗ ಆಗಲೆಂದು ಹಾರೈಸೋಣ.

ಹಸ್ತಪ್ರತಿ ಸಂರಕ್ಷಣೆ

ಸಂಗ್ರಹಮಾಡಿದ ಹಸ್ತಪ್ರತಿಗಳ ಸಂರಕ್ಷಣೆ ಅತ್ಯಂತ ಮಹತ್ವದ ವಿಷಯವಾಗಿದೆ. ಸಂಗ್ರಹಣಕಾರ್ಯ ಎಷ್ಟು ಶ್ರಮಪೂರಿತವೊ ರಕ್ಷಣೆಯೂ ಅಷ್ಟೇ ಕಷ್ಟಸಾಧ್ಯವಾದ ಕೆಲಸವಾಗಿದೆ. ಇವುಗಳನ್ನು ಎಚ್ಚರಿಕೆಯಿಂದ ಕಾಪಾಡದಿದ್ದಲ್ಲಿ ಎಲ್ಲಿಯೋ ಹಾಳಾಗುತ್ತಿದ್ದ ಗ್ರಂಥಗಳು ಮತ್ತೆಲ್ಲಿಯೋ ನಶಿಸಿಹೋಗುವ ಸಂಭವವಿಲ್ಲದಿಲ್ಲ. ಆದುದರಿಂದ ವಿವಿಧ ವಸ್ತುಗಳ ಹಸ್ತಪ್ರತಿಗಳಿಗೆ ಆಯಾ ವಸ್ತುವಿಗೆ ತಕ್ಕ ಉಪಚಾರ ಮಾಡಿ, ದುರಸ್ತಿಕಾರ್ಯಗಳನ್ನು ಕೈಗೊಂಡು ರಕ್ಷಣೆ ಮಾಡಬೇಕಾಗುತ್ತದೆ. ಹಸ್ತಪ್ರತಿಗಳ ಲಿಪಿಕಾರರು ಪುಸ್ತಕಗಳನ್ನು ಪರಿಪಾಲಿಸಿಕೊಂಡು ಬರಬೇಕೆಂಬುದನ್ನು

ಪುಸ್ತಕಂ ವನಿತಾ ವಿತ್ತಂ ಪರಹಸ್ತಗತಂ ಗತಂ
ಅಥವಾ ಪುನರಾಯಾತಂ ಜೀರ್ಣಂ ಭ್ರಷ್ಟಾಚ ಖಂಡಶಃ||
ತೈಲಾದ್ರಕ್ಷೇಜ್ಜಲಾದ್ರಕ್ಷೇತ್ ರಕ್ಷೇಚ್ಛಿಥಿಲಬಂಧನಾತ್
ಮೂರ್ಖಹಸ್ತೇ ನದಾತವ್ಯಮೇವಂ ವದತಿ ಪುಸ್ತಕಂ||

"ಎಂದು ದುಃಖಮಿಶ್ರಿತವಾದ ಪರಿಹಾಸದಿಂದ ನುಡಿದಿರುವುದು ಕಾಣುತ್ತದೆ. ಪುಸ್ತಕ ವನಿತೆ ವಿತ್ತ ಈ ಮೂರೂ ಇತರರರ ಕೈಗೆ ಸೇರಿದರೆ ಅವು ಹೋದಹಾಗೆಯೆ; ಒಂದು ವೇಳೆ ಅವು ಮರಳಿಬಂದರೆ ಜೀರ್ಣವಾಗಿರುತ್ತವೆ; ಭ್ರಷ್ಟವಾಗಿರುತ್ತವೆ; ಇಲ್ಲವೆ ಅರ್ಧಮರ್ಧವಾಗಿರುತ್ತವೆ. ಎಣ್ಣೆ ನೀರುಗಳು ಸೋಂಕದ ಹಾಗೆ ಪುಸ್ತಕವನ್ನು ರಕ್ಷಿಸಬೇಕು. ಅವುಗಳನ್ನು ಸಡಿಲವಾಗಿ ಕಟ್ಟಬಾರದು, ಮೂರ್ಖರ ಕೈಗೆ ಅವನ್ನು ಕೊಡಕೂಡದು...... ಹೀಗೆಂದು ಪುಸ್ತಕ ಹೇಳುತ್ತದಂತೆ"[1] ಈ ಮಾತುಗಳಲ್ಲಿ ಬಹು ಭಾಗವನ್ನು ಒಪ್ಪುವುದಾದರೂ ಬೇರೆಯವರ ಹಸ್ತ ಕೊಡಬಾರದೆಂಬುದನ್ನು ಈ ಕಾಲದಲ್ಲಿ ಒಪ್ಪಲು ಸಾಧ್ಯವಾಗುವುದಿಲ್ಲ;

1. ಕನ್ನಡ ಗ್ರಂಥ ಸಂಪಾದನೆ ಪು. ೫೫

ಸ್ತಪ್ರತಿಗಳ ಉಪಯೋಗವನ್ನು ಹೆಚ್ಚು ಜನ ಮಾಡಿಕೊಳ್ಳಲು ಸಹಾಯಮಾಡುವುದು ಂಥಪಾಲಕರ ಕರ್ತವ್ಯವಾಗಿದೆ. ಆದರೆ ಹೀಗೆ ಕೊಡುವಲ್ಲಿ ಮೂರ್ಖರಿಗೆ ಡಬಾರದೆಂಬುದನ್ನು ಅಕ್ಷರಶಃ ಪಾಲಿಸಬೇಕಾಗುತ್ತದೆ. ಆದರೆ ಇವರನ್ನು ಗುರುತಿಸುವುದು ಲಭಸಾಧ್ಯವಲ್ಲ.

ಸಂಗ್ರಹಿಸಿದ ಹಸ್ತಪ್ರತಿಗಳಿಗೆ ಮೊದಲು ಮಾಡಬೇಕಾದ ತುರ್ತು ಕೆಲಸವೆಂದರೆ ವುಗಳನ್ನು ಚೊಕ್ಕಟಗೊಳಿಸುವುದು. ಅನಂತರ ದಾಖಲೆ ರಿಜಿಸ್ಟರಿನಲ್ಲಿ ನಮೂದಿಸುವುದು, ಚೀಕರಣಗಳೆಲ್ಲಾ ಮುಗಿದ ಮೇಲೆ, ಹೊರಗಣ ರಕ್ಷಾಪಟ್ಟಿಗಳಿಲ್ಲದಿದ್ದಲ್ಲಿ ಓಲೆಗಳಿಗೆ ರದ ಪಟ್ಟಿಗಳನ್ನು ಎರಡು ಬದಿಗೂ ಹಾಕಿ ಓಲೆಗಳ ರಂಧ್ರಕ್ಕೆ ಸರಿಹೊಂದುವಂತೆ ಧ್ರಗಳನ್ನು ಮಾಡಿ ದಾರದಿಂದ ಪೋಣಿಸಿ ಕಟ್ಟಬೇಕು. ಹೀಗೆ ದಾರದಿಂದ ಕಟ್ಟುವಾಗಲೂ ಹಳ ಎಚ್ಚರಿಕೆ ವಹಿಸಬೇಕು. ಅದು ಯಾವುದೇ ರೀತಿಯಲ್ಲಿ ಪತ್ರಗಳಿಗೆ ನಿಯಾಗುವಂತಿರಬಾರದು. ರಂಧ್ರಕ್ಕೆ ತಕ್ಕ ದಾರವನ್ನು ಹಾಕಬೇಕು; ದಾರವನ್ನು ರಗಣ ಪಟ್ಟಿಗೆ ಸುತ್ತುಕಟ್ಟಿ ಅನಂತರ ಓಲೆಗಳ ರಂಧ್ರಗಳಲ್ಲಿ ಪೋಣಿಸಿರುವುದನ್ನು ೀಡಿದ್ದೇನೆ. ಇದರಿಂದ ಕಟ್ಟಿದ ದಾರದ ಒಳಭಾಗ ಓಲೆಯ ಮೇಲೆ ಒತ್ತುವುದರಿಂದ ಭಾಗ ಹಾನಿಗೊಳಗಾಗುತ್ತದೆ. ಕಾಗದದ ಹಸ್ತಪ್ರತಿಗಳಿಗೆ ರಕ್ಷಾಪಟ್ಟಿಗಳನ್ನು ಅವುಗಳ ಅತೆಗೆ ಮಂದವಾದ ರಟ್ಟನ್ನೊ, ಮರದ ಹಲಗೆಯನ್ನೊ ಅಳವಡಿಸಬಹುದು. ಇಂತಹ ಾವುವೇ ಹಸ್ತಪ್ರತಿಗಳನ್ನು ಗ್ರಂಥಭಂಡಾರಕ್ಕೆ ಸೇರಿಸುವ ಮೊದಲು ಪ್ರಧೂಮನ ಪಚಾರಕ್ಕೆ ಒಳಪಡಿಸುವುದು ಅತ್ಯಂತ ಅಗತ್ಯ.

ಹಸ್ತಪ್ರತಿಗಳಿಗೆ ಬರುವ ಅಪಾಯಗಳು ವಿವಿಧ ರೀತಿಯಾಗಿವೆ. ಕೆಲವು ಹುಳು ಪ್ಪಟೆಗಳಿಂದ, ಮತ್ತೆ ಕೆಲವು ಗಾಳಿ ಬೆಳಕು ಬೆಂಕಿಗಳಿಂದ ಆಗಬಹುದು. ಗಾಳಿಯು ತಿಉಷ್ಣತೆಯಿಂದಾಗಲಿ ಅತಿಶೀತದಿಂದಾಗಲಿ ಕೂಡಿದ್ದರೆ ಹಸ್ತಪ್ರತಿಗಳು ಳಾಗುವುದುಂಟು. ಗಾಳಿಯಲ್ಲಿ ಅದರಲ್ಲಿಯೂ ಪಟ್ಟಣಗಳ ಗಾಳಿಯಲ್ಲಿ ಹಲವಾರು ಲಗಳು ಸೇರಿದ್ದು ಹಸ್ತಪ್ರತಿಗಳ ಮೇಲೆ ಪರಿಣಾಮ ಬೀರುವುದು ಸಹಜವಾಗಿದೆ. ತ ಹೆಚ್ಚಾದರೆ ಬೂಷ್ಟು ಬರುತ್ತದೆ; ಉಷ್ಣತೆ ಅಧಿಕವಾದರೆ ಹಾಳೆಗಳು ಒರಟಾಗುತ್ತವೆ. ೀಗೆ ಅಪಾಯವೊದಗಿಬರುವ ವಿವಿಧ ರೀತಿಗಳನ್ನು ಇಲ್ಲಿ ಗಮನಿಸಬಹುದಾಗಿದೆ.

ಳು : ಇದು ನೋಡಲು ಅಲ್ಪವಾದುದಾದರೂ ಇದರಿಂದ ಆಗುವ ಅನಾಹುತ ಲ್ಪವಲ್ಲ. ಈ ಧೂಳಿನ ಕಣಗಳ ಮೂಲಕವಾಗಿಯೇ ಕ್ರಿಮಿಕೀಟಗಳ ಅಂಡಾಣುಗಳು

ಬಂದು ಹಸ್ತಪ್ರತಿಗಳಲ್ಲಿ ಸೇರುತ್ತವೆ. ಮುಂದೆ ಈ ಅಂಡಾಣುಗಳಿಂದ ಹುಳುಗಳು ಉತ್ಪತ್ತಿಯಾಗಿ ಹೆಚ್ಚುತ್ತಾ ಹೋಗಿ ಗ್ರಂಥಾಲಯವನ್ನೇ ಆಕ್ರಮಿಸಿಕೊಳ್ಳುತ್ತವೆ.

ಕೀಟಗಳು : ಜನರು ದೇಶದಿಂದ ದೇಶಕ್ಕೆ ಹೋಗುವುದು ಹಾಗೂ ಗ್ರಂಥಗಳ ಪ್ರಸಾರ ಹೆಚ್ಚಿದಂತೆಲ್ಲ ಕೀಟಗಳ ಹಾವಳಿಯೂ ಹೆಚ್ಚುತ್ತಾಹೋಯಿತು. ಒಂದೆಡೆಯಿಂದ ಮತ್ತೊಂದೆಡೆಗೆ ಕೀಟಗಳು ಹರಡಲು ಇದು ಸಹಕಾರಿಯಾಯಿತು. ಆದುದರಿಂದಲೇ ವಿಶ್ವದ ಎಲ್ಲ ಭಾಗಗಳಲ್ಲಿಯೂ ವಿವಿಧ ರೀತಿಯ ಎಲ್ಲ ಕ್ರಿಮಿಕೀಟಗಳೂ ಕಂಡುಬರುತ್ತವೆ. ಪೂರ್ವ ಏಷಿಯಾ, ಕಾನ್‌ಸ್ಟಾಂಟಿನೋಪಲ್ ಗ್ರೀಸ್ ಮತ್ತು ಬ್ರಿಟನ್‌ದೇಶದ ಮಠಗಳಲ್ಲಿನ ಗ್ರಂಥಾಲಯಗಳು ಗ್ರಂಥಹುಳುಗಳ ಹಾವಳಿಗೆ ತುತ್ತಾಗಿವೆ. ರೆಮೆಡಿಯಮ್ ಕಾಂಟ್ರ ವರ್ಮ್ಸ್ ಲಿಬ್ರೊರಮ್ (Remedium Contra Vermes Librorum)ಎಂಬ ೧೩ನೆಯ ಶತಮಾನದ ಒಂದು ಹಸ್ತಪ್ರತಿ ಇದ್ದಿತು ಎಂದು ತಿಳಿದುಬರುವುದರಿಂದ ಆ ಕಾಲಕ್ಕೇ ಗ್ರಂಥಗಳಿಗೆ ಕೀಟಗಳ ಹಾವಳಿ ಬಹಳವಾಗಿದ್ದಿತೆಂದು ಊಹಿಸಬಹುದು. ಸಿ.ಎಂ.ಇ. ಟೋನ್ ಎಂಬಾತನು ೧೯೩೫ರಲ್ಲಿ ಪ್ರಕಟವಾದ ಆಟೊಬಯಾಗ್ರಫಿ ಆಫ್ ಮಾಸ್ಟರ್ ಬುಕ್‌ವರ್ಮ್ ಎಂಬ ತನ್ನ ಗ್ರಂಥದಲ್ಲಿ "ಅಜಿ ಆಫ್ ಮಾಮ್ಸ್‌ಬರಿಯಲ್ಲಿನ ಅಂಥಾಲಜಿ ಆಫ್ ಕಾಫಲಸ್ ಗ್ರಂಥದಲ್ಲಿ ಹುಟ್ಟಿದ ಒಂದು ಗ್ರಂಥಹುಳು (Book-Worm) ಕೊನೆಗೆ ಮಿಚಿಗನ್ ಸ್ಟೇಟ್ ವಿಶ್ವವಿದ್ಯಾನಿಲಯದ ಡಾ|| ಸ್ಯಾಮ್ಯುಯಲ್ ಜಾನ್‌ಸನ್ ಅರ್ಥಕೋಶದ ಮೊದಲನೆಯ ಮುದ್ರಣದಲ್ಲಿ ಬದುಕಿರಬಹುದು" ಎಂದು ಹೇಳಿರುವ ಮಾತು ಅರ್ಥಪೂರ್ಣವಾಗಿದೆ. ಇತ್ತೀಚಿಗೆ ಕಂಡುಹಿಡಿದ ಗ್ರಂಥಪಾಲಕರ ದೃಷ್ಟಿಗೆ ಬೀಳದೆಯೇ ಪುಸ್ತಕಗಳು ಮತ್ತು ಕಪಾಟುಗಳನ್ನು ತಿನ್ನುವ ಜೀರುಂಡೆಮರಿ (Beetle Carvae)ಯು ಇತರ ಎಲ್ಲ ಗ್ರಂಥವೈರಿಗಳಿಗಿಂತಲೂ ಹೆಚ್ಚು ಆತಂಕಕಾರಿಯಾಗಿದೆ.

ಈ ಕೀಟಗಳ ಬೆಳವಣಿಗೆಯನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು. ಒಂದು ಪೂರ್ಣವಾಗಿ ಬೆಳೆಯದ ಪೂರೆಹುಳುಗಳು. ಇವು ನೋಡುವುದಕ್ಕೆ ಎಲ್ಲ ವಿಧದಿಂದಲೂ ಪೂರ್ಣವಾಗಿ ಬೆಳೆದ ಹುಳುಗಳಂತೆಯೇ ಕಂಡರೂ ರೆಕ್ಕೆಗಳು ಪೂರ್ಣವಾಗಿ ಬಂದಿರುವುದಿಲ್ಲ. ಈ ಗುಂಪಿಗೆ ಸೇರುವ ಕೀಟಗಳೆಂದರೆ ಜಿರಲೆ, ಗೆದ್ದಲು, ಬುಕ್‌ಲೈಸ್ ಮತ್ತು ಸಿಲ್ವರ್‌ಫಿಷ್. ಎರಡನೆಯ ಗುಂಪಿಗೆ ಸೇರುವ ಕೀಟಗಳೆಂದರೆ ತಮ್ಮ ಜೀವಿತ ವೇಳೆಯಲ್ಲಿ ಗಮನಿಸಬಹುದಾದ ರೂಪಾಂತರಗಳನ್ನು ಹೊಂದುವ ಜೀರುಂಡೆಮರಿ ಅಥವಾ

ಮಾನ್ಯವಾಗಿ ಕರೆಯುವ ಪುಸ್ತಕಕ್ರಿಮಿ. ಚೆನ್ನಾಗಿ ಬೆಳೆದ ಜೀರುಂಡೆಮರಿಯು ವಯಸ್ಸಾದ ಳುವನ್ನು ಯಾವರೀತಿಯಲ್ಲಿಯೂ ಹೋಲುವುದಿಲ್ಲ. ಇದರಲ್ಲಿ ಸಿತೊದ್ರಿಪ ಸಿಯಮ್ ಎಂಬ ಜಾತಿಯದು ಯುರೋಪ್ ಮತ್ತು ಅಮೆರಿಕಾದೇಶಗಳಲ್ಲಿ ಡುಬರುತ್ತದೆ. ಭಾರತದಲ್ಲಿ ಮತ್ತೊಂದು ಜಾತಿಯ ಗ್ಯಾಸಲಸ್ ಇಂಡಿಕಸ್ ಎಂಬುದು ಮಾನ್ಯವಾಗಿದೆ. ಇದು ಎಲ್ಲ ವಿಧವಾದ ವಸ್ತುವನ್ನೂ ತಿಂದು ಅರಗಿಸಿಕೊಳ್ಳುವ ತ್ತಿಯನ್ನು ಪಡೆದುದಾಗಿದೆ. ಇದು ಮಾಡುವ ಮತ್ತೊಂದು ಕೆಡುಕೆಂದರೆ ತನಗೆ ರೆತುದನ್ನು ತಿಂದು ಮುಗಿಸುವುದಲ್ಲದೆ ಗ್ರಂಥಗಳ ಅಂಚುಗಳಲ್ಲಿ ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಗಳು ೫-೧೦ ದಿನಗಳಲ್ಲಿ ಮರಿಗಳಾಗಿ ತಮ್ಮ ತಾಯಿಯ ಕೆಲಸವನ್ನು ಂದುವರಿಸುತ್ತವೆ. ಇವು ಗ್ರಂಥಗಳ ಒಂದು ಪಕ್ಕದಿಂದ ಹಾಳೆಗಳನ್ನು ಕೊರೆದು ತಿನ್ನುತ್ತಾ ೋಗಿ, ಮತ್ತೆ ಮೇಲೆ ಬಂದು ತಮ್ಮ ಕಾರ್ಯವನ್ನು ಪ್ರಾರಂಭಿಸುತ್ತವೆ. ಹೀಗೆ ಸುಮಾರು ದಿನಗಳು ತಮ್ಮ ಕಾರ್ಯಚಟುವಟಿಕೆಗಳನ್ನು ನಡೆಸಿದ ಮೇಲೆ ಪ್ರಾಪ್ತ ವಯಸ್ಸಿನವಾಗಿ ೆದು ಮೊಟ್ಟೆಯಿಡಲು ಪ್ರಾರಂಭಿಸುತ್ತವೆ.

ನುಸಿ : ಇದಕ್ಕೆ ಸಿಲ್ವರ್‌ಫಿಷ್ ಅಥವಾ ಬೆಳ್ಳಿಮೀನು ಎಂಬ ಹೆಸರು ಹುಳುವಿನ ಣ್ಣ ಮತ್ತು ಆಕಾರದಿಂದಲೇ ಬಂದುದಾಗಿದೆ. ಸಮಶೀತೋಷ್ಣ ಹವಾಗುಣವು ಯಾವ ಟಗಳ ಬೆಳವಣಿಗೆಗೂ ಸಹಕಾರಿಯಾಗಿರುವುದಿಲ್ಲ. ಆದರೆ ಇಂತಹ ಹವಾಗುಣದಲ್ಲಿಯೂ ಹುಳುವನ್ನು ನಾವು ನೋಡಬಹುದು. ಇವು ಪುಸ್ತಕದ ರಟ್ಟುಕಟ್ಟುವಿಕೆಗೆ ಪಯೋಗಿಸುವ ಅಂಟುಪದಾರ್ಥಗಳಿಂದಲೂ ಕಾಗದದ ನುಣುಪಿಗಾಗಿ ಉಪಯೋಗಿಸುವ ಟಿನ್ ಮತ್ತು ಪಿಷ್ಟಪದಾರ್ಥಗಳಿಂದಲೂ ಆಕರ್ಷಿತವಾಗುತ್ತವೆ.

ಬೆಳ್ಳಿ ಬೂದು ಮಿಶ್ರ ಬಣ್ಣದಿಂದ ಕೂಡಿದ ಈ ನುಸಿ ಹುಳುವು ಅರ್ಧ ಅಂಗುಲಕ್ಕಿಂತ ತ್ಚು ಉದ್ದವಾಗಿರುವುದಿಲ್ಲ. ಇದು ತನ್ನ ಎರಡೂ ತುದಿಗಳಲ್ಲಿ ಉದ್ದವಾಗಿ ಪಾಗಿರುವ ಸ್ಪರ್ಶಾಂಗಗಳನ್ನು ಹೊಂದಿದೆ. ಈ ಅಂಗಗಳಿಂದ ಗ್ರಂಥಗಳಿಗೆ ನಿಯುಂಟುಮಾಡುತ್ತದೆ; ಕಾಗದದಲ್ಲಿ ರಂಧ್ರವನ್ನು ಕೊರೆಯುತ್ತದೆ. ಇದು ರಾತ್ರಿ ಳೆಯಲ್ಲಿ ತನ್ನ ಕೆಲಸವನ್ನು ಚುರುಕಾಗಿ ಮಾಡಿದರೂ ಕತ್ತಲುಪ್ರದೇಶದಲ್ಲಿ ಹಗಲೂ ಕೆಲಸವನ್ನು ಮುಂದುವರಿಸುತ್ತದೆ. ಇವುಗಳನ್ನು ಗ್ರಂಥಾಲಯಗಳಲ್ಲಿಯೇ ಅಲ್ಲದೆ ಗೆಮನೆಗಳಲ್ಲಿಯೂ ಕಾಣಬಹುದು.

ರಲೆ : ಕಾಕ್‌ಕ್ರೋಚ್ ಪದವನ್ನು ಒಟ್ಟು ಬ್ಲಾಟಿಡೆ ಕೀಟಗಳ ಗುಂಪಿಗೆ

ಉಪಯೋಗಿಸುವುದು ಸಾಮಾನ್ಯವಾಗಿದೆ. ಈ ಜಾತಿಯಲ್ಲಿ ಅನೇಕ ವಿಧವಿದೆ. ಕಪ್ಪು ಜೀರುಂಡೆಯನ್ನೇ ಜಿರಲೆ ಎಂದು ಕರೆಯುವುದು ರೂಢಿಯಲ್ಲಿದೆ. ಇದಕ್ಕೆ ಗೋಡೆಯ ಸುಣ್ಣದಿಂದ ಹಿಡಿದು ಕಾಲಿನ ಬೂಟುಗಳವರೆಗೆ ಎಲ್ಲವೂ ಆಹಾರವಾಗಬಹುದು. ಇವು ಕಣ್ಣಿಗೆ ಕಾಣದಂತೆ ಸಂದುಗೊಂದುಗಳಲ್ಲಿ ಆಶ್ರಯ ಪಡೆಯುತ್ತವೆ. ಇವುಗಳ ಹತ್ತಿಕೊಂಡಂತಿರುವ ಮೈ ಸುಲಭವಾಗಿ ಅಡಗಿಕೊಳ್ಳಲು ಸಹಾಯಕವಾಗಿದೆ. ಸಾಮಾನ್ಯವಾಗಿ ಕಕ್ಕಸುಗಳ ಮೂಲಕವೊ ಕೊಳಾಯಿಗಳ ಮೂಲಕವೊ ಕಟ್ಟಡದ ತಳಹದಿಯಿಂದಲೊ ಬಂದು ಗ್ರಂಥಾಲಯವನ್ನು ಸೇರುತ್ತವೆ. ಗಂಡು ಜಿರಲೆಗಳು ಪರದೆಯಿಲ್ಲದ ಕಿಟಕಿಗಳ ಮೂಲಕ ಹಾರಿಬರುವುದೂ ಉಂಟು. ಕತ್ತಲಾಗುತ್ತಿದ್ದಂತೆಯೆ ತಾವು ಅಡಗಿದ್ದ ಸ್ಥಳದಿಂದ ಹೊರಬಂದು ತಮ್ಮ ಆಡಳಿತವನ್ನು ಆರಂಭಿಸುತ್ತವೆ.

ಜಿರಲೆಗಳನ್ನು ಗ್ರಂಥಗಳ ಶತ್ರುಗಳೆಂದು ೧೬೦೨ರಲ್ಲಿಯೇ ಯೂಲಿಸಿಸ್ ಆಲ್ಡ್ರೊವಾಂಡಸ್ ಎಂಬಾತನು ಹೇಳಿದ್ದಾನೆ. ೧೭೫೪ರಲ್ಲಿ ಬಹಮದ್ವೀಪಗಳಲ್ಲಿ ಇವುಗಳನ್ನು ಉಪದ್ರವಜೀವಿಗಳೆಂದು ಕರೆದಿದ್ದಾರೆ. ೧೮೩೭ರಲ್ಲಿ ವೆಸ್ಟ್ ಇಂಡೀಸ್ ದೇಶದಲ್ಲಿ ಜಿರಲೆಗಳು ಹೆಚ್ಚು ಸಂಖ್ಯೆಯಲ್ಲಿದ್ದು ಅನೇಕ ಗ್ರಂಥಗಳನ್ನು ನಾಶಮಾಡಿದುದಲ್ಲದೆ ರೋಗಿಗಳನ್ನೂ ಸತ್ತವರನ್ನೂ ಮುತ್ತಿದ್ದುವು ಎಂದು ತಿಳಿಸಿದ್ದಾರೆ.

ಗ್ರಂಥಹುಳು (Book - Worn) : ಈ ಹುಳು ಪುಸ್ತಕದಲ್ಲಿಯೇ ಹುಟ್ಟಿ ಅಲ್ಲಿಯೇ ಬದುಕುವುದರಿಂದ ಪುಸ್ತಕಕ್ರಿಮಿ ಅಥವಾ ಬುಕ್ ವರ್ಮ್ ಎಂಬ ಹೆಸರು ಅನ್ವರ್ಥವಾಗಿ ಬಂದಿದೆ. ಪುಸ್ತಕಕ್ರಿಮಿ ಎಂದಾಗ ಹಲವರು ಪುಸ್ತಕಗಳಲ್ಲಿ ಕಂಡುಬರುವ ಎಲ್ಲ ಹುಳುಗಳಿಗೂ ಈ ಹೆಸರು ಇರಬಹುದೆಂದು ಭಾವಿಸುತ್ತಾರೆ. ಆದರೆ ಗ್ರಂಥಗಳಲ್ಲಿ ಕಂಡುಬರುವ ಎಲ್ಲ ಹುಳುಗಳಿಗೂ ಈ ಹೆಸರಿಲ್ಲ; ಅವುಗಳಲ್ಲಿ ಇದೂ ಒಂದಾಗಿದೆ.

ಈ ಹುಳುಗಳು ಓಲೆ ಕಾಗದ ಎರಡರಲ್ಲಿಯೂ ಕಂಡುಬರುತ್ತವೆ. ಇವು ಹಾಳೆಗಳು ಅಥವಾ ಪತ್ರಗಳಲ್ಲಿ ರಂಧ್ರಗಳನ್ನು ಕೊರೆದು ಗ್ರಂಥಗಳನ್ನು ಹಾಳುಮಾಡುತ್ತವೆ. ಇವು ಹೆಚ್ಚು ಕಾಲ ಗ್ರಂಥದಲ್ಲಿಯೇ ನಿಂತರೆ ಓಲೆಗ್ರಂಥಗಳಾದಿಯಾಗಿ ಎಲ್ಲವೂ ಮುಟ್ಟಿದರೆ ಪುಡಿಯಾಗುವಂತಹ ಸ್ಥಿತಿಯನ್ನು ಮುಟ್ಟುತ್ತವೆ. ಕೆಲವು ಹಸ್ತಪ್ರತಿಗಳಲ್ಲಿ ಕೊರೆದಿರುವ ನೂರಾರು ನೇರವಾದ ಮತ್ತು ಚಿತ್ರ ವಿಚಿತ್ರವಾದ ರಂಧ್ರಗಳನ್ನು ನೋಡಿದರೆ ಯಾರಿಗಾದರೂ ಆಶ್ಚರ್ಯವುಂಟಾಗುವುದು ಸಹಜವಾಗಿದೆ. ಇವು ಕೊರೆದಿರುವ ಭಾಗಗಳಲ್ಲಿ ಕೆಲವು ಕೊರೆತಗಳು ಯಾವುವೋ ಅಕ್ಷರಭ್ರಾಂತಿಯನ್ನುಂಟುಮಾಡುತ್ತವೆ. ಅದುದರಿಂದಲೇ

ಣಾಕ್ಷರಪ್ರಾಯ' ಎಂಬ ಪದವೇ ರೂಢಿಗೆ ಬಂದಿದೆ. ಇಷ್ಟು ಸಣ್ಣಹುಳು ಇಷ್ಟು ವ್ರ ಹಾನಿಯನ್ನು ಮಾಡಬಲ್ಲುದೇ ಎಂಬ ಸಂದೇಹ ಮೂಡುತ್ತದೆ.

ಇವು ಗ್ರಂಥ ಹುಟ್ಟಿದಾಗಿನಿಂದಲೂ ಇದ್ದೇ ಇವೆ. ಈಜಿಪ್ಟ್ ದೇಶದಲ್ಲಿ ಪಪೈರಿಗೂ ರತದಲ್ಲಿ ಓಲೆಗಳಿಗೂ ಹಾನಿಯನ್ನುಂಟುಮಾಡಿವೆ. ಈಗಲೂ ಎಲ್ಲ ವಿಧವಾದ ಂಥಗಳಿಗೂ ಕೆಡುಕನ್ನುಂಟುಮಾಡುತ್ತವೆ. ಇವು ಸಮಶೀತೋಷ್ಣವಲಯದಲ್ಲಿ ಲ್ಪವಾಗಿದ್ದರೂ ಉಷ್ಣವಲಯ ಮತ್ತು ಅದರ ಪರಿಸರ ಪ್ರದೇಶಗಳಲ್ಲಿ ಹೆಚ್ಚಾಗಿವೆ. ರಿಸ್ಟಾಟಲ್ ತತ್ವಜ್ಞಾನಿಯು ಇದನ್ನು 'ಉಪದ್ರವಕಾರಿ' ಎಂದು ಕರೆದಿದ್ದಾನೆ. ಡಾ. ಪಿ. ್ರುಕ್ಸ್ ಎಂಬಾತನು ತನ್ನ ಲೇಖನದಲ್ಲಿ "ಪುಸ್ತಕಗಳಿಗೆ ಕಾಲ ಗಾಳಿ ಹವಾಮಾನ ಬೆಂಕಿ ತ್ತು ಪ್ರವಾಹಗಳಿಂದ ಆಗುವ ಅನಾಹುತವನ್ನು ಈ ಪುಸ್ತಕಕ್ರಿಮಿಯಿಂದ ಆಗುವ ನಾಹುತಕ್ಕೆ ಹೋಲಿಸಿದರೆ ಮೊದಲನೆಯದರಿಂದ ಆಗುವ ಹಾನಿ ಅತ್ಯಲ್ಪವೆಂದೇ ಳಬೇಕಾಗುತ್ತದೆ"[1] ಎಂದಿದ್ದಾನೆ.

ದ್ದಲು : ಇವುಗಳಲ್ಲಿ ೧೮೬೦ ಪ್ರಭೇದಗಳಿವೆ ಎಂದು ತಿಳಿದುಬರುತ್ತದೆ. ಇದರಿಂದ ಶ್ವದ ಹಲವೆಡೆ ತೊಂದರೆಗಳಾಗಿವೆ. ಹುಲ್ಲು ಕಸಕಡ್ಡಿ ಒಣಗಿದ ಗಿಡಗಳು ಮತ್ತು ರ, ಕಟ್ಟಡಗಳ ಮರಮುಟ್ಟುಗಳು, ಗ್ರಂಥಗಳು, ಕಾಗದಪತ್ರಗಳು ಎಲ್ಲವೂ ಇದಕ್ಕೆ ಹಾರವಾಗಿವೆ. ಇವುಗಳು ಒಂದು ಗ್ರಂಥಾಲಯವನ್ನು ಸೇರಿದರೆ ಒಂದು ರಾತ್ರಿಯಲ್ಲಿ ತ್ತೆ ತುಂಬಲಾರದಂತಹ ನಷ್ಟವನ್ನುಂಟುಮಾಡಬಹುದು. ಯಾವುದಾದರೂ ಂಥಾಲಯಕ್ಕೆ ಗೆದ್ದಲು ಬರುವ ಸಾಧ್ಯತೆಯಿದ್ದರೆ ಅದನ್ನು ನಿತ್ಯವೂ ಪರೀಕ್ಷಿಸಿ ಎಚ್ಚರಿಕೆ ಂಸುವುದು ಆತ್ಯವಶ್ಯಕ. ಮರದ ಕಪಾಟುಗಳನ್ನು ಗೋಡೆಗೆ ಒರಗಿಸಿಡುವುದನ್ನು ದಷ್ಟುಮಟ್ಟಿಗೆ ಬಿಡುವುದು ಉಚಿತವಾಗಿದೆ.

ರ್‌ಬ್ರ್ಯಾಟ್ಸ್ (Firebrats) : ಇವು ನುಸಿಹುಳುಗಳನ್ನೇ ಹೋಲುತ್ತವೆ. ಇವುಗಳನ್ನು ಂಥಾಲಯಗಳಲ್ಲಿ ಕಾಣುವುದು ಅಪರೂಪ.

ೋಸಿಡ್ಸ್ (Psocids) : ಈ ಹುಳುಗಳನ್ನು ಸಾಮಾನ್ಯವಾಗಿ ಬುಕ್‌ಲೈಸ್ ಎಂದು

---

1. New - York Times : Book Review Section Jan. 1993

ಕರೆಯುತ್ತಾರೆ. ಇವು ಬೂದು ಇಲ್ಲವೆ ನಸುಹಳದಿ ಬಣ್ಣವುಳ್ಳವಾಗಿವೆ. ಇವುಗಳಿಗೆ ಮೃದುವಾದ ಮೈಯೂ ಚೆನ್ನಾಗಿ ಬೆಳೆದ ದವಡೆಗಳೂ ಇವೆ. ಬೆಳೆದ ದವಡೆಗಳಿರುವುದರಿಂದ ಅಗಿಯಲು ಅನುಕೂಲವಾಗಿರುತ್ತದೆ. ಈ ಹುಳುಗಳು ಹೆಚ್ಚಾಗಿ ಶೀತವೇರಿದ, ಉಪಯೋಗಿಸದೆ ಇರುವ ಹಳೆಯ ಗ್ರಂಥಗಳಲ್ಲಿರುತ್ತವೆ. ಇವು ಪುಸ್ತಕದ ರಟ್ಟಿನ ಭಾಗವನ್ನೂ ಅದಕ್ಕೆ ಉಪಯೋಗಿಸಿದ ಅಂಟನ್ನೂ ತಿಂದು ಪುಸ್ತಕವನ್ನು ಹಾಳುಮಾಡುತ್ತವೆ. ಕಾಗದದ ಹಸ್ತಪ್ರತಿಗಳಿಗೆ ಇವುಗಳಿಂದ ಅಪಾಯವಾಗಬಹುದಾದರೂ ಓಲೆಗ್ರಂಥಗಳಿಗೆ ಇದರ ಉಪಟಳ ಇಲ್ಲವೆಂದೇ ಹೇಳಬಹುದು.

ಇವೇ ಅಲ್ಲದೆ ಕಂದುಬಣ್ಣದ ಹಾರುಕೀಟ, ಮಣ್ಣಿನ ಕಣಜಗಳು, ಗ್ರಂಥ ಚೇಳುಗಳಿಂದ ಅಲ್ಪಸ್ವಲ್ಪ ನಷ್ಟ ಸಂಭವಿಸಬಹುದಾದರೂ ಇವುಗಳಿಂದ ಸುಲಭವಾಗಿ ಗ್ರಂಥ ಸಂರಕ್ಷಣೆ ಮಾಡಬಹುದು.

ಬೂಷ್ಟು : ಕ್ರಿಮಿಕೀಟಗಳಲ್ಲದೆ ಸಸ್ಯವರ್ಗಕ್ಕೆ ಸೇರಿದ ಬೂಷ್ಟಿನಿಂದ ಹಸ್ತಪ್ರತಿಗಳಿಗೆ ಸಾಕಷ್ಟು ಹಾನಿ ಆಗುವುದು ಸಂಭವನೀಯ. ತೇವಾಂಶದಿಂದ ಉತ್ಪತ್ತಿಯಾಗುವ ಈ ಬೂಷ್ಟಿನ ಬೆಳವಣಿಗೆ ಅತಿ ಹೆಚ್ಚಾಗಿರುತ್ತದೆ. ಇದು ಒಂದು ಗ್ರಂಥಕ್ಕೆ ಬಂದರೆ ಉಳಿದವಕ್ಕೂ ಹರಡುವುದು ಸಾಮಾನ್ಯ. ಆದುದರಿಂದ ಬೂಷ್ಟು ಬರುವುದನ್ನು ಎಚ್ಚರಿಕೆಯಿಂದ ಗಮನಿಸುತ್ತಿದ್ದು ಬಂದಕೂಡಲೇ ಅವುಗಳನ್ನು ಬೇರ್ಪಡಿಸಿ ಅಗತ್ಯವಾದ ಉಪಚಾರ ಮಾಡುವುದು ಮತ್ತು ಉಳಿದವುಗಳಿಗೆ ಹರಡದಂತೆ ನೋಡಿಕೊಳ್ಳುವುದು ಅತ್ಯವಶ್ಯಕ.

ನಿವಾರಣೋಪಾಯಗಳು

ಹುಳು ಹುಪ್ಪಟೆಗಳೇ ಮೊದಲಾದುವುಗಳಿಂದ ಆಗುವ ಆಪಾಯಗಳಿಂದ ಸ್ತಪ್ರತಿಗಳನ್ನು ರಕ್ಷಿಸಲು ವಿವಿಧ ರೀತಿಯ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ೀಶಾಗಾರಕ್ಕೆ ಬಂದ ಹಸ್ತಪ್ರತಿಗಳನ್ನು ಪ್ರಧೂಮನ ಉಪಚಾರಕ್ಕೆ ಒಳಪಡಿಸಬೇಕು. ದರಿಂದ ಅವುಗಳಲ್ಲಿ ಸೇರಿರಬಹುದಾದ ಹುಳು ಹುಪ್ಪಟೆಗಳು ನಾಶವಾಗುತ್ತವೆ. ಅನಂತರ ವುಗಳನ್ನು ಶುದ್ಧೀಕರಿಸಿ ಧೂಳು ಮತ್ತು ಇತರ ಅಶುದ್ಧ ಪದಾರ್ಥಗಳಿಂದ ುಕ್ತಗೊಳಿಸಬಹುದು. ಹೀಗೆ ಶುದ್ಧವಾದ ಹಸ್ತ ಪ್ರತಿಗಳನ್ನು ಕೋಶಾಗಾರಕ್ಕೆ ರಿಸುವುದು, ಅವುಗಳ ದುರಸ್ತು ಕಾರ್ಯ ಕೈಗೊಳ್ಳುವುದು ಅತ್ಯವಶ್ಯಕ.

ಓಲೆಗ್ರಂಥಗಳ ಕಟ್ಟುಗಳಿಗೆ ಎರಡು ಕಡೆಯೂ ಮರದ ಪಟ್ಟಿಗಳನ್ನು ಹಾಕಿ ಧ್ರದಿಂದ ದಾರವನ್ನು ಪೋಣಿಸಿ ಕಟ್ಟಿಡುವುದು ಸಾಮಾನ್ಯ. ಇವುಗಳನ್ನು ಜೋಡಿಸುವಾಗ ಲಗೆಯ ಒಂದು ಕಡೆ ಪಟ್ಟಿಯು ಕಪಾಟಿನ ಕೆಳಗಣ ಹಲಗೆಯ ಮೇಲೂ, ಮತ್ತೊಂದು ಂಗದ ಪಟ್ಟಿಯು ಮೇಲ್ಭಾಗಕ್ಕೂ ಬರುವಂತೆ ಜೋಡಿಸಿಡಬೇಕು. ಒಂದು ಕಟ್ಟಿಗೂ ತ್ತೊಂದು ಕಟ್ಟಿಗೂ ಸ್ವಲ್ಪ ಸ್ಥಳವನ್ನು ಬಿಡಬೇಕು. ಇಲ್ಲದಿದ್ದಲ್ಲಿ ಪತ್ರಗಳ ಅಂಚುಗಳು ುರಿಯುವ ಸಂಭವವಿದೆ. ಕೆಲವು ಕೋಶಾಗಾರಗಳಲ್ಲಿ ಈ ಕಟ್ಟುಗಳನ್ನು ಅವುಗಳ ಳತೆಗೆ ತಕ್ಕಂತೆ ಮಾಡಿಸಿದ ಮರದ ಪೆಟ್ಟಿಗೆಗಳಲ್ಲಿ ಇಟ್ಟಿರುವುದು ಕಂಡುಬರುತ್ತದೆ. ಗದದ ಹಸ್ತಪ್ರತಿಗಳನ್ನು ಅವುಗಳ ಅವಶ್ಯಕತೆಗೆ ತಕ್ಕಂತೆ ಅವುಗಳಲ್ಲಿ ಸೇರಿರುವ ಮ್ಲಗಳನ್ನು ಹೋಗಲಾಡಿಸಿ ದುರಸ್ತಿಕಾರ್ಯವನ್ನು ಮಾಡಬೇಕಾಗುತ್ತದೆ.

ಇಂತಹ ಸಾಮಾನ್ಯ ರೀತಿಯ ರಕ್ಷಣೋಪಾಯಗಳಲ್ಲದೆ ಹಸ್ತಪ್ರತಿಗಳಿಗೆ ಒದಗುವ ವಿಧ ರೀತಿಯ ಅಪಾಯಗಳಿಗೆ ತಕ್ಕಂತಹ ನಿವಾರಣೋಪಾಯಗಳನ್ನು ಎಲ್ಲ ಹಸ್ತಪ್ರತಿ ಂಡಾರಿಗಳೂ ಕೈಗೊಳ್ಳಬೇಕಾಗುತ್ತದೆ.

ದ್ದಲು : ಹಸ್ತಪ್ರತಿಗಳನ್ನಿಡುವ ಕಟ್ಟಡವನ್ನು ಕಟ್ಟುವಾಗಲೇ ಗೆದ್ದಲಿನಿಂದ ರಕ್ಷಣೆಯನ್ನು ಡೆಯುವ ಮುಂಜಾಗರೂಕತೆಯನ್ನು ವಹಿಸಬಹುದು. ಕಟ್ಟಡದ ತಳಭಾಗದಲ್ಲಿ

ಗೆದ್ದಲನ್ನು ತಡೆಗಟ್ಟುವ ಅನೇಕ ವಿಧ ವಿಷಪದಾರ್ಥಗಳನ್ನು ಉಪಯೋಗಿಸಿದರೂ, ಈಚೆಗೆ ಡೈಲ್ಡ್ರಿನ್ ಎಂಬ ವಸ್ತುವನ್ನು ಉಪಯೋಗಿಸುವುದು ಸಾಮಾನ್ಯವಾಗಿದೆ. ಈ ಡೈಲ್ಡ್ರಿನ್ ತಯಾರಕರು ತಾವು ಕ್ಲುಪ್ತಪ್ರಮಾಣದಲ್ಲಿ ಒದಗಿಸುವ ಈ ದ್ರಾವಣದ ಶೇಕಡ ೩೦ ರಷ್ಟು ಭಾಗವನ್ನು ಒಂದು ಗ್ಯಾಲನ್ ನೀರಿನೊಡನೆ ಬೆರಸಿ ತರುವಾಯ ಆ ದ್ರಾವಣಕ್ಕೆ ೮೦-೧೦೦ ಗ್ಯಾಲನ್ ನೀರನ್ನು ಬೆರಸಿ ಕಟ್ಟಡ ನಿವೇಶನದ ತಳಪಾಯಕ್ಕೆ ಸಿಂಪಡಿಸಬೇಕೆಂದು ಸೂಚಿಸುತ್ತಾರೆ. ಈಗಾಗಲೆ ಕಟ್ಟಿದ ಕಟ್ಟಡಗಳಿಗೆ ದ್ರಾವಣವನ್ನು ಹೊರಗಣ ಗೋಡೆಗಳ ಸಂದುಗಳಲ್ಲಿಯೂ, ನೆಲದಲ್ಲಿರುವ ಗುಳಿಗಳ ಮೂಲಕವೂ ಉಪಯೋಗಿಸಿದರೆ ಉತ್ತಮ. ಈ ದ್ರಾವಣವನ್ನು ಮರದ ಕಿಟಕಿ ಮತ್ತು ಬಾಗಿಲುಗಳ ಮೇಲೆಯೂ, ಅವು ಜೋಡಣೆಯಾಗಿರುವ ಗೋಡೆಗಳ ಅಂಚಿನ ಮೇಲೆಯೂ ಸಿಂಪಡಿಸಬಹುದು.

ಬೂಷ್ಟು : ಇದು ಹೆಚ್ಚು ತೇವಾಂಶದಿಂದ ಬರುವುದಾದುದರಿಂದ ಹವಾನಿಯಂತ್ರಣ ಉತ್ತಮ ವಿಧಾನವೆಂದೆ ಪರಿಗಣಿಸಲಾಗಿದೆ. ಹವಾನಿಯಂತ್ರಣ ಇಲ್ಲದೆಡೆಗಳಲ್ಲಿ ಚೆನ್ನಾಗಿ ಗಾಳಿ ಬೆಳಕು ಬರುವಂತೆ ವ್ಯವಸ್ಥೆ ಮಾಡಬೇಕು. ಗ್ರಂಥಗಳಿರುವ ಕಪಾಟುಗಳಿಗೆ ಅರಗಿನಿಂದ ತಯಾರಿಸಿದ ಮೆರುಗೆಣ್ಣೆಯನ್ನು ಸಿಂಪಡಿಸುವುದು ಉತ್ತಮ. ಇದು ಬೂಷ್ಟು ಬರದಂತೆ ಮಾಡುವುದಲ್ಲದೆ ಹರಡುವುದನ್ನೂ ತಡೆಗಟ್ಟುತ್ತದೆ. ಹಸ್ತಪ್ರತಿಗಳನ್ನು ಕಪ್ಪು ಗಾಢ ನೀಲಿ ಮತ್ತು ಕೆಂಪು ಬಟ್ಟೆಗಳಿಂದ ಕಟ್ಟಿಟ್ಟರೆ ಬೂಷ್ಟು ಸುಲಭವಾಗಿ ಬರುವುದಿಲ್ಲ; ಹಸುರು ಹಳದಿ ಬಣ್ಣಗಳಿಗೆ ಈ ನಿರೋಧಕಶಕ್ತಿ ಇಲ್ಲವೆಂದು ತಿಳಿದುಬರುತ್ತದೆ.

ಪ್ರಧೂಮನ ಉಪಚಾರ (Fumigation Treatment) : ರಾಸಾಯನಿಕ ವಸ್ತುಗಳ ಹಬೆ ಅಥವಾ ಧೂಪದಿಂದ ಹಸ್ತಪ್ರತಿಗಳಿಗೆ ಬಂದ ಕ್ರಿಮಿ ಕೀಟಗಳು, ಬೂಷ್ಟು ಮೊದಲಾದುವನ್ನು ನಾಶಮಾಡಬಹುದು. ಹೊರಗಣಿಂದ ಬಂದ ಹಸ್ತಪ್ರತಿಗಳನ್ನು ಇದಕ್ಕೆ ಒಳಪಡಿಸಿದಾಗ ಅವುಗಳಲ್ಲಿರಬಹುದಾದ ಹುಳುಗಳೂ, ಅವುಗಳ ಮೊಟ್ಟೆಗಳೂ ಸಹ ನಾಶವಾಗಿ ಕ್ರಿಮಿಕೀಟಗಳು ಕೋಶಾಗಾರವನ್ನು ಸೇರಲು ಸಾಧ್ಯವಾಗುವುದಿಲ್ಲ. ಒಟ್ಟು ಕೋಶಾಗಾರವನ್ನೇ ಈ ಒತ್ತಡಕ್ಕೆ ಒಳಪಡಿಸಿ ಕೆಲವು ದಿನಗಳವರೆಗೆ ತೆರೆಯದಿರುವುದು ಸೂಕ್ತ. ಇದಕ್ಕೆ ಹೈಡ್ರೊಜನ್ ಸೈನೆಡ್, ಕಾರ್ಬನ್ ಡೈಸಲ್ಫೈಡ್ ಅಥವಾ ಮೆಥಿಲ್ ಬ್ರೊಮೈಡ್ ಉಪಯೋಗಿಸಬಹುದು. ಕೆಲವು ಹಸ್ತಪ್ರತಿಗಳು ಮಾತ್ರ ಕೀಟಗಳ ಬಾಧೆಗೆ ತುತ್ತಾದಾಗ ಅವುಗಳನ್ನು ಬೇರೆ ತೆಗೆದು ವಾಯುರೇಚನ ಹಬೆಯ ಒತ್ತಡದಲ್ಲಿಟ್ಟು

ಕೀಟಗಳನ್ನು ನಾಶಪಡಿಸಬಹುದು.

ವಾಯುಶೂನ್ಯವಾದ ಕೊಠಡಿಯಲ್ಲಿ ಅಥವಾ ಕಪಾಟಿನಲ್ಲಿ ಹಸ್ತಪ್ರತಿಗಳನ್ನಿಟ್ಟು ಕ್ರಿಮಿನಾಶಕ ರಾಸಾಯನಿಕ ವಸ್ತುಗಳ ಹಬೆಯ ಒತ್ತಡಕ್ಕೊಳಪಡಿಸಬಹುದು. ಇದಕ್ಕೆ ಪ್ಯಾರ ಡೈಕ್ಲೊರೊಬೆಂಜಿನ್ ಗಟ್ಟಿಗಳನ್ನೊ ಅಥವಾ ಟೆರಕ್ಲೋರೈಡ್ ಮತ್ತು ಎಥಿಲಿನ್ ಡೈಕ್ಲೊರೈಡ್ ಮಿಶ್ರಿತ ಕಿಲ್ಲೊಫ್ಟೆರ ದ್ರಾವಣವನ್ನೊ ಉಪಯೋಗಿಸಬಹುದು. ಕಿಲ್ಲೊಫ್ಟೆರ ಗಾಳಿಗಿಂತ ತೂಕವಾಗಿರುವುದರಿಂದ ಅದನ್ನು ಕಪಾಟಿನ ಮೇಲ್ಭಾಗದ ಅರೆಯಲ್ಲಿ ಅಥವಾ ಪುಸ್ತಕದ ಸಾಲಿನಲ್ಲಿ ಇಡಬೇಕಾಗುತ್ತದೆ. ಉಳಿದವನ್ನು ಕಪಾಟಿನ ಕೆಳಗಣ ಹಂತದಲ್ಲಿಡಬೇಕಾಗುತ್ತದೆ. ಹೀಗೆ ಇಡುವಾಗ ಕಪಾಟಿಗೆ ಅಳವಡಿಸಿದ ಲೋಹದ ಬಟ್ಟಲಿನಲ್ಲಿ ರಾಸಾಯನಿಕ ವಸ್ತುವನ್ನು ಹಾಕಿ ಅದು ವಿದ್ಯುಚ್ಛಕ್ತಿ ದೀಪದಿಂದ ಕಾಯುವಂತಿರಬೇಕು. ನವದೆಹಲಿಯಲ್ಲಿರುವ ಭಾರತ ರಾಷ್ಟ್ರೀಯ ಪತ್ರಾಗಾರ ಥೈಮಾಲ್ ಪ್ರಧೂಮನವನ್ನೇ ಹೆಚ್ಚಾಗಿ ಬಳಸುತ್ತಿದೆ.

ನ್ಯಾಫ್ತಲಿನ್ ಬಿಲ್ಲೆಗಳನ್ನು ಕೋಶಾಗರದ ಕಪಾಟುಗಳಲ್ಲಿ ಅಲ್ಲಲ್ಲಿಯೇ ಇಡುವುದರಿಂದಲೂ ಕೆಲಮಟ್ಟಿನ ರಕ್ಷಣೆ ದೊರೆಯುತ್ತದೆ. ಇದಲ್ಲದೆ ಪೈರಾತ್ರಮ್ ಪುಡಿಯನ್ನು ಉಪಯೋಗಿಸಬಹುದು. ಇದು ಮನುಷ್ಯರಿಗೆ ಅಪಾಯಕಾರಿಯಾದುದರಿಂದ ಬಹಳ ಜಾಗರೂಕತೆಯಿಂದ ಉಪಯೋಗಿಸಬೇಕು. ಸೋಡಿಯಂ ಫ್ಲೋರೈಡನ್ನು ಗೋಧಿಯ ಹಿಟ್ಟಿನೊಡನೆ ೧೨:೧೦೦ ಪ್ರಮಾದಲ್ಲಿ ಬೆರಸಿ ಕಪಾಟುಗಳಲ್ಲಿ ಅಥವಾ ಕತ್ತಲೆ ಮೂಲೆಗಳಲ್ಲಿಟ್ಟರೆ ಜಿರಲೆಗಳನ್ನು ನಾಶಮಾಡಬಹುದು. ಹೀಗೆ ಕ್ರಿಮಿಕೀಟಗಳನ್ನು ತಡೆಗಟ್ಟಲು ಭಾರತದಲ್ಲಿ ಹಲವಾರು ಪ್ರಯತ್ನಗಳು ನಡೆದಿವೆ. ಕೆಲವೆಡೆ ಪಂಡ್ರಿ ಎಂಬ ಒಂದು ವಿಧವಾದ ಹುಲ್ಲು ಮತ್ತು ಘೋರಬಾಚ್ (Ghora Bach : Achorus Calamus) ಇವುಗಳ ಪುಡಿಯನ್ನು ಹಸ್ತಪ್ರತಿಗಳೊಡನೆ ಇಟ್ಟಿದ್ದುದು ಕಂಡುಬರುತ್ತದೆ. ಈ ಪುಡಿಯಲ್ಲಿರುವ ಎಣ್ಣೆಯು ಕ್ರಿಮಿಕೀಟಗಳನ್ನು ದೂರವಿಡಲು ಸಹಾಯಕವಾಗುವುದೆಂದು ತೋರುತ್ತದೆ.

ಕೀಟನಾಶಕ ಮೆರುಗೆಣ್ಣೆಗಳು : ದೇವದಾರುಎಣ್ಣೆಯೇ ಗ್ರಂಥಗಳಿಗೆ ಮೊದಲು ಉಪಯೋಗಿಸಿದ ಕೀಟನಾಶಕ ಎಣ್ಣೆಯಾಗಿದೆ. ಅನಂತರ ಮರ್ಕ್ಯುರಿಕ್ ಕ್ಲೋರೈಡ್, ಡೈಲ್ಡ್ರಿನ್ ಮತ್ತು ಯುರಿಯ ಫಾರ್ಮಲ್ ಡಿಹೈಡ್ ಮೊದಲಾದ ಎಣ್ಣೆಗಳು ಬಳಕೆಗೆ ಬಂದುವು.

ಪ್ರಪಂಚದ ಎಲ್ಲ ಕಡೆಯೂ ಜಿರಲೆಗಳ ಕಾಟವನ್ನು ಡೈಲ್ಡ್ರಿನ್‌ನಿಂದ ತಡೆಗಟ್ಟಬಹುದು. ಕೆಲವು ಕೀಟಗಳಿಗೆ ಡೈಲ್ಡ್ರಿನ್ ಬದಲಾಗಿ ಡಿ.ಡಿ.ಟಿ., ಬೆಂಜಿನ್ ಹೈಕ್ಸಾಕ್ಲೋರೈಡ್, ಆಲ್ಡ್ರಿನ್ ಮತ್ತು ಇತ್ತೀಚಿನವುಗಳಾದ ಎಂಡ್ರಿನ್, ಐಸೊಡ್ರಿನ್ - ಮೊದಲಾದ ಕ್ರಿಮಿನಾಶಕಗಳನ್ನು ಉಪಯೋಗಿಸುವುದು ಅವಶ್ಯಕ. ಹೀಗೆ ಅವುಗಳನ್ನು ಉಪಯೋಗಿಸುವಾಗ ಕೀಟಗಳು ಬರಬಹುದಾದ ಕಡೆಗಳಲ್ಲಿ ಮತ್ತು ಅವು ಅಡಗಿಕೊಳ್ಳಬಹುದಾದ ಸ್ಥಳಗಳಲ್ಲಿ ಎಂದರೆ ನೆಲ ಮತ್ತು ಗೋಡೆಯ ಬಿರುಕುಗಳು, ಸಂದಿಗೊಂದಿಗಳು, ಕಪಾಟುಗಳ ಕೆಳಭಾಗ, ಕಿಟಕಿಯ ಅಂಚುಪಟ್ಟಿಗಳು - ಮೊದಲಾದೆಡೆಗಳಲ್ಲಿ ಕುಂಚದಿಂದ ಸವರಬೇಕು, ಇಲ್ಲವೆ ಪಿಚಕಾರಿಗಳಿಂದ ಸಿಂಪಡಿಸಬೇಕು. ಹೀಗೆ ಮಾಡುವುದರಿಂದ ಜಿರಲೆ ಬೆಳ್ಳಿಮೀನು ಗ್ರಂಥಹುಳುಗಳು ಮೊದಲಾದುವನ್ನು ತಡೆಗಟ್ಟಬಹುದು.

ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯ ಮತ್ತು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಗಳಲ್ಲಿ ತಾಳೆಗರಿಗಳಿಗೆ ಉಪಯೋಗಿಸುವ ಸ್ಥಳೀಯವಾಗಿ ತಯಾರಾಗುವ ಎಣ್ಣೆಯು ಗಿಡಮೂಲಿಕೆಗಳಿಂದ ತಯಾರಾದುದೆಂದು ಹೇಳುತ್ತಾರೆ. ಆದರೆ ಇದು ಹೇಗೆ ತಯಾರಾಗುತ್ತದೆಂಬ ವಿವರ ಇದುವರೆಗೆ ಬಹಿರಂಗವಾಗಿಲ್ಲ. ಈ ಎಣ್ಣೆಯಿಂದ ಓಲೆಗಳು ಮೃದುವಾಗುವುವಲ್ಲದೆ ಮಂಕಾದ ಅಕ್ಷರಗಳು ಸ್ಫುಟವಾಗಿ ಕಾಣುತ್ತವೆ. ಅಲ್ಲದೆ ಕ್ರಿಮಿಕೀಟಗಳು ತಾಳೆಗೆ ಸೇರದಂತೆ ಮಾಡುವುದರಲ್ಲಿಯೂ ಇದು ಪರಿಣಾಮಕಾರಿಯಾಗಿದೆ. ಆದರೆ ಈ ಎಣ್ಣೆಯನ್ನು ಉಪಯೋಗಿಸುವಲ್ಲಿ ಬಹಳ ಎಚ್ಚರ ಅವಶ್ಯ. ಇದು ಸುಲಭವಾಗಿ ಬೂಷ್ಟನ್ನು ಬರಮಾಡಿಕೊಳ್ಳುವುದರಿಂದ, ಹದವರಿತು ಗರಿಯಲ್ಲಿ ಶೈತ್ಯಾಂಶ ನಿಲ್ಲದಂತೆ ಉಪಯೋಗಿಸಬೇಕು.

ಹವಾನಿಯಂತ್ರಣ : ಕೀಟಗಳನ್ನು ತಡೆಗಟ್ಟುವುದರಲ್ಲಿ, ಹವಾಮಾನ ವೈಪರೀತ್ಯಗಳಿಂದ ಹಸ್ತಪ್ರತಿಗಳ ಸಂರಕ್ಷಣೆಯಲ್ಲಿ ಅತ್ಯಂತ ಪರಿಣಾಮಕಾರಿಯಾದ ಕ್ರಮವೆಂದರೆ ಹವಾ ನಿಯಂತ್ರಣ. ಈ ಕ್ರಮವು ಒಂದು ಕಾಲಕ್ಕೆ ಭೋಗವೆಂದು ಪರಿಗಣಿತವಾಗಿದ್ದಿತು : ಆದರೆ ಗ್ರಂಥಮೌಲ್ಯದೊಡನೆ ಇದರ ವೆಚ್ಚವನ್ನು ಹೋಲಿಸಿ ನೋಡಿದಾಗ ಇದು ಅತ್ಯಂತ ಅವಶ್ಯಕ ಕ್ರಮವೆಂದು ಹೇಳಬಹುದು. ಹವಾನಿಯಂತ್ರಣ ಸಾಧ್ಯವಿಲ್ಲದಾಗ ನೀರನ್ನಾಗಲಿ ಕ್ಯಾಲ್ಸಿಯಂಕ್ಲೋರೈಡನ್ನಾಗಲಿ ಋತುಮಾನಕ್ಕೆ ತಕ್ಕಂತೆ ಉಪಯೋಗಿಸಿ ಹವಾನಿಯಂತ್ರಣವನ್ನು ಸ್ವಲ್ಪಮಟ್ಟಿಗೆ ಸಾಧಿಸಬಹುದಾದರೂ, ಇದರಿಂದ ಗಾಳಿಯ

ಶುದ್ಧತೆಯನ್ನು ಕಾಪಾಡಲು ಸಾಧ್ಯವಾಗುವುದಿಲ್ಲ. ಇವೇ ಅಲ್ಲದೆ ಮತ್ತೂ ಸುಲಭವಾಗಿ ಮಾಡಬಹುದಾದ ಕೆಲಸವೆಂದರೆ ಹಸ್ತಪ್ರತಿಗಳಿಗೆ ಧೂಳು ಸೇರದಂತೆ ನೋಡಿಕೊಳ್ಳುವುದು. ತಿಂಗಳಿಗೊಮ್ಮೆಯಾದರೂ ಇವುಗಳನ್ನು ಶುದ್ಧೀಕರಿಸಿದರೆ ಇದರಿಂದ ಬಹುಮಟ್ಟಿನ ರಕ್ಷಣೆ ಸಾಧ್ಯವಾಗುತ್ತದೆ. ಜೊತೆಗೆ ಸುಂಡ ಇಲಿ ಹೆಗ್ಗಣಗಳು ಕೋಶಾಗಾರವನ್ನು ಸೇರದಂತೆ ನೋಡಿಕೊಳ್ಳುವುದು ಅವಶ್ಯಕ.

ದುರಸ್ತಿಕಾರ್ಯ : ಶೇಖರವಾಗಿರುವ ಹಸ್ತಪ್ರತಿಗಳ ರಕ್ಷಣೆಯ ಜೊತೆಗೆ ನಶಿಸಿ ಹೋಗಿರುವವನ್ನು ಜೀರ್ಣೋದ್ಧಾರಮಾಡುವುದೂ ಮುಖ್ಯ ಕರ್ತವ್ಯವಾಗಿದೆ. ಕಾಗದದ ಹಸ್ತಪ್ರತಿಗಳಾಗಿದ್ದರೆ ಅವುಗಳಲ್ಲಿ ಮಡಿಸಿಕೊಂಡಿರಬಹುದಾದ ಹಾಳೆಗಳನ್ನು ಬಿಚ್ಚಿ ಒತ್ತು ಕಾಗದದೊಳಗಿಟ್ಟು ಒದ್ದೆಯ ಸ್ಪಂಜಿನ ಸಹಾಯದಿಂದ ತೇವಮಾಡಬೇಕು. ಅನಂತರ ಒತ್ತುಕಾಗದದ ಮಡಿಕೆಯೊಳಗಿಟ್ಟು ಇಸ್ತ್ರಿಪೆಟ್ಟಿಗೆಯ ಸಹಾಯದಿಂದ ತಕ್ಕಷ್ಟು ಶಾಖದಿಂದ ಇಸ್ತ್ರಿ ಮಾಡಬೇಕು. ಆಗ ಅದರ ಮಡಿಕೆಯು ಅಳಿದು ನೇರವಾಗುತ್ತದೆ.

ಹಾಗೆಯೆ ಬಿಡಿಹಾಳೆಗಳು ಮತ್ತು ನಶಿಸಿದ ಹಾಳೆಗಳ ದುರಸ್ತುಕಾರ್ಯವನ್ನು ಕೆಲವು ನಿಯಮಗಳೊಡನೆ ಕೈಗೊಳ್ಳಬೇಕು. ಅದರಲ್ಲಿರುವ ಯಾವ ಅಕ್ಷರವೂ ಅಳಿಸಿಹೋಗದಂತೆ ಎಚ್ಚರಿಕೆ ವಹಿಸಬೇಕು. ಇದಕ್ಕೆ ಉಪಯೋಗಿಸುವ ಕಾಗದ ಕೈಯಿಂದ ಮಾಡಿದುದಾಗಿರಬೇಕು (Hand Made Paper); ದಾರ ಅಂಟು ಮೊದಲಾದುವುಗಳ ಗುಣಮಟ್ಟ ಚೆನ್ನಾಗಿರಬೇಕು. ಟಿಸ್ಯೂ ಚಿಫನ್ ಮೊದಲಾದುವನ್ನೂ ಉಪಯೋಗಿಸಿ ಈ ಕಾರ್ಯ ಮಾಡಬಹುದು.

ಅಮೂಲ್ಯವಾದ ದಾಖಲೆಪತ್ರಗಳನ್ನೂ ಹಸ್ತಪ್ರತಿಗಳನ್ನೂ ದುರಸ್ತುಪಡಿಸುವುದರಲ್ಲಿ ಎಲ್ಲಕ್ಕಿಂತಲೂ ಹೆಚ್ಚು ಯಶಸ್ಸುಗಳಿಸಿರುವ ವಿಧಾನವೆಂದರೆ ಲ್ಯಾಮಿನೇಶನ್ ರಿಪೇರಿ ಕ್ರಮ. ಭದ್ರಪಡಿಸಬೇಕಾದ ಹಾಳೆಗಳ ಎರಡು ಕಡೆಯೂ ಅಸಿಟೇಟ್ ತೆಳುಹಾಳೆಗಳನ್ನು ಹೊದಿಸುತ್ತಾರೆ. ಇದಕ್ಕಾಗಿಯೇ ಒಂದು ಪ್ರೋಟೋರೀತಿಯ ಹೈಡ್ರಾಲಿಕ್‌ಪ್ರೆಸ್ಸೊಂದನ್ನು ನಿರ್ಮಿಸಿದ್ದಾರೆ. ಈ ವಿಧಾನದಲ್ಲಿ ಹೊದಿಸಿದ ತೆಳುಹಾಳೆ ಮೂಲಹಾಳೆಯೊಡನೆ ಸೇರಿಕೊಂಡು ಅದರ ಶಕ್ತಿಯನ್ನು ಹೆಚ್ಚಿಸುತ್ತದೆ. ಯಂತ್ರದ ಮೂಲಕ ಮಾಡುವ ಲ್ಯಾಮಿನೇಶನ್ ಅಲ್ಲದೆ ಕೈಯಿಂದಲೂ ಇದನ್ನು ಮಾಡಬಹುದಾಗಿದೆ.

ಓಲೆಗರಿ ಮತ್ತು ಭೂರ್ಜಪತ್ರಗಳ ಮಸಿ ಅಳಿಸದಂತಿದ್ದರೆ ಪ್ರತಿ ಎಲೆಯನ್ನೂ ಗ್ಲಿಸರಿನ್ ಮತ್ತು ನೀರನ್ನು ೧ : ೧ ಪ್ರಮಾಣದಲ್ಲಿ ಸೇರಿಸಿ ಅದರಿಂದ ಶುದ್ಧಗೊಳಿಸಬಹುದು.

ಮಸಿಯು ಅಳಿಸುವಂತಿದ್ದರೆ ಕಾರ್ಬನ್ ಟೆಟ್ರಕ್ಲೋರೈಡ್ ಅಥವಾ ಅಸಿಟೋನ್ ಹಾಳೆಗಳಿಂದ ಸ್ವಚ್ಛಗೊಳಿಸಬೇಕು. ಕಂಠದಿಂದ ಅಕ್ಷರಗಳನ್ನು ಕೊರೆದಿರುವ ಓಲೆಗಳಿಗೆ ಗ್ರಾಫೈಟ್‌ಪುಡಿಯನ್ನು ಹಚ್ಚಿ ಅಕ್ಷರಗಳು ಚೆನ್ನಾಗಿ ಕಾಣುವಂತೆ ಮಾಡಬಹುದು. ಕೆಲವು ಸಲ ಶೀತದಿಂದಲೊ ಅಥವಾ ಮತ್ತಾವ ಕಾರಣದಿಂದಲೊ ಓಲೆಗಳು ಒಂದಕ್ಕೊಂದಕ್ಕೆ ಅಂಟಿಕೊಂಡಿರುತ್ತವೆ. ಇವುಗಳನ್ನು ಪ್ಯಾರಫಿನ್ ದ್ರಾವಣದಲ್ಲಿ ನೆನೆಯಿಸಿ ಬಿಡಿಸಲು ಪ್ರಯತ್ನಿಸಬೇಕು. ಪತ್ರಗಳು ಮುರಿದು ತುಂಡಾಗಿದ್ದರೆ ಅಥವಾ ಅವುಗಳ ಯಾವುದೇ ಭಾಗ ಹರಿದಿದ್ದರೆ ಆ ಭಾಗಕ್ಕೆ ಕ್ವಿಕ್‌ಫಿಕ್ಸ್ ಮೊದಲಾದ ಅಂಟುಗಳನ್ನು ಉಪಯೋಗಿಸಿ ಸರಿಪಡಿಸಬಹುದು. ಅನಂತರ ಅವುಗಳ ಮೇಲೆ ಟಿಸ್ಯೂ ಕಾಗದವನ್ನೊ ಚಿಫನ್ ಬಟ್ಟೆಯನ್ನೊ ಕಾರ್ಬಾಕ್ಸಿ ಮೆಥಿಲ್ ಸೆಲ್ಯುಲೋಸ್ ಎಂಬ ಅಂಟಿನ ಸಹಾಯದಿಂದ ಹೊದಿಸಬಹುದು. ಹೀಗೆ ಹೊದಿಸುವಾಗ ಪತ್ರದ ಒಂದು ಮಗ್ಗುಲಲ್ಲಿ ಹೊದಿಸಿದುದನ್ನು ಮತ್ತೊಂದು ಮಗ್ಗುಲಿಗೆ ಮುಂದುವರಿಸಿ ಮೊದಲ ಪುಟದ ಕೊನೆಯನ್ನು ಸೇರುವಂತೆ ಮಾಡಿದರೆ ಉತ್ತಮ. ಇದರಿಂದ ಪತ್ರದ ಎರಡು ಅಂಚುಗಳೂ ರಕ್ಷಿತವಾಗುತ್ತವೆ.

ನೀರಿನಲ್ಲಿ ನೆನೆದ ಹಾಳೆಗಳ ದುರಸ್ತಿ : ಹಸ್ತಪ್ರತಿಗಳು ನೀರಿನಲ್ಲಿ ನೆನೆದಾಗ ಅದರಲ್ಲಿರುವ ನೀರನ್ನು ಸೋರಿಸಿ ಹಾಳೆಗಳನ್ನು ನೆರಳಿನಲ್ಲಿ ಹರಡಿ ಒಣಗಿಸಬೇಕು, ಸಾಕಷ್ಟು ಗಾಳಿ ಬೆಳಕುಗಳಿದ್ದರೆ ಉತ್ತಮ. ಹಾಳೆಗಳು ಒಂದಕ್ಕೊಂದಕ್ಕೆ ಅಂಟಿಕೊಂಡಿದ್ದರೆ ಕಾಗದದ ಚಾಕುವನ್ನು ಉಪಯೋಗಿಸಿ ಜೋಪಾನವಾಗಿ ಬಿಡಿಸಬೇಕು. ಹಾಳೆಗಳನ್ನು ಆಗಾಗ ಮಗುಚಿ ಹಾಕುತ್ತಿರಬೇಕು. ಒಣಗಿದ ನಂತರ ಅದಕ್ಕೆ ಯಾವ ರೀತಿಯ ದುರಸ್ತಿಯು ಅವಶ್ಯಕವೊ ಅದನ್ನು ಮಾಡಬೇಕು.

ಸುಟ್ಟ ಹಾಳೆಗಳು : ಹಾಳೆಗಳು ಸುಟ್ಟುಹೋದರೆ ಅಲ್ಲಿಗೆ ಅವು ನಾಶವಾದುವೆಂದೇ ಭಾವಿಸುತ್ತೇವೆ. ಆದರೆ ಆ ಭಾವನೆ ಸರಿಯಲ್ಲ. ಇವುಗಳನ್ನು ಕದಲಿಸದೆ ಹಾಗೆಯೆ ಇನ್‌ಫ್ರಾ - ರೆಡ್ ಬೆಳಕಿನಲ್ಲಿಟ್ಟು ಓದಬಹುದಾಗಿದೆ. ಇವುಗಳ ದುರಸ್ತಿ ಅವುಗಳ ಸ್ಥಿತಿಯನ್ನು ಅವಲಂಬಿಸಿದೆ.[1]

---

1. ಸಂರಕ್ಷಣೆ ವಿಷಯದಲ್ಲಿ ವಿವರಗಳಿಗೆ ನೋಡಿ : ಬಿ.ಎಸ್. ಸಣ್ಣಯ್ಯ ; ಗ್ರಂಥ ಸಂರಕ್ಷಣೆ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ ೧೯೭೧.

ಮೈಕ್ರೊಫಿಲಂ : ಹೀಗೆ ಹಲವು ವಿಧಾನಗಳಿಂದ ಹಸ್ತಪ್ರತಿಗಳನ್ನು ರಕ್ಷಿಸುವುದಲ್ಲದೆ ಅವುಗಳ ಮರುಪ್ರತಿಗಳನ್ನು ಕಾಗದದ ಮೇಲೆ ಬರೆದಿಡಬಹುದು; ಇಲ್ಲವೆ ಮೈಕ್ರೊಫಿಲಂ ಮೂಲಕ ನಕಲು ಮಾಡಬಹುದು. ಕೈಯಿಂದ ಬರೆದ ಮರುಪ್ರತಿ ಮೂಲದ ಮೌಲ್ಯವನ್ನು ಕಳೆದುಕೊಂಡರೆ ಮೈಕ್ರೊಫಿಲಂ ಪ್ರತಿಯು ಮೂಲದ ಬೆಲೆಯನ್ನು ಉಳಿಸಿಕೊಳ್ಳುತ್ತದೆ. ಮೈಕ್ರೊಫಿಲ್ಮಿನಿಂದ ಮೂಲವನ್ನು ಶಾಶ್ವತವಾಗಿ ರಕ್ಷಿಸಿದಂತಾಗುವುದಲ್ಲದೆ ಹಲವಾರು ಪ್ರತಿಗಳನ್ನು ಮಾಡಿ ಎಲ್ಲಿಗೆ ಬೇಕಾದರೂ ಕಳುಹಿಸಬಹುದು. ಯಾವುದೇ ಮೂಲಪ್ರತಿ ಹಾಳಾದರೂ ಮೈಕ್ರೊಫಿಲ್ಮಿನಿಂದ ಎಂದಾದರೂ ಪ್ರತಿಯನ್ನು ಮಾಡಿಕೊಳ್ಳಬಹುದು. ಈ ಮೈಕ್ರೊಫಿಲ್ಮನ್ನು ಇದನ್ನು ಓದಲಿಕ್ಕಾಗಿಯೆ ನಿರ್ಮಿಸಲಾಗಿರುವ ಮೈಕ್ರೊಫಿಲಂ ರೀಡರಿನಲ್ಲಿ ಅಳವಡಿಸಿ ಓದಬಹುದು; ಇಲ್ಲವೆ ಫೋಟೋಕಾಗದದ ಮೇಲೆ ಪ್ರತಿ ಮಾಡಿಕೊಳ್ಳಬಹುದು. ಕೇಂದ್ರ ಹಸ್ತಪ್ರತಿ ಭಂಡಾರ ಮಾಡಲು ಮೈಕ್ರೊಫಿಲಂ ಅತ್ಯಂತ ಉತ್ತಮ ಸಾಧನವಾಗಿದೆ. ಎಲ್ಲೆಲ್ಲಿಯೊ ಸಂಗ್ರಹವಾಗಿರುವ ಹಸ್ತಪ್ರತಿಗಳನ್ನು ಈ ಮೂಲಕ ಒಂದುಗೂಡಿಸಬಹುದು. ಕೈಯಿಂದ ಬರೆದು ಪ್ರತಿ ಮಾಡುವ ಕೆಲಸಕ್ಕೆ ಹೋಲಿಸಿದರೆ ಕಾಲ ಮತ್ತು ಖರ್ಚು ಎರಡರಿಂದಲೂ ಮೈಕ್ರೊಫಿಲಂ ಬಹಳ ಸರಳ ಮತ್ತು ಸುಲಭವಾಗಿದೆ. ಈಗ ಡಿಜಿಟೈಜೇಸನ್ ಮೂಲಕ ಇದನ್ನು ಮಾಡಬಹುದಾಗಿದೆ.

ಮೂಲ ಹಸ್ತಪ್ರತಿಗಳನ್ನು ಸಂಗ್ರಹಿಸಲಾಗದಿರುವ ಸಂದರ್ಭಗಳುಂಟು. ಒಂದು ಸಂಸ್ಥೆಯೊ ಅಥವಾ ವ್ಯಕ್ತಿಯೊ ಹೊಂದಿರುವ ಹಸ್ತಪ್ರತಿಗಳನ್ನು ಹೊರಗೆ ಕೊಡದಿರುವಾಗ ಅವುಗಳನ್ನು ಮೈಕ್ರೊಫಿಲಂ ರೂಪದಲ್ಲಿ ಸಂಗ್ರಹಿಸುವ ಕೆಲಸವನ್ನು ಕೆಲವು ಸಂಸ್ಥೆಗಳು ಮಾಡುತ್ತಿವೆ. ಹೀಗೆ ಮೈಕ್ರೊಫಿಲಂರೂಪದಲ್ಲಿ ಸಂಗ್ರಹಿಸಿದವುಗಳನ್ನು ಅತ್ಯಂತ ಎಚ್ಚರಿಕೆಯಿಂದ ಕಾಪಾಡಬೇಕಾದುದು ಸಹಜವಾಗಿರುವಂತೆಯೇ ಓದುಗರಿಗೆ ಒದಗಿಸಬೇಕಾದುದೂ ಅನಿವಾರ್ಯವಾಗಿದೆ. ಓದುಗರಿಗೆ ಕೊಟ್ಟಾಗ ಉಪಯೋಗಿಸುವಲ್ಲಿ ಆಗುವ ಅಚಾತುರ್ಯದಿಂದ ಫಿಲ್ಮಿನ ಯಾವುದೇ ಭಾಗಕ್ಕೆ ಹಾನಿಯಾಗಬಹುದು. ಆದುದರಿಂದ ಮೂಲಪ್ರತಿಯನ್ನು ಮಾಸ್ಟರ್ ನೆಗೆಟಿವ್ ಎಂದು ಕಾಪಾಡಿಕೊಂಡು ಮರುಪ್ರತಿಯನ್ನು ಮಾಡಿ ಉಪಯೋಗಿಸುವುದು ಸೂಕ್ತವಾಗಿದೆ. ಇದರಿಂದ ಎರಡು ಪ್ರಯೋಜನಗಳಿವೆ. ಒಂದು, ಮೂಲಪ್ರತಿಯನ್ನು ಯಥಾವತ್ತಾಗಿ ಕಾಪಾಡಬಹುದು; ಎರಡು, ಒಂದುವೇಳೆ ಒಂದು ಪ್ರತಿ ಯಾವುದೇ ರೀತಿಯಲ್ಲಿ ಹಾನಿಗೊಳಗಾದರೆ ಮತ್ತೊಂದು ಪ್ರತಿಯಿಂದ ಸಹಾಯವಾಗುತ್ತದೆ. ರಕ್ಷಣಾ ದೃಷ್ಟಿಯಿಂದ ಈ ಎರಡೂ ಪ್ರತಿಗಳನ್ನು ಬೇರೆ ಬೇರೆ ಸ್ಥಳಗಳಲ್ಲಿಡುವುದು ಉತ್ತಮ. ಇದರಿಂದ ಯಾವುದೇ ಒಂದು ಸ್ಥಳದಲ್ಲಿದ್ದ

ಪ್ರತಿ ನೈಸರ್ಗಿಕ ಅಪಾಯಗಳಿಗೆ ಒಳಗಾದರೆ ಮತ್ತೊಂದರಿಂದ ಅದನ್ನು ತುಂಬಿಕೊಳ್ಳಬಹುದು.

ಮೈಕ್ರೊಫಿಲಂ ಸೌಲಭ್ಯವಿಲ್ಲದೆಡೆಗಳಲ್ಲಿ ಹಸ್ತಪ್ರತಿಗಳ ಮರುಪ್ರತಿಗಳನ್ನು ಕಾಗದದ ಮೇಲೆ ಪ್ರತಿಮಾಡಿ ರಕ್ಷಿಸುವುದುಂಟು. ಇದು ನಶಿಸಿಹೋಗಿರುವ ಹಸ್ತಪ್ರತಿಗಳಿಗೆ ಅತ್ಯಗತ್ಯ ಕ್ರಮವಾಗಿದೆ. ಈ ಪ್ರತಿಗಳನ್ನು ಶಾಶ್ವತವಾಗಿ ರಕ್ಷಿಸಬೇಕಾಗಿರುವುದರಿಂದ ಇದಕ್ಕೆ ಕೈಯಿಂದ ತಯಾರಿಸಿದ ಉತ್ತಮ ಕಾಗದವನ್ನು ಬಳಸಬೇಕು; ಮಸಿಯ ಗುಣಮಟ್ಟ ಉತ್ತಮವಾಗಿರಬೇಕು. ಪ್ರತಿ ಮಾಡುವವರು ಹಸ್ತಪ್ರತಿಗಳಲ್ಲಿ ಕಂಡುಬರುವ ಎಲ್ಲ ತರಹದ ಲಿಪಿಗಳನ್ನೂ ಸರಿಯಾಗಿ ಓದುವವರಾಗಿರಬೇಕು ; ಮೂಲದಲ್ಲಿದ್ದುದನ್ನು ಇದ್ದಂತೆಯೇ ಬರೆಯಬೇಕು; ಯಾವುದೇ ಪದ ಅರ್ಥವಾಗದಿರುವಾಗ ಅದರಲ್ಲಿನ ಅಕ್ಷರ ಹೀಗೆಯೇ ಇರಬೇಕೆಂದು ಊಹಿಸಿ ಬದಲಾಯಿಸುವುದು ತುಂಬಾ ಅಪಾಯಕರ. ಅಕ್ಷರಗಳ ಬಗ್ಗೆಯಾಗಲಿ ಕಾಗುಣಿತಗಳ ವಿಚಾರವಾಗಿಯಾಗಲಿ ಸ್ವಾತಂತ್ರ್ಯವಹಿಸಬಾರದು. ಅಲ್ಲದೆ ಮೂಲ ಪ್ರತಿಕಾರರು ಬರೆದ ಭಾಗವನ್ನು ಬಿಡಬೇಕಾದಾಗ ಅಂತಹ ಅಕ್ಷರಗಳ ಮೇಲೆ ಚುಕ್ಕಿಗಳನ್ನೊ ಅಡ್ಡಗೆರೆಗಳನ್ನೊ, ಇಲ್ಲವೆ ಹೆಚ್ಚು ಭಾಗ ಬಿಡಬೇಕಾದಾಗ ಅಷ್ಟಕ್ಕೂ ಕಂಸಗಳನ್ನೊ ಹಾಕಿ ತೋರಿಸಿರುವುದುಂಟು; ಸೇರಿಸಬೇಕಾದ ಭಾಗಗಳನ್ನು ಖಾಲಿಯಿರುವ ಜಾಗದಲ್ಲಿ ಬರೆದು ಸೂಕ್ತ ಚಿಹ್ನೆಯೊಡನೆ ಸೂಚಿಸಿರುತ್ತಾರೆ. ಇಂತಹವುಗಳೆಲ್ಲವನ್ನೂ ಪ್ರತಿಕಾರರು ಎಚ್ಚರಿಕೆಯಿಂದ ಗಮನಿಸಿ ಬರೆಯಬೇಕಾಗುತ್ತದೆ.

ಪ್ರಾಚೀನ ಹಸ್ತಪ್ರತಿಗಳಲ್ಲಿ ಆಯಾ ಆಶ್ವಾಸ ಅಥವಾ ಸಂಧಿಯ ಪದ್ಯಸಂಖ್ಯೆಗಳನ್ನು ನಮೂದಿಸಿರುವುದಿಲ್ಲ. ; ಇಂತಹ ಕಡೆಗಳಲ್ಲಿ ನೋಡಬೇಕಾದುದು ಮುಖ್ಯವಾಗಿ ಪತ್ರಸಂಖ್ಯೆ. ಈ ಸಂಖ್ಯೆಯನ್ನು ಪತ್ರದ ಮುಂಭಾಗ ಅಥವಾ ಹಿಂಬದಿಯ ಎಡಭಾಗದ ಆದಿಯಲ್ಲಿ ಇಲ್ಲವೆ ಎಡರಂಧ್ರದ ಪಕ್ಕದಲ್ಲಿ ಹಾಕುವುದುಂಟು. ಸಾಮಾನ್ಯವಾಗಿ ಎಲ್ಲ ಹಸ್ತಪ್ರತಿಗಳಲ್ಲಿಯೂ ಕನ್ನಡ ಸಂಖ್ಯೆಗಳನ್ನೇ ಹಾಕಿರುವುದಾದರೂ ಅಪರೂಪವಾಗಿ ಕೆಲವು ಪ್ರತಿಗಳಲ್ಲಿ ಕನ್ನಡ ಅಕಾರಾದಿ ವರ್ಣಮಾಲೆಯನ್ನು ಪತ್ರಸಂಖ್ಯೆಗೆ ಬದಲಾಗಿ ಉಪಯೋಗಿಸಿದ್ದಾರೆ. ಉದಾಹರಣೆಗೆ ಕ್ರಿ.ಶ. ೧೪೩೭ರಲ್ಲಿ ಪ್ರತಿಯಾಗಿರುವ ಗುಣವರ್ಮನ ಪುಷ್ಪದಂತ ಪುರಾಣದ (ಕೆ ೫೧ ಕ ಅಸಂ ಮೈ) ಓಲೆಕಟ್ಟನ್ನು ನೋಡಬಹುದು. ಇದರಲ್ಲಿ ಪತ್ರದ ಎರಡೂ ಬದಿಗೆ ಬರವಣಿಗೆಯಿದ್ದು ಒಂದು ಕಡೆ ಪತ್ರಸಂಖ್ಯೆಯನ್ನು ಕನ್ನಡ ಅಕ್ಷರಗಳಲ್ಲಿ ಕೊಡಲಾಗಿದೆ.

ಯಾವುದೇ ಹಸ್ತಪ್ರತಿಯಾಗಲಿ ಓಲೆಗಳಲ್ಲಿ ಎರಡು ಕಡೆ ಬರವಣಿಗೆಯಿದ್ದರೂ

ಒಂದೇ ಬದಿಗೆ ಪತ್ರಸಂಖ್ಯೆಯಿರುತ್ತದೆ. ಕಾಗದದ ಹಸ್ತಪ್ರತಿಗಳಲ್ಲಿ ಒಂದು ಕಡೆ ಬರವಣಿಗೆಯಿದ್ದರೆ ಒಂದೇ ಕಡೆ ಪತ್ರಸಂಖ್ಯೆಯಿರುವುದು. ಸಾಮಾನ್ಯ; ಎರಡು ಕಡೆ ಬರವಣಿಗೆಯಿದ್ದಾಗ ಕೆಲವರಲ್ಲಿ ಒಂದುಕಡೆಯೂ, ಮತ್ತೆ ಕೆಲವರಲ್ಲಿ ಎರಡು ಕಡೆಯೂ ಸಂಖ್ಯೆಗಳನ್ನು ಕೊಟ್ಟಿರುತ್ತಾರೆ. ಮೊದಲನೆಯದನ್ನು ಪತ್ರಸಂಖ್ಯೆಯೆಂದೂ ಎರಡನೆಯದನ್ನು ಪುಟಸಂಖ್ಯೆಯೆಂದೂ ಹೇಳುತ್ತೇವೆ.

ಹಸ್ತಪ್ರತಿಗಳಲ್ಲಿ ಕಂಡುಬರುವ ಇಂತಹ ಎಲ್ಲ ಅಂಶಗಳನ್ನೂ ಗಮನಿಸಿ ಪ್ರತಿ ಮಾಡಿದಾಗ ಮಾತ್ರ ಮರುಪ್ರತಿಗೆ ಮೂಲದ ಮೌಲ್ಯ ಸಾಧ್ಯವಾದಷ್ಟೂ ಹೆಚ್ಚುತ್ತದೆ. ಎಂತಹ ವ್ಯಕ್ತಿಯೇ ಪ್ರತಿಮಾಡಿರಲಿ ಮೂಲಪ್ರತಿಯನ್ನು ಮತ್ತೊಬ್ಬರಿಂದ ಓದಿಸಿ ತಾಳೆ ನೋಡಿ ಸರಿಪಡಿಸಬೇಕು. ಹೀಗೆ ಮಾಡುವುದರಿಂದ ಮೂಲ ಪ್ರತಿಯನ್ನು ಇಬ್ಬರು ಪರಿಣತರು ಓದಿದಂತಾಗುತ್ತದೆ. ಒಬ್ಬರು ತಪ್ಪು ಓದಿದರೂ ಮತ್ತೊಬ್ಬರು ಅದನ್ನು ಸರಿಪಡಿಸಬಹುದು. ಆದರೆ ಹೋಲಿಸುವಾಗ ಪ್ರತಿಮಾಡಿದವರೇ ಮೂಲಪ್ರತಿಯನ್ನು ಮತ್ತೆ ಓದುವುದು ತಪ್ಪು. ಪ್ರತಿಕಾರರು ಅಕ್ಷರಗಳನ್ನು ವಿವಿಧ ರೀತಿಯಲ್ಲಿ ಬರೆದಿರುತ್ತಾರೆ. ಈ ಅಕ್ಷರಗಳೆಲ್ಲವನ್ನೂ ಎಲ್ಲರೂ ಒಂದೇ ರೀತಿ ಓದಲು ಸಾಧ್ಯವಾಗುವುದಿಲ್ಲ. ಇದಕ್ಕೆ ಸಾಕಷ್ಟು ಅನುಭವ ಮತ್ತು ತರಬೇತಿ ಅವಶ್ಯಕ, ಉದಾಹರಣೆಗೆ ಕನ್ನಡ ಓಲೆಪ್ರತಿಯಲ್ಲಿ ಬರುವ ಚಕಾರದ ಮಹಾಪ್ರಾಣವಾದ ಛಕಾರದ ಬರಹವನ್ನು "ದ" ಎಂದೇ ಅನುಭವವಿಲ್ಲದವರು ಓದುತ್ತಾರೆ. ಆದರೆ ಛಕಾರದ ಬರಹವು ದಕಾರದಂತೆ ಇದ್ದರೂ, ಅದರ ಹೊಕ್ಕುಳಲ್ಲಿ ಒಂದು ಸೊನ್ನೆಯಿರುತ್ತದೆ. ಹೊಕ್ಕುಳಲ್ಲಿ ಸೊನ್ನೆ ಇದ್ದರೆ ಅದು ಛಕಾರ; ಇಲ್ಲದಿದ್ದರೆ ಅದು ದಕಾರ ಎಂಬುದಾಗಿ ತಿಳಿಯಬೇಕು. ಪ್ರತಿಮಾಡುವಾಗ ಮೂಲದ ಪದಗಳೋ ಅಕ್ಷರಗಳೋ ಪ್ರಮಾದದಿಂದ ಬಿಟ್ಟುಹೋಗಬಹುದು. ಇವುಗಳೆಲ್ಲವನ್ನೂ ತಿದ್ದಿ ಸರಿಪಡಿಸಲು ತಾಳೆ ನೋಡುವುದು ಅತ್ಯಂತ ಅವಶ್ಯಕವೂ ಅನಿವಾರ್ಯವೂ ಆಗಿದೆ. ಪ್ರತಿಯಾದ ಮೇಲೆ ಅದಕ್ಕೆ ಉತ್ತಮ ರೀತಿಯ ರಟ್ಟುಕಟ್ಟಿ ಕೋಶಾಗಾರಕ್ಕೆ ಸೇರಿಸಬಹುದು.

ಪರಿಚಲನೆ

ಸಂರಕ್ಷಿಸಿದ ಹಸ್ತಪ್ರತಿಗಳ ಪರಿಚಲನೆ (Circulation) ಹೇಗೆ ಎಂಬ ಬಗೆಗೂ ಯೋಚಿಸಬೇಕಾದುದು ಸಹಜವಾಗಿದೆ. ಹಸ್ತಪ್ರತಿಗಳನ್ನು ಉಪಯೋಗಿಸಬಯಸುವವರು ಸಾಮಾನ್ಯವಾಗಿ ಹಸ್ತಪ್ರತಿಭಂಡಾರದಲ್ಲಿಯೇ ಕುಳಿತು ನೋಡುವುದು ಮತ್ತು ಕೆಲವು ವ್ಯಕ್ತಿಗಳಿಗೆ ಸಂಸ್ಥೆಗಳಿಗೆ ಎರವಲು ಕೊಡುವುದೂ ರೂಢಿಯಲ್ಲಿದೆ. ಆದರೆ ಮನೆಗೆ ಸಂಸ್ಥೆಗೆ ಕೊಡುವುದರಿಂದ ಅಪಾಯವಿದೆ ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಮೂಲಪ್ರತಿ ಯಾವುದೇ ಕಾರಣದಿಂದ ಕಳೆದುಹೋದರೆ ಅದನ್ನು ಮತ್ತೆ ಪಡೆಯುವುದು ಸಾಧ್ಯವಿಲ್ಲದ ಮಾತು. ಎಷ್ಟೇ ಮೌಲ್ಯವನ್ನು ತೋರಿಸಿ ಜೀವವಿಮೆ ಮಾಡಿ ಅಂಚೆ ಮೂಲಕ ಕಳುಹಿಸಿದರೂ ಆ ವಿಮೆಯ ಹಣ ನಮಗೆ ಬಂದರೂ ಮೂಲಪ್ರತಿ ಮಾತ್ರ ನಮಗೆ ದೊರೆತಂತಾಗುವುದಿಲ್ಲ. ಆದುದರಿಂದ ಯಾವುದೇ ಹಸ್ತಪ್ರತಿಯನ್ನು ವ್ಯಕ್ತಿ ಸಂಸ್ಥೆ ಯಾರೇ ಎರವಲು ಬಯಸಿದರೂ ಅದರ ನಕಲನ್ನು ಕೈಯಿಂದ ಮಾಡುವ ಮೂಲಕವಾಗಿಯಾಗಲಿ ಮೈಕ್ರೊಫಿಲಂ, ಫೋಟೋಸ್ಟ್ಯಾಟ್‌ಪ್ರತಿಯ ರೂಪದಲ್ಲಾಗಲಿ ಒದಗಿಸುವುದು ಉತ್ತಮಮಾರ್ಗವೆಂದು ಹೇಳಬಹುದಾಗಿದೆ. ಅದರಲ್ಲಿಯೂ ಯಾವುದೇ ಕೃತಿಯ ಏಕೈಕ ಹಸ್ತಪ್ರತಿಯನ್ನಂತೂ ಹೊರಗೆ ಕೊಡುವುದು ಅತ್ಯಂತ ಅಪಾಯಕರ.

ಕೋಶಾಗಾರದಲ್ಲಿಯೇ ಅಭ್ಯಾಸ ನಡೆಸಲು ಕೊಡುವ ಹಸ್ತಪ್ರತಿಗಳಿಗೂ ಅಪಾಯ ತಪ್ಪಿದ್ದಲ್ಲ. ಏಕೆಂದರೆ ಬರುವ ಎಲ್ಲ ಓದುಗರೂ ಒಂದೇ ಗುಣಮಟ್ಟದವರಾಗಿರಲು ಸಾಧ್ಯವಿಲ್ಲ. ಅಭ್ಯಾಸ ಮಾಡಲು ಬಂದ ಜನ ಸಮಯಸಾಧಿಸಿ ಅದರಲ್ಲಿನ ಕೆಲವು ಹಾಳೆಗಳನ್ನೇ ಎಗರಿಸಬಹುದು. ಇದು ತೀರಾ ಅಲ್ಪರು ಮಾಡುವ ಕೆಲಸವೆಂದೂ, ಅಂತಹವರು ಇಂತಹ ಕಡೆಗಳಲ್ಲಿ ಬರುವುದು ಅಪರೂಪವೆಂದೂ ಪರಿಗಣಿಸಿದರೂ ಅದರ ಸಾಧ್ಯತೆಯನ್ನು ಯಾರೂ ತಳ್ಳಿಹಾಕುವಂತಿಲ್ಲ. ಆದುದರಿಂದ ಹಸ್ತಪ್ರತಿ ವಿಭಾಗದ ಸಿಬ್ಬಂದಿ ಸಾಕಷ್ಟು ಎಚ್ಚರದಿಂದಿರಬೇಕಾದುದು ಅವಶ್ಯಕ.

ಆದರೆ ಇಂತಹ ಸಂಭಾವ್ಯತೆಗಳಿವೆಯೆಂದು ಹಸ್ತಪ್ರತಿಗಳನ್ನು ಓದುಗರಿಗೆ ಒದಗಿಸದಿರುವುದು ಅಸಾಧುವಾಗುತ್ತದೆ. ಯಾವುದೇ ಸಂಸ್ಥೆ ಸಂಗ್ರಹಿಸಿರುವ

ಸ್ತಪ್ರತಿಗಳೆಲ್ಲವೂ ಸಾರ್ವಜನಿಕರಿಂದ ಬಂದುವಾಗಿರುತ್ತವೆ. ಇದು ಚಿತವಾಗಿರಬಹುದು; ಇಲ್ಲವೆ ಕೊಂಡುಕೊಂಡಿರಬಹುದು; ಸಂಸ್ಥೆಯು ಹಲವಾರು ಟ್ಟುಪಾಡುಗಳನ್ನು ಮಾಡಿಕೊಂಡಿರಬಹುದು. ಆದರೂ ಇಂತಹ ಕೆಲಸಗಳಲ್ಲಿ ಡಗಿರುವವರೇ ಕೇವಲ ಕೆಲವೇ ಜನರಿರುವಾಗ ಆದಷ್ಟೂ ಅವರಿಗೆ ಸಹಾಯ ಾಡಬೇಕಾದುದು ಹಸ್ತಪ್ರತಿಪಾಲಕರ ಕರ್ತವ್ಯವಾಗಿದೆ. ಇದರಿಂದ ಇನ್ನೂ ಅಗಾಧ ಮಾಣದಲ್ಲಿ ಪ್ರಕಟವಾಗಬೇಕಾಗಿರುವ ಪ್ರಾಚೀನ ಕೃತಿಗಳು ಸಾಂಸ್ಕೃತಿಕಸಂಪತ್ತಿಗೆ ಡುಗೆಗಳಾಗಿ ಹೊರಬಂದು ಅನೇಕ ಜನಮನವನ್ನು ಪ್ರವೇಶಿಸಲು ಹಕಾರಿಯಾಗುವುದಲ್ಲದೆ ಸಾಹಿತ್ಯವೂ ಶ್ರೀಮಂತವಾಗುತ್ತದೆ.

ಆದರೆ ಇಂತಹ ಕಾರ್ಯದಲ್ಲಿ ಆಸಕ್ತರಾಗಿ ಹಸ್ತಪ್ರತಿಗಳನ್ನು ಉಪಯೋಗಿಸಿಕೊಳ್ಳಲು ಂದ ಕೆಲವರಿಗೆ ಹಸ್ತಪ್ರತಿಪಾಲಕರು ತಾವೇ ಆ ಕೃತಿಗಳನ್ನು ಹೊರಗಿನವರಿಗೆ ಕೊಟ್ಟರೆ ಮ್ಮ ಸಂಸ್ಥೆಯಲ್ಲಿ ಅದೇ ಕೆಲಸಕ್ಕಾಗಿಯೇ ಇರುವವರಿಗೆ ಮಾಡಲು ಕೆಲಸವಿರುವುದಿಲ್ಲವೆಂಬ ದರಿಕೆ ಇದೆ. ಇಂತಹ ಪಾಲಕರಿಗೆ ಹಸ್ತಪ್ರತಿಗಳಲ್ಲಿ ದೊರೆಯುವ ಪ್ರಾಚೀನ ಸಾಹಿತ್ಯ ಷ್ಟು ವಿಪುಲವಾಗಿದೆಯೆಂಬುದಾಗಲಿ, ಈ ಕೆಲಸವೆಲ್ಲವನ್ನೂ ಮಾಡಿ ಮುಗಿಸಲು ಬೇಕಾದ ್ತ ಮತ್ತು ಕಾಲದ ಕಲ್ಪನೆಯಾಗಲಿ ಇಲ್ಲವೆಂದೇ ಹೇಳಬೇಕಾಗಿದೆ. ಒಮ್ಮೆ ಇಂತಹ ಾತೊಂದು ಮೇಲಣ ಅಧಿಕಾರಿಗಳಿಂದ ಬಂದಾಗ ಕನ್ನಡದಲ್ಲಿ ಅಪ್ರಕಟಿತ ಪದ್ಯಗ್ರಂಥಗಳ ಟ್ಟಿ ಮಾಡಿ, ಸರಕಾರೀ ನೌಕರರು ನಿಯಮದಂತೆ ಮಾಡಬೇಕಾದ ಕೆಲಸದ ದಿನಗಳನ್ನೂ, ಲಸದ ವೇಳೆಯನ್ನೂ ಗಣನೆಗೆ ತೆಗೆದುಕೊಂಡು ಈ ಕೆಲಸ ಮಾಡಲು ಹತ್ತು ಮಂದಿ ಶೋಧಕರಿಗೆ ನೂರು ವರ್ಷಗಳು ಬೇಕಾಗುತ್ತದೆಂಬುದನ್ನು ನಾನು ಲೆಕ್ಕಾಚಾರ ಮಾಡಿ ೋರಿಸಿದ್ದೇನೆ. ಇಂತಹ ಪದ್ಯಗ್ರಂಥಗಳಲ್ಲದೆ ಗದ್ಯ ಶಾಸ್ತ್ರ ತತ್ವ ಮತ್ತು ಕನ್ನಡ ೀಕೆಯನ್ನೊಳಗೊಂಡ ಪ್ರಾಕೃತ, ಸಂಸ್ಕೃತ ಗ್ರಂಥಗಳೇ ಮೊದಲಾದುವೆಲ್ಲವನ್ನೂ ಸಂಪಾದಿಸಿ ಕಟಿಸುವುದು ಯಾವ ಕಾಲಕ್ಕೆ ಎಂದು ಯೋಚಿಸುವಂತಾಗುತ್ತದೆ. ಈಗ ಸಂಗ್ರಹವಾಗಿರುವ ಸ್ತಪ್ರತಿಗಳ ಜೊತೆಗೆ, ಹೊಸ ಹೊಸ ಗ್ರಂಥಗಳ ಹಸ್ತಪ್ರತಿಗಳು ದೊರೆಯುತ್ತಿರುತ್ತವೆ. ಲ್ಲದೆ ಈಗಾಗಲೇ ಪ್ರಕಟವಾಗಿರುವ ಗ್ರಂಥಗಳ ಹೊಸ ಹಸ್ತಪ್ರತಿಗಳು ದೊರೆತಲ್ಲಿ ತ್ತೊಮ್ಮೆ ಅವುಗಳ ಪರಿಷ್ಕರಣ ಮಾಡಬೇಕಾಗುತ್ತದೆ.

ಈ ವಿಷಯಗಳನ್ನೆಲ್ಲಾ ಮನಗಂಡಿದ್ದ ಹಿರಿಯ ವಿದ್ವಾಂಸರಾದ ಡಿ.ಎಲ್. ರಸಿಂಹಾಚಾರ್ಯರು "ಪ್ರಾಚೀನ ಗ್ರಂಥಗಳ ಸಂಪಾದನೆಯನ್ನೆಲ್ಲಾ ಮಾಡಿ ಮುಗಿಸುವುದಕ್ಕೆ ೀರ್ಘಕಾಲ ಬೇಕಾಗುತ್ತದೆ ; ಅಲ್ಲದೆ ಒಂದು ಗ್ರಂಥವನ್ನು ಒಬ್ಬನು ಒಂದು ಸಲ

ಸಂಪಾದನೆ ಮಾಡಿಬಿಟ್ಟರೆ ಸಾಲದು. ಆ ಗ್ರಂಥಗಳ ಹಸ್ತಪ್ರತಿಗಳು ಕಾಲದಿಂದ ಕಾಲಕ್ಕೆ ದೊರೆಯುತ್ತಲೇ ಇರುತ್ತವೆ. ಅವುಗಳ ಉಪಯೋಗವನ್ನು ಮಾಡಿಕೊಳ್ಳುವುದು ಭವಿಷ್ಯತ್ಕಾಲದ ಸಂಪಾದಕರಿಗೆ ಸೇರಿದ್ದು. ಆದ್ದರಿಂದ ಸಂಪಾದಕನ ಕೆಲಸ ನಿಂತು ಹೋಗುವುದಕ್ಕೆ ಅವಕಾಶವಿಲ್ಲ. ಅದು ನಡೆಯುತ್ತಲೇ ಇರುತ್ತದೆ. ಚೆನ್ನಾಗಿ ಸಂಪಾದಿತವಾಗಿರುವ ಗ್ರಂಥಗಳು ತಮಗೆ ಬೇಕೆಂದು ಜನ ಬಯಸಿದರೆ ಆ ಬಯಕೆಯ ಪೂರೈಕೆಯನ್ನು ಮಾಡಬೇಕಾಗುತ್ತದೆ, ಸಂಪಾದಕ"[1] ಎಂದು ಹೇಳಿದ್ದಾರೆ.

---

1. ಕ.ಗ್ರಂ.ಸಂ.ಪು. ೨೧೮

ಅಕ್ಷರಸ್ಖಾಲಿತ್ಯಗಳು

ಪ್ರತಿಕಾರನು ಎಷ್ಟೇ ಎಚ್ಚರಿಕೆಯಿಂದ ಬರೆದರೂ ಅವನಿಗರಿವಿಲ್ಲದೆಯೇ ಕೆಲವು ಪ್ಪುಗಳಾಗುವುದುಂಟು. ಅಲ್ಲದೆ ಪ್ರತಿಕಾರನ ಕಾವ್ಯಪ್ರೌಢಿಮೆ ಲಿಪಿಪರಿಣತಿ ುದಲಾದುವುಗಳೂ ಹಸ್ತಪ್ರತಿಯಲ್ಲಾಗುವ ತಪ್ಪುಗಳ ಮೇಲೆ ಪರಿಣಾಮ ಬೀರುತ್ತವೆ. ರಿಂದಲೇ ಒಂದೇ ಕೃತಿಯ ಹಲವು ಪ್ರತಿಗಳು ದೊರೆತಾಗ ವಿವಿಧ ಪಾಠಾಂತರಗಳನ್ನು ವು ಕಾಣುತ್ತೇವೆ. ಸಾಮಾನ್ಯವಾಗಿ ಉಂಟಾಗುವ ತಪ್ಪುಗಳನ್ನು ಶ್ರೀ ಡಿ.ಎಲ್. ಸಿಂಹಾಚಾರ್ ಅವರು ಕಣ್ತಪ್ಪು ಕಿವಿತಪ್ಪು ಕೈತಪ್ಪುಗಳೆಂದು ಗುರುತಿಸಿದ್ದಾರೆ.

ಒಬ್ಬನೇ ಹಸ್ತಪ್ರತಿಯನ್ನು ನೋಡಿ ಬರೆಯುತ್ತಿರುವಲ್ಲಿ ಅಕ್ಷರಸಾದೃಶ್ಯದಿಂದ ದಕ್ಷರಕ್ಕೆ ಬದಲಾಗಿ ಮತ್ತೊಂದಕ್ಷರ ಬರಬಹುದು; ಇಲ್ಲವೆ ಒಂದು ಅಕ್ಷರ ಅಥವಾ ವೇ ಬಿಟ್ಟುಹೋಗಬಹುದು; ಅಥವಾ ಒಂದು ಪಂಕ್ತಿಯ ಕೊನೆಯಿಂದ ಮತ್ತೊಂದು ಕ್ತಿಯ ಆದಿಗೆ ಬರುವಾಗ ನಡುವಣ ಒಂದು ಪಂಕ್ತಿಯೇ ಇಲ್ಲವಾಗಬಹುದು. ಹೀಗೆ ಕ್ತಿಯೇ ಬಿಟ್ಟುಹೋಗುವುದು ಓಲೆಗ್ರಂಥಗಳಿಂದ ಪ್ರತಿ ಮಾಡುವಾಗ ಹೆಚ್ಚಾಗಿ ಭವಿಸುವುದುಂಟು. ಇಂತಹ ತಪ್ಪು ಬರೆಯುವಾಗಲ್ಲದೆ ಓದುವಾಗಲೂ ಆಗಬಹುದು. ಾಗದಿರಲೆಂದೇ ಕೆಲವು ಪ್ರತಿಕಾರರು ಪ್ರತಿ ಪಕ್ಕದ ಪ್ರತಿಪಂಕ್ತಿಗೂ ಎರಡು ನೆಗಳಲ್ಲಿಯೂ ಸಂಖ್ಯೆಗಳನ್ನು ಕೊಟ್ಟಿರುವುದುಂಟು. ಹೀಗೆ ಬರೆಯುವಾಗ ಆದ ಪ್ಪುಗಳನ್ನು ಬಿಡಬೇಕೆಂಬ ಹಾಗೆಯೇ ಸೇರಿಸಬೇಕಾದುವನ್ನು ಖಾಲಿಯಿದ್ದ ಜಾಗಗಳಲ್ಲಿ ದು ಎಲ್ಲಿಗೆ ಸೇರಿಸಬೇಕೆಂಬ ಬಗೆಗೆ ಸೂಚನೆ ಕೊಟ್ಟಿರುವುದನ್ನು ಕಾಣಬಹುದು. ತೆಯೇ ಇಬ್ಬರು ಹೋಲಿಸಿದಾಗಲೂ ಕೆಲವು ತಪ್ಪುಗಳು ಹಾಗೆಯೇ ಉಳಿಯುವ ಭವವುಂಟು. ಒಬ್ಬರು ಓದಿ ಪ್ರತಿ ಮಾಡಿರುವುದನ್ನು ಹೋಲಿಸುವಾಗ ಮತ್ತೊಬ್ಬರು ಬೇಕೆಂಬುದು ಸಾಮಾನ್ಯವಾಗಿದೆ. ಪ್ರತಿಕಾರರು ಓದುವಾಗ ಅಕ್ಷರಗಳನ್ನು ತಪ್ಪಾಗಿ ದ್ದರೆ ಮತ್ತೊಬ್ಬರು ಸರಿಪಡಿಸಬಹುದೆಂಬ ನಂಬಿಕೆಯಿಂದ ಹೀಗೆ ಮಾಡಲಾಗುತ್ತದೆ. ರೆ ಹೀಗೆ ಮಾಡುವಾಗ ಒಬ್ಬರು ಓದಿದುದನ್ನು ಮತ್ತೊಬ್ಬರು ಸರಿಯಾಗಿ ಸಿಕೊಂಡು, ಬರೆದುದನ್ನು ಎಚ್ಚರಿಕೆಯಿಂದ ನೋಡಿಕೊಂಡು ಹೋದಾಗ ಮಾತ್ರ

ಇದರ ಪೂರ್ಣ ಪ್ರಯೋಜನ ಪಡೆಯಬಹುದು. ಇಲ್ಲದಿದ್ದಲ್ಲಿ ಓದುವವರು ಸರಿಯಾಗಿ ಓದಿದರೂ ನೋಡಿಕೊಳ್ಳುವವರು ಯಾವುದೋ ಯೋಚನೆಯಲ್ಲಿ ಮುಳುಗಿ ಸರಿಯಾಗಿ ನೋಡಿಕೊಳ್ಳದಿರುವಾಗ ಮಾಡಿದ ತಪ್ಪುಗಳು ಹಾಗೆಯೇ ಉಳಿದುಹೋಗುತ್ತವೆ. ಇಂತಹ ಎಲ್ಲ ತಪ್ಪುಗಳನ್ನೂ ಕಣ್ತಪ್ಪೆಂದು ಕರೆಯಬಹುದು.

ಪ್ರತಿ ಮಾಡುವಲ್ಲಿ ಒಬ್ಬರು ಓದಿ ಮತ್ತೊಬ್ಬರು ಅದನ್ನು ಬರೆಯುವಾಗ ಓದುವವರು ಉಚ್ಚಾರಣೆ ಸ್ಪಷ್ಟವಾಗದೆ ಬರೆಯುವವರು ಬೇರೆಯೇ ಬರೆಯಬಹುಹು. ಅಂತೆಯೇ ಹೋಲಿಸುವಾಗಲೂ ಹೀಗೆಯೇ ಆಗಬಹುದು. ಇದರಿಂದ ಮೂಲದಲ್ಲಿದ್ದುದು ಬಿಟ್ಟು ಹೋಗಿ ಬೇರೆ ಅಕ್ಷರವೊ ಪದವೊ ಬರಬಹುದು. ಇದನ್ನು ಕಿವಿತಪ್ಪೆಂದು ಹೇಳಬಹುದು.

ಕಣ್ತಪ್ಪು ಕಿವಿತಪ್ಪಿನ ಜತೆಗೆ ಕೈತಪ್ಪು ಆಗುವುದು ಸಹಜವಾಗಿದೆ. ಕಣ್ಣು ಸರಿಯಾಗಿ ನೋಡಿದರೂ, ಇಲ್ಲವೆ ಮತ್ತೊಬ್ಬ ಓದುವುದನ್ನು ಕಿವಿ ಸರಿಯಾಗಿ ಕೇಳಿದರೂ ಕೈ ತನ್ನದೇ ಆದ ಬೇರೆ ಅಕ್ಷರಗಳನ್ನು ಬರೆಯುವುದೊ ಬಿಡುವುದೊ ಮಾಡುವುದುಂಟು. ಇದು ಮಾನವಸಹಜವಾದ ದೌರ್ಬಲ್ಯವೆಂದು ಪರಿಗಣಿಸಿ ಇದನ್ನು ಕೈತಪ್ಪೆಂದು ಹೇಳಬಹುದು.

ಹಸ್ತಪ್ರತಿಯಲ್ಲಿನ ಲಿಪಿಜ್ಞಾನ ಪದಜ್ಞಾನ ಲಿಪಿಕಾರನಿಗೆ ಇಲ್ಲದಿದ್ದರೂ ತಪ್ಪುಗಳು ಆಗುತ್ತವೆ. ಇವು ಲಿಪಿಸಾದೃಶ್ಯದಿಂದ, ಹ್ರಸ್ವದೀರ್ಘಗಳ ಗೊಂದಲದಿಂದ, ಅಲ್ಪಪ್ರಾಣ ಮಹಾಪ್ರಾಣಗಳ ಜ್ಞಾನದ ಅಭಾವದಿಂದ, ಬಿಡಬೇಕಾದ ಹಾಗೂ ಸೇರಿಸಬೇಕಾದ ಭಾಗಗಳನ್ನು ಕೆಲವು ಸೂಚನೆಗಳ ಮೂಲಕ ತಿಳಿಸಿರುವುದನ್ನು ಸರಿಯಾಗಿ ಗಮನಿಸದಿರುವುದರಿಂದ ಪ್ರತಿಕಾರರು ತಪ್ಪು ಮಾಡುವುದುಂಟು. ಇಂತಹ ಸ್ಖಾಲಿತ್ಯಗಳನ್ನು ಶ್ರೀ ಡಿ.ಎಲ್. ನರಸಿಂಹಾಚಾರ್ಯರು ವಿವರವಾಗಿ, ಸೋದಾಹರಣವಾಗಿ, ಸಮರ್ಪಕವಾಗಿ ನಿರೂಪಿಸಿದ್ದಾರೆ.[1] ನಾವು ಅಷ್ಟು ದೀರ್ಘವಾಗಿ ಪರಿಶೀಲಿಸದಿದ್ದರೂ ಉದಾಹರಣೆಗಾಗಿ ಕೆಲವನ್ನಾದರೂ ಇಲ್ಲಿ ನಿರೂಪಿಸುವುದು ಉಚಿತವಾಗಿದೆ. ಇದರಿಂದ ಅಕ್ಷರಸ್ಖಾಲಿತ್ಯಗಳ ಕಲ್ಪನೆ ಖಚಿತವಾಗಿ ತಿಳಿದಂತಾಗುತ್ತದೆ.

ಅಕ್ಷರಸಾದೃಶ್ಯದಿಂದ ಅ-ಲ ; ಒ-ಬ ; ಕ-ತ ; ಖ-ಬ ; ಗ-ನ ; ಘ-ಪು ; ಚ-ಬ, ಜ ; ಜ-ಚ,ಱ ; ಡ-ದ, ರ ; ತ-ಕ, ರ, ಸ, ಲ, ಶ ; ದ-ಡ, ಪ, ಲ, ಯ ; ನ-ವ, ಸ, ಣ, ಗ ; ಪ-ವ, ಸ, ಮ, ಗ, ಛ ; ಬ-ಒ, ಚ, ಜ ; ಭ-ಬ, ಚ, ಖ ; ಮ-ಯ ; ಯ-ಮ ; ರ-ಕ, ನ, ದ, ರಿ, ಡ, ತ, ಅ, ಗ ; ಲ-ರ, ಳ, ಅ, ಉ ; ವ-ಪ, ದ ; ಸ-ನ ಎಂದು

1. ಕ.ಗ್ರಂ. ಸಂ. ಪು. ೭೪-೧೩೩

ಂದಕ್ಷರಕ್ಕೆ ಬದಲಾಗಿ ಮತ್ತೊಂದಕ್ಷರವನ್ನಾಗಿ ಓದಿಕೊಂಡಿರುವುದು ಕಂಡುಬರುತ್ತದೆ. ಲ್ಲದೆ ಹ್ರಸ್ವ ದೀರ್ಘಗಳು, ಅತ್ವ ಎತ್ವಗಳು, ಎಕಾರಕ್ಕೆ ಯಕಾರ, ಅಲ್ಪಪ್ರಾಣ ುಹಾಪ್ರಾಣಗಳು, ಶಷಸಗಳು ಅದಲು ಬದಲಾಗುವುದು, ವೃ-ವ್ರ, ಋ-ರು, ಕೃ-ಕ್ರ ಂಬಂತೆ ಆಗುವುದೂ ಉಂಟು. ಇಂತಹ ಇನ್ನೂ ಹಲವಾರು ತಪ್ಪುಗಳು ಪ್ರತಿಕಾರರಿಂದ ಗಿರುತ್ತವೆ. ಇಂತಹುದಕ್ಕೆ ಒಂದೆರಡು ಉದಾಹರಣೆಗಳನ್ನು ಇಲ್ಲಿ ನೋಡಬಹುದು.

ಶಕ ೧೨೬೪ ರಲ್ಲಿ ಪ್ರತಿ ಮಾಡಲಾಗಿರುವ ರನ್ನನ ಸಾಹಸಭೀಮ ವಿಜಯದ ಓಲೆಪ್ರತಿ ೭೫೭ ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು) ಯಲ್ಲಿ ಬರುವ

ವೃ|| ಡೊಣೆಇಂದಂ ತೆಗೆವಾಗಳೊಂದು...... ವೈರಿಮಾ
ಗ್ಗ್ರಣಮಂ ದೆದಿಸುವಲ್ಲಿ (೩-೩)

ಎಂಬಲ್ಲಿ ಬರುವ 'ಡೊಣೆಯಿಂದಂ' ಎಂಬುದು 'ಡೊಣೆಇಂದಂ' ಎಂದಾಗಿರುವುದೂ, ಾರ್ಗ್ಗಣಮಂ' ಎಂಬಲ್ಲಿ ಒಂದು 'ಗ' ಒತ್ತು ಹೆಚ್ಚಿಗಿರುವುದೂ, 'ದೆದಿಸುವಲ್ಲಿ' ಂಬುದನ್ನು 'ಭೇದಿಸುವಲ್ಲಿ' ಎಂದು ಓದಿಕೊಂಡು ದೀರ್ಘ ಹಾಕಬೇಕಾಗಿರುವುದನ್ನೂ ಮನಿಸಬಹುದಾಗಿದೆ. ಮುಂದೆ ಇದೇ ಪ್ರತಿಯಲ್ಲಿ 'ಛಲಮನೆ ಕೈಕೊಂಡು' ಎಂಬುದನ್ನು ಲಮನೆ ಕೈಕೊಂಡು' (೬-೬ ವ) ಎಂದಿರುವುದನ್ನೂ ನೋಡಬಹುದು.

ಹಾಗೆಯೆ ಶಕ ೧೩೦೧ರಲ್ಲಿ ಪ್ರತಿಯಾಗಿರುವ ಆದಿಪುರಾಣದ

ಕ|| ಶ್ರೀ ರಮಣನಿಳಯ ಜಿನಾ
ಗಾರಂಗಳು ತಂನ ಜಸದವೊಲು ವಸುದೆಗಳಂ
ಕಾರಂಗಳಾಗೆ ಪೂರ್ಣಮ
ನೊರಥನಾದಂ ಸರಸ್ವತಿ ಮಣಹಾರಂ
ವ|| ಅನ್ತು ತಂನ ಮಾತ್ಸಿದ ಚೈತ್ಯಲಯಂಗಳೊಳಾದಿಬಟ್ಟಾರಕರಾದಿಯಾಗಿ

ಎಂಬಲ್ಲಿ ದೀರ್ಘಗಳಿಲ್ಲದಿರುವುದನ್ನೂ, ನ ಒತ್ತಿಗೆ ಬದಲಾಗಿ ಅನುಸ್ವಾರ, ುಹಾಪ್ರಾಣಕ್ಕೆ ಅಲ್ಪಪ್ರಾಣ, ಅನುಸ್ವಾರ ಮತ್ತು ತ ಕ್ಕೆ ಬದಲಾಗಿ ನ ಮತ್ತು ತ ಒತ್ತು, ದೀರ್ಘವಿರಬೇಕಾದಲ್ಲಿ ತ ಕ್ಕೆ ಯ ಒತ್ತನ್ನೇ ದೀರ್ಘ ಮಾಡಿರುವುದನ್ನೂ, ಭ ಕ್ಷರಕ್ಕೆ ಹೊಕ್ಕುಳ ಸೀಳದಿರುವುದನ್ನೂ ಗಮನಿಸಬಹುದು.

ಈ ಮೇಲಣ ಎರಡು ಕಾಲನಮೂದಿತ ಓಲೆಪ್ರತಿಗಳಿಗಿಂತ ಈಚೆಗೆ ಶಕ ೩೫೪ರಲ್ಲಿ ಪ್ರತಿಯಾಗಿರುವ ಗುಣವರ್ಮನ 'ಪುಷ್ಪದಂತ ಪುರಾಣ'ದ ಓಲೆಪ್ರತಿ (ಕ

೫೧ ಕ ಅ ಸಂ. ಮೈಸೂರು)ಯಲ್ಲಿ ಬರುವ

ವೃ|| ಕುಲಬೂಬೃದ್ಭವೆ ಲಕ್ಷ್ಮಣಾಬಿನುತೆ ರಾಮೊತ್ಕಂಠೆ ವೈದೆಹಿ (೧-೮)
ವೃ|| ಕರಿವೃಂದಂ..... ನಕ್ಕಂರಥಚಕ್ರಮಾಗಿರೆ ವಾರಿದಿ (೭-೬೯)
ವೃ|| ಮೊದಲೊಳ್ತಿರ್ತ್ಥಕರಂಗೆ ತಿತ್ಥ ಜಲದಿಂ......

..... ದಷ್ಟವಿದಾಚ್ಚ್ರನಾವಿದಿಗಳಿಂದ ಬೃರ್ಬ್ಬನಂ
ಕಳದೌತೊದ್ದಾ ಮ..... ನಿತ್ಯೆಜ್ವರಲುತೆಜಂ ದೆವದೆವಂ
ಗಬಿಷವವಿಡಿಯಂ ಮಾಡಿ ಸಂತುಷ್ಟನಾದಂ (೭-೩)

ಮೊದಲಾದ ಬರವಣಿಗೆಯನ್ನು ನೋಡಿದರೆ ಮೇಲಣ ಮೂರೂ ಪ್ರತಿಗಳ ಬರವಣಿಗೆ ಒಂದೇ ರೀತಿಯಾಗಿರುವುದು ಕಂಡುಬರುತ್ತದೆ. ಇಂತಹ ಹಸ್ತಪ್ರತಿಯಲ್ಲಿರುವುದನ್ನು ತಿದ್ದಿ ಬರೆಯಬೇಕಾದರೆ ಪ್ರತಿಕಾರ ಸಾಕಷ್ಟು ಕಾವ್ಯಪರಿಜ್ಞಾನ ಹೊಂದಿದವನಾಗಬೇಕಾಗುತ್ತದೆ. ಸಾಮಾನ್ಯವಾಗಿ ಮೂಲದ ನಕಲನ್ನೆತ್ತುವ ಪ್ರತಿಕಾರನಿಗೆ ಇದರ ಅವಶ್ಯಕತೆ ಇಲ್ಲವಾದರೂ ಸಂಪಾದಕನಾಗಿ ಪ್ರತಿ ಮಾಡುವವನಿಗೆ ಇದು ಅತ್ಯಗತ್ಯವಾಗಿ ಬೇಕಾಗುತ್ತದೆ.

ಇದಿಷ್ಟೂ ಕಾಲನಮೂದಿತ ಓಲೆಗ್ರಂಥಗಳಾದರೆ ಶಕ ೧೪೪೮ರಲ್ಲಿ ಪ್ರತಿಯಾಗಿರುವ ನಾಗವರ್ಮನ "ವರ್ಧಮಾನ ಪುರಾಣ"ದ ಕಾಗದದ ಹಸ್ತಪ್ರತಿಯನ್ನು ಪ್ರತಿ ಮಾಡಿರುವವನು ಪ್ರಸಿದ್ಧ ಪ್ರತಿಕಾರ ಪಾಯಣ್ಣ. ೧೬ನೆಯ ಶತಮಾನದ ಈ ಪ್ರತಿಯಲ್ಲಿ

ವೃ|| ವೊಂದಿರೆ ತಂನ ಚಿತ್ತದೊಳನುಗ್ರಹಬುದ್ದಿ ಮೃಗಾದಿನಾಥನಂ
ತಾಂ ದಯೆಯಿಂ ಪ್ರಚಾರಿಸುವ ಚೆಷ್ಟಿಯನಾಗಿರಿ ತಂದರಂತರ
ಕ್ಕಂದಿಳಿದತ್ತಿರ್ಯಿಂದಮಿತಕಿತ್ತಿರ್ಪುರಸ್ಸರನಾಗಿ ಮೆಲ್ಲನೆ
ಯ್ತಂದನುದಾರತಿಳನಬಿವಂದ್ಯ ಗುಣಂ ಗುಣರತ್ನಸಾಗರಂ ೫-64

ಇಲ್ಲಿಯೂ ಕೂಡ ಒಕಾರಕ್ಕೆ ಬದಲಾಗಿ ವಕಾರ, ನಒತ್ತಿಗೆ ಅನುಸ್ವಾರ, ಮಹಾಪ್ರಾಣಾಕ್ಷರಕ್ಕೆ ಹೊಕ್ಕುಳ ಸೀಳದಿರುವುದು, ದೀರ್ಘಗಳನ್ನು ಹಾಕದಿರುವುದು, ಬೇಡವಾದ ಒತ್ತುಗಳನ್ನು ಹಾಕಿರುವುದು- ಮೊದಲಾದುವನ್ನು ಗಮನಿಸಬಹುದು.

ಮೇಲಣ ಎಲ್ಲ ಬರವಣಿಗೆಗಳಿಗೆ ಆಯಾ ಕಾಲದ ರೂಢಿ ಕಾರಣವಾಗಿರಬಹುದು. ಆದರೆ ಕಾಲದ ರೂಢಿಯ ಜತೆಗೆ ಪ್ರತಿಕಾರರ ವ್ಯಕ್ತಿತ್ವದ ಮೇಲೂ ಪ್ರತಿಯ ಶುದ್ಧತೆ ನಿಲ್ಲುತ್ತದೆ ಎಂಬುದಕ್ಕೆ ಇತ್ತೀಚೆಗೆ ಎಂದರೆ ೨೦ನೆಯ ಶತಮಾನದಲ್ಲಿ ಪ್ರತಿಯಾಗಿರುವ

ರನ್ನನ ಗದಾಯುದ್ಧದ (ಕೆ ಎ ೫೦ ಕಅಸಂ.ಮೈ) ಕಾಗದದ ಹಸ್ತಪ್ರತಿಯನ್ನು ನೋಡಬಹುದು.

ಉರಗೇಂದ್ರಲೋಕಮಂ ಪು
ಕ್ಕು ರಗರೊಳಿಜಿದುರಗಪತಿಯ ನಿಜಸುತೆಯೊಡನಾ
ದರದಿಂ ಜಯಲಕ್ಷ್ಮಿ ಯೊಳೊಡೆ
ವೆರೆದಂ ಕಿರ್ತಿಯೊಳೆಮೆಂದೆ ಪಸೆಯೊಳೆ ಪಾರ್ತ್ಥಂ ೨-೪೨
ಎನಗೀರ್ವರುಮೆರಡುಂ... ಪೊಜಿನೆಗೆ ಸಂಜಯ ೩-೬೭
ಮೃಡನೊಳ್ಪಾಸುಪತಾಸ್ತ್ರಂ ೨-೩೮
ಕಾನಿನಂ.... ಗಳಿತಾಶ್ರುಜಲದಿಂ ೩-೬೬

ಮೇಲಣ ಬರವಣಿಗೆಯಲ್ಲಿ ಎಷ್ಟರಮಟ್ಟಿನ ಅಶುದ್ಧತೆ ತಾಂಡವವಾಡುತ್ತಿದೆ ಎಂಬುದನ್ನು ಗಮನಿಸಿ. ಇದಕ್ಕೆ ಮೂಲಪ್ರತಿ ಕಾರಣವೆ ಇಲ್ಲವೆ? ಎಂಬುದು ತಿಳಿದುಬರುವುದಿಲ್ಲ. ಹಾಗೇನಾದರೂ ಮೂಲದಲ್ಲಿದ್ದಂತೆಯೇ ಪ್ರತಿ ಮಾಡಲಾಗಿದೆಯೆಂದರೆ ಪ್ರತಿಕಾರನ ದೋಷವಿರುವುದಿಲ್ಲ. ಆದರೆ ಪ್ರತಿಗಳನ್ನು ಮಾಡುವಾಗ ಎಷ್ಟು ಅಶುದ್ಧಪಾಠಗಳು ರೂಪುಗೊಂಡಿರುತ್ತವೆ ಎಂಬುದಕ್ಕೆ ಉದಾಹರಣೆಯಾಗಿ ಗಮನಿಸಬಹುದು.

ಮತ್ತೊಂದು ೨೦ನೆಯ ಶತಮಾನದ ಕಾಗದದ ಪ್ರತಿಯಾದ (ಕೆಎ೪೯೫ ಕ ಅ ಸಂ ಮೈ) ಕಳಲೆ ನಂಜರಾಜನ 'ಲಿಂಗಪುರಾಣ'ದಲ್ಲಿ ಬರುವ ಬೇರೆ ರೀತಿಯ ತಪ್ಪುಗಳನ್ನು ನೋಡಬಹುದು. ಇದಕ್ಕೆ ಕಾರಣ ಊಹಿಸುವುದು ಕಷ್ಟವಾದರೂ ಗಮನಿಸಬೇಕಾದ ಅಂಶವಾಗಿದೆ.

ಅನಂತ್ತರದಲ್ಲಿ| ಸೂತಪೌರಾಣೀಕನಿಂತೆಂದನು| ಕೇಳಿರೈಯ್ಯಾ|
ರುಷಿಗಳಿರ| ಆ ಬಳಿಕ ಗರುಡಧ್ವಜನು ಬ್ರಂಹ್ಮ ದೇವನ ಮುಂದಿಟ್ಟುಕೊಂಡು|
ಭೂತ ಭವಿಷ್ಯ| ದ್ವರ್ತಮಾನ| ವಾದ ವೇದಮಂತ್ರಗಳಿಂದ| ಪರಮೇಶ್ವರನನ್ನು
ಸ್ತು ತಿಸ್ತನು| (೨೦ನೆಯ ಅಧ್ಯಾಯ ಪುಟ ೧೦೧)

ಎಂಬಲ್ಲಿ ಕಂಡುಬರುವ ಅಕ್ಷರಸ್ಖಾಲಿತ್ಯಗಳ ಜತೆಗೆ ಎಲ್ಲೆಲ್ಲಿಯೊ ಗೀಟುಗಳನ್ನು ಹಾಕಿರುವುದು ಒಂದು ಚಟದಂತೆ ತುಂಬಾ ಆಭಾಸವಾಗಿದೆ.

ಇಂತಹ ಸಾಮಾನ್ಯ ಸ್ಖಾಲಿತ್ಯಗಳಲ್ಲದೆ ಪ್ರತಿಕಾರರು ಮಾಡುವ ವಿಶೇಷ ಸ್ಖಾಲಿತ್ಯಗಳೂ ಹಸ್ತಪ್ರತಿಗಳಲ್ಲಿ ಕಂಡುಬರುತ್ತವೆ. ಅವೆಂದರೆ ಕೆಲವರು ತಮಗೆ ಸರಿದೋರದ ಭಾಗವನ್ನು ಬಿಡುವುದು ಅಥವಾ ಬದಲಾಯಿಸುವುದುಂಟು. ಯಾವುದೋ ದೈವದ ಹೆಸರನ್ನು ಬದ್ಧಲಿಸಿ ತಮಗೆ ಬೇಕಾದ ದೈವದ ಹೆಸರನ್ನು ಹಾಕುವುದೂ, ತಮಗೆ ಪ್ರಿಯವಾದ ಕೆಲವು ಪದ್ಯಗಳನ್ನೊ ಭಾಗಗಳನ್ನೊ ಬೇರೆಡೆಯಿಂದ ತಂದು ಸೇರಿಸಿರುವುದೂ ಕಂಡುಬರುತ್ತದೆ. ಕೆಲವು ಪ್ರೌಢ ಪ್ರತಿಕಾರರು ತಮ್ಮ ಸ್ವಂತ ರಚನೆಯನ್ನು ಸೇರಿಸಿ ಕವಿಗೆ ಬರುವ ಪುಣ್ಯ ತಮಗೂ ಬರಲೆಂದು ಭಾವಿಸಿರುವುದೂ ಇದೆ. ಇಂತಹ ಕಾರ್ಯಗಳು ಚಂಪೂಕಾವ್ಯಗಳಿಗಿಂತ ಹೆಚ್ಚಾಗಿ ಷಟ್ಪದಿ ಸಾಂಗತ್ಯಕೃತಿಗಳಲ್ಲಿ ಕಂಡುಬರುತ್ತವೆ. ಆದುದರಿಂದಲೇ ಕುಮಾರವ್ಯಾಸ ಭಾರತದ ಒಂದು ಪ್ರತಿಗೂ ಮತ್ತೊಂದು ಪ್ರತಿಗೂ ಅಗಾಧ ಪ್ರಮಾಣದ ಪದ್ಯಸಂಖ್ಯೆಯ ಏರುಪೇರಾಗಿರುವುದನ್ನು ಕಾಣಬಹುದು.

ಗ್ರಂಥಸಂಪಾದನೆಗೆ ಹಸ್ತಪ್ರತಿ ತಯಾರಿಕೆ

ಹಸ್ತಪ್ರತಿಗಳ ಸಂಗ್ರಹ, ಸೂಚೀಕರಣ, ಸಂರಕ್ಷಣೆ, ಅಕ್ಷರಸ್ಖಾಲಿತ್ಯಗಳ ಬಗ್ಗೆ ಕೆಲವು ವಿಷಯಗಳನ್ನು ತಿಳಿದುಕೊಂಡಿದ್ದೇವೆ. ಹೀಗೆ ಸಂಗ್ರಹಿಸಿ ಸಂರಕ್ಷಿತವಾದ ಹಸ್ತಪ್ರತಿಗಳಲ್ಲಡಗಿರುವ ಗ್ರಂಥಗಳನ್ನು ಶಾಸ್ತ್ರೀಯವಾಗಿ ಸಂಪಾದಿಸಿ ಒದಗಿಸಬೇಕಾದುದು ಅತಿ ಮುಖ್ಯ ಕೆಲಸವಾಗಿದೆ. ಇದು ಉಳಿದೆಲ್ಲ ಕೆಲಸಗಳಿಗಿಂತ ಕಠಿಣತರವಾದ ವಿದ್ವಜ್ಜನರು ಮಾತ್ರ ಕೈಗೊಳ್ಳಬಹುದಾದ ಬಹು ಅಮೂಲ್ಯವಾದ ಕರ್ತವ್ಯವಾಗಿದೆ.

ಹೀಗೆ ಯಾವುದೇ ಒಂದು ಗ್ರಂಥವನ್ನು ಸಂಪಾದಿಸಬೇಕೆಂದಾಗ ಆ ಕೃತಿಯ ದೊರೆಯುವ ಎಲ್ಲ ಹಸ್ತಪ್ರತಿಗಳನ್ನೂ ಪರಿಶೀಲಿಸುವುದು ಸಂಪಾದಕನ ಕರ್ತವ್ಯವಾಗಿದೆ. ಇವುಗಳಲ್ಲಿ ಶುದ್ಧಪ್ರತಿ ಯಾವುದು? ಕಾಲನಮೂದಿತ ಪ್ರತಿಯಿದೆಯೆ? ಕಾಲನಮೂದಿತವಾಗಿದ್ದರೆ ಕವಿಯ ಕಾಲಕ್ಕೆ ಎಷ್ಟು ಹತ್ತಿರದ ಪ್ರತಿ? ಕವಿಯು ವಾಸವಾಗಿದ್ದ ಸ್ಥಳದಲ್ಲಿ ಅಥವಾ ಅದರ ಸಮೀಪದಲ್ಲಿ ದೊರಕಿದ ಪ್ರತಿಯೆ? ಪ್ರಾಚೀನ ಕಾವ್ಯಗಳಾದಲ್ಲಿ ಟಿಕಾರಗಳನ್ನು ಉಪಯೋಗಿಸಲಾಗಿದೆಯೆ? ಉಪಯೋಗಿಸಿದ್ದರೆ ಅದರ ಶುದ್ಧತೆಯೆಷ್ಟು? ಮೊದಲಾದ ಎಲ್ಲ ವಿವರಗಳನ್ನೂ ಪರಿಶೀಲಿಸಿ ಶುದ್ಧಪ್ರತಿಯನ್ನು ಆಯ್ಕೆ ಮಾಡಬೇಕಾಗುತ್ತದೆ. ಲಿಪಿಯ ವೈಶಿಷ್ಟ್ಯದ ಮೇಲೆಯೂ ಪ್ರತಿಯ ಪ್ರಾಚೀನತೆಯನ್ನು ಗೊತ್ತುಮಾಡಬಹುದಾದರೂ ಶುದ್ಧತೆಗೆ ಬರಿಯ ಪ್ರಾಚೀನತೆ ಪ್ರಯೋಜನಕ್ಕೆ ಬರುವುದಿಲ್ಲ. ಈ ಎಲ್ಲ ಅಂಶಗಳನ್ನೂ ಗಣನೆಗೆ ತೆಗೆದುಕೊಂಡು ಅಲ್ಲಿನ ಪಾಠಗಳ ಸ್ಖಾಲಿತ್ಯಗಳ ಮೇಲೆ ಶುದ್ಧ ಪ್ರತಿಯ ನಿರ್ಣಯವಾಗಬೇಕಾಗುತ್ತದೆ.

ಈ ಶುದ್ಧಪ್ರತಿಯನ್ನು ಮೂಲ ಪ್ರತಿಯನ್ನಾಗಿ ಬಳಸಿಕೊಂಡು ಉಳಿದವುಗಳನ್ನು ಯಾವ ಯಾವ ಗುಂಪಿಗೆ ಸೇರಿದುವೆಂಬುದನ್ನು ಪರಿಗಣಿಸಬಹುದು. ಇದಕ್ಕೆ ಪ್ರಾದೇಶಿಕತೆಯನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಈ ಎಲ್ಲಕ್ಕೂ ಮಿಗಿಲಾಗಿ ಕವಿಯ ಸ್ವಹಸ್ತಾಕ್ಷರ ಪ್ರತಿ ದೊರೆತಲ್ಲಿ ಸಂಪಾದಕನ ಕೆಲಸ ತುಂಬಾ ಹಗುರವಾಗುತ್ತದೆ. ಆದರೆ ೧೯ನೆಯ ಶತಮಾನದ ಅಂತ್ಯದಲ್ಲಿದ್ದ ಬಸವಪ್ಪಶಾಸ್ತ್ರೀ, ನಂದಳಿಕೆ ಲಕ್ಷ್ಮೀನಾರಣಪ್ಪ ಮೊದಲಾದವರ ಸ್ವಹಸ್ತಾಕ್ಷರ ಪ್ರತಿಗಳು ದೊರೆಯುತ್ತವೆಯೇ ಹೊರತು ಇದಕ್ಕೆ

ಹಿಂದಿನವಾವುವೂ ಇದುವರೆಗೆ ದೊರೆತಿರುವುದಿಲ್ಲ.

'ಶಿಲೆ ಮತ್ತು ತಾಮ್ರದ ಬರಹಗಳು ಕವಿಯ ಸ್ವಹಸ್ತಾಕ್ಷರಗಳಲ್ಲದಿದ್ದರೂ ತಾನು ಬರೆದುಕೊಟ್ಟುದನ್ನು ಮತ್ತೊಬ್ಬ ಕೆತ್ತಿದ ಮೇಲೆ ತಾನು ಮತ್ತೆ ನೋಡಿ ಅಲ್ಲಿರಬಹುದಾದ ತಪ್ಪುಗಳನ್ನು ತಿದ್ದಿರಬಹುದಾದುದರಿಂದ ಇವುಗಳನ್ನು ಸ್ವಹಸ್ತಾಕ್ಷರ ಪ್ರತಿಗಳೆಂದು ಪರಿಗಣಿಸಬಹುದು. ಆದರೆ ಇಂತಹವು ಬಹಳ ಅಲ್ಪವಾಗಿದ್ದು ಶಾಸನಕವಿ ತಾನು ರಚಿಸಿಕೊಟ್ಟ ಮೇಲೆ ಲಿಪಿಕಾರನು ಮಾಡುವುದನ್ನು ನೋಡಲು ಸಮಯಾವಕಾಶವಿಲ್ಲದಿರಬಹುದು'[1] ಎಂದು ಡಿ.ಎಲ್. ನರಸಿಂಹಾಚಾರ್ ಹೇಳುತ್ತಾರೆ. ಶಾಸನಸಾಹಿತ್ಯ ಓಲೆ ಮತ್ತು ಕಾಗದದ ಪ್ರತಿಗಳಂತೆ ಹೆಚ್ಚು ಹೆಚ್ಚು ಪ್ರತಿ ಮರುಪ್ರತಿಗಳಾಗದಿರುವುದರಿಂದ ಮೂಲಕ್ಕೆ ಬಹುಮಟ್ಟಿಗೆ ಹತ್ತಿರವಾಗಿರುತ್ತವೆಂದು ತಿಳಿಯಬಹುದಾಗಿದೆ.

ಯಾವುದೇ ಗ್ರಂಥವನ್ನು ಸಂಪಾದನೆಗೆ ತೆಗೆದುಕೊಂಡಾಗ ಆರಿಸಿದ ಶುದ್ಧ ಪ್ರತಿಯಿಂದ ನಕಲು ಮಾಡಬೇಕಾಗುತ್ತದೆ. ಸಂಪಾದಕ ತಾನೇ ಪ್ರತಿ ಮಾಡಿದರೆ ಉತ್ತಮ. ಇಲ್ಲದಿದ್ದರೆ ಹಸ್ತಪ್ರತಿಗಳ ಹಾಗೂ ಸಾಹಿತ್ಯದ ಬಗ್ಗೆ ಸಾಕಷ್ಟು ಪರಿಣತಿ ಹೊಂದಿದವನಾಗಿರಬೇಕು. ಅಲ್ಲದೆ ಹೋಲಿಸುವಾಗ ಸಂಪಾದಕ ತಾನೇ ಭಾಗವಹಿಸಬೇಕು; ಅನುಮಾನ ಬಂದೆಡೆಗಳಲ್ಲಿ ಮೂಲವನ್ನು ತಾನೇ ನೋಡಬೇಕು. ಪ್ರಾಚೀನ ಕಾವ್ಯಗಳಾದಲ್ಲಿ ಪ್ರತಿಕಾರನಿಗೆ ಛಂದಸ್ಸಿನ ಬಗೆಗೆ ಪರಿಣತಿಯಿರಬೇಕು. ಯಾವುದೇ ಪ್ರಾಚೀನ ಹಸ್ತಪ್ರತಿಯಲ್ಲಿ ಪದಗಳ ವಿಂಗಡಣೆಯಾಗಲಿ, ಛಂದಸ್ಸಿಗನುಗುಣವಾದ ಪಾದವಿಂಗಡಣೆಯಾಗಲಿ ಇರುವುದಿಲ್ಲ. ಪ್ರತಿ ಮಾಡುವಾಗ ಈ ಎಲ್ಲವನ್ನೂ ಅನುಸರಿಸಿ ಬರೆಯಬೇಕಾಗುತ್ತದೆ. ಶಾಸ್ತ್ರಗ್ರಂಥವಾಗಿದ್ದಲ್ಲಿ ಆ ಶಾಸ್ತ್ರದ ಬಗೆಗೆ ತಕ್ಕಮಟ್ಟಿನ ತಿಳುವಳಿಕೆಯಾದರೂ ಇರಬೇಕಾದುದು ಅವಶ್ಯಕ. ಸಾಕಷ್ಟು ತಿಳುವಳಿಕೆ ಇಲ್ಲದಿದ್ದಲ್ಲಿ ಆ ವಿಷಯದ ತಜ್ಞರ ಸಹಾಯವನ್ನಾದರೂ ಪಡೆಯಲೇಬೇಕಾಗುತ್ತದೆ. ಸಣ್ಣಪುಟ್ಟ ಅಕ್ಷರಸ್ಖಾಲಿತ್ಯಗಳನ್ನು, ಎಂದರೆ ಅತ್ವ ಎತ್ವ ಹೆಚ್ಚುವರಿ ಒತ್ತುಗಳು ಹ್ರಸ್ವ ದೀರ್ಘ ಅಲ್ಪಪ್ರಾಣ ಮಹಾಪ್ರಾಣ ಶ ಷ ಸ ಮೊದಲಾದುವುಗಳನ್ನು ಸರಿಪಡಿಸಿಕೊಂಡು ಬರೆಯಬೇಕಾಗುತ್ತದೆ. ಹೀಗೆ ಸರಿಪಡಿಸಿ ಬರೆಯುವಾಗ ಸ್ಪಷ್ಟವಾಗಿ ತಪ್ಪು ಎಂದು ಕಂಡುಬಂದವುಗಳನ್ನು ಮಾತ್ರ ತಿದ್ದಬೇಕು. ಆದರೆ ಯಾವುದೇ ಪಾಠವನ್ನು ತಿದ್ದಬಾರದು.

ಪ್ರತಿ ಮಾಡಲು ಉಪಯೋಗಿಸುವ ಕಾಗದ, ಬರವಣಿಗೆಯ ರೀತಿ ಹೇಗಿರಬೇಕು ಎಂದು ಯೋಚಿಸಬೇಕಾದುದು ಅವಶ್ಯಕ. ಇಲ್ಲದಿದ್ದಲ್ಲಿ ಸಾಮಾನ್ಯವಾಗಿ ಪ್ರತಿ ಮಾಡಿದಂತೆ

ಮಾಡಿದರೆ ಪಾಠಾಂತರಗಳನ್ನು ಗುರುತಿಸಲು ಕಷ್ಟವಾಗುತ್ತದೆ. ಈ ಪಾಠಾಂತರಗಳು ಸಂಪಾದನೆಗಾಗಿ ಸಿದ್ಧಪಡಿಸಿದ ಪ್ರತಿಪಂಕ್ತಿಗೆ ಸಮಾನಾಂತರವಾಗಿರಬೇಕು. ಆದುದರಿಂದ ಕೃತಿಯ ಎಷ್ಟು ಪ್ರತಿಗಳು ದೊರೆತಿವೆ? ಪಾಠಾಂತರಗಳ ಅವಾಂತರವೆಷ್ಟೆಂಬುದನ್ನು ಮೊದಲೆ ಕೆಲವು ಪುಟಗಳನ್ನು ಪ್ರತಿ ಮಾಡಿ ಪಾಠಾಂತರ ಹಾಕಿ ನಿರ್ಣಯಿಸಿಕೊಳ್ಳಬೇಕಾಗುತ್ತದೆ. ಪ್ರತಿ ಮಾಡುವಾಗ ಹಾಳೆಯ ಮೇಲೆ ಕೆಳಗೆ ಅಕ್ಕಪಕ್ಕಗಳಲ್ಲಿ ಸಾಕಷ್ಟು ಜಾಗವನ್ನು ಬಿಟ್ಟಿರಬೇಕು. ಸಾಲು ಸಾಲಿಗೆ ಮಧ್ಯೆ ಪಾಠಾಂತರ ಸಂಖ್ಯೆಯನ್ನು ಹಾಕಲು ಹಾಗೂ ಪಾಠ ನಿರ್ಣಯದ ನಂತರ ಬೇರೆ ಪಾಠ ಬರೆಯಲು ಅನುಕೂಲವಾಗುವುದಕ್ಕೆ ಸ್ಥಳಾವಕಾಶವಿರಬೇಕು. ಪ್ರತಿ ಪಂಕ್ತಿಯ ಪಾಠಕ್ಕೂ ಆಯಾಯಾ ಪಂಕ್ತಿಗೇ ಬೇರೆ ಬೇರೆ ಸಂಖ್ಯೆಗಳನ್ನು ನಮೂದಿಸಬೇಕು. ಆ ಸಂಖ್ಯೆ ಪಾಠಾಂತರ ಪದಗಳ ಎರಡು ಕಡೆಯೂ ಇರಬೇಕು. ಈ ಪಾಠಾಂತರ ಸಂಖ್ಯೆ ಮತ್ತು ಪಾಠಾಂತರಗಳನ್ನು ಸೀಸದ ಕಡ್ಡಿಯಿಂದ ಗುರುತಿಸಬೇಕು. ಉಪಯೋಗಿಸಿದ ಎಲ್ಲ ಪ್ರತಿಗಳಿಗೂ ಬೇರೆ ಬೇರೆ ಸಂಕೇತಗಳನ್ನು ಕೊಡಬೇಕು. ಜೊತೆಗೆ ಆಯಾಯಾ ಪ್ರತಿಯ ಪತ್ರಸಂಖ್ಯೆಯನ್ನು ಅಲ್ಲಲ್ಲಿಯೇ ಗುರುತಿಸಿಕೊಳ್ಳುವುದು ಉತ್ತಮ. ಇದರಿಂದ ಯಾವುದೇ ಪ್ರತಿಯ ಪಾಠವನ್ನು ಮತ್ತೊಮ್ಮೆ ಪರಿಶೀಲಿಸಬೇಕಾದಾಗ ಅನುಕೂಲವಾಗುತ್ತದೆ.

ಶುದ್ಧಪ್ರತಿಗೆ ಹತ್ತಿರವಾದ ಪ್ರತಿಗಳಿಂದ ಮೊದಲು ಪಾಠಾಂತರಗಳನ್ನು ಗುರುತಿಸಬೇಕು ಹೀಗೆಯೇ ಕ್ರಮವಾಗಿ ಬೇರೆ ಪ್ರತಿಗಳನ್ನೂ ಉಪಯೋಗಿಸಬೇಕು. ಇಂತಹ ಪಾಠಾಂತರಗಳನ್ನು ಗುರುತಿಸುವಿಕೆ ಒಂದಕ್ಕಿಂತ ಹೆಚ್ಚು ಪ್ರತಿಗಳು ದೊರೆತಾಗ ಮಾತ್ರವಾಗಿರುತ್ತದೆ. ಒಂದು ಕೃತಿಯ ಏಕೈಕ ಹಸ್ತಪ್ರತಿ ದೊರೆತಾಗ ಪಾಠಾಂತರಗಳನ್ನು ಗುರುತಿಸಬೇಕಾಗಿಲ್ಲದಿರುವುದರಿಂದ ಅಕ್ಕಪಕ್ಕಗಳಲ್ಲಿ ಸ್ಥಳಾವಕಾಶವಿರಬೇಕಾಗಿಲ್ಲ. ಆದರೆ ಪಾಠನಿರ್ಣಯ ಮಾಡಿ ಮೂಲವನ್ನು ಬದಲಾಯಿಸಿ ಬರೆಯಲು ಸಾಲು ಸಾಲಿಗೆ ಮಧ್ಯೆ ಅಂತರವಿರಬೇಕು; ಊಹಿಸಿದ ಪಾಠವನ್ನು ಮೇಲೆ ಬರೆದು ಮೂಲದ ಪಾಠವನ್ನು ಕೆಳಗಡೆ ಕೊಡಲು ಹಾಗೂ ಮೂಲಪಾಠದ ಬಗೆಗೆ ಸೂಚನೆಯೇನಾದರೂ ಇದ್ದರೆ ಬರೆಯಲು ಆಯಾ ಪುಟದ ಕೆಳಗಡೆ ಸಾಕಷ್ಟು ಸ್ಥಳಾವಕಾಶವಿರಬೇಕು. ಯಾವುದೇ ಸಂದರ್ಭದಲ್ಲಿಯೂ ಒಂದೇ ಕೃತಿಯ ಎರಡು ರೂಪಾಂತರಗಳನ್ನು ಒಟ್ಟಿಗೆ ಸರಿಹೊಂದಿಸುವುದು ಸಾಧ್ಯವಾಗುವುದಿಲ್ಲ. ಇದಕ್ಕೆ ಉದಾಹರಣೆಯಾಗಿ ಕೇಶಿರಾಜನ 'ಶಬ್ದಮಣಿದರ್ಪಣ'ವನ್ನು ನೋಡಬಹುದು. ಡಿ.ಎಲ್. ನರಸಿಂಹಾಚಾರ್ ಅವರಿಂದ ಸಂಪಾದಿತವಾಗಿರುವ ಪ್ರತಿ ಒಂದು ರೀತಿಯಾದರೆ, ಡಿ.ಕೆ. ಭೀಮಸೇನರಾವ್ ಅವರಿಂದ ಸಂಪಾದಿತವಾದ ಪ್ರತಿ

ಮತ್ತೊಂದು ರೀತಿಯಾಗಿದೆ. ಎಷ್ಟೋ ಸೂತ್ರಗಳು ವೃತ್ತಿಗಳು ಎರಡರಲ್ಲಿಯೂ ಸಮಾನಾಂತರವಾಗಿದ್ದರೂ ಬಹಳಷ್ಟು ಭಾಗ ಎರಡಕ್ಕೂ ಹೊಂದಿಕೆಯಾಗುವುದಿಲ್ಲ.

ಇದಿಷ್ಟು ಒಂದು ಅಥವಾ ಹೆಚ್ಚಿನ ಹಸ್ತಪ್ರತಿಗಳು ದೊರೆತಾಗ ಅನುಸರಿಸಬಹುದಾದ ಮಾರ್ಗಸೂಚಿಯಾಗಿದೆ. ೧೫-೨೦ ಹಸ್ತಪ್ರತಿಗಳು ಅಥವಾ ಅದಕ್ಕೂ ಹೆಚ್ಚು ಪ್ರತಿಗಳನ್ನು ಬಳಸಿಕೊಳ್ಳಬೇಕಾದಾಗ ಮತ್ತು ಹೆಚ್ಚು ಪಾಠಾಂತರಗಳನ್ನು ಗುರುತಿಸಬೇಕಾದಾಗ ಅದಕ್ಕೆ ತಕ್ಕ ಸ್ಥಳಾವಕಾಶ ಮಾಡಿಕೊಳ್ಳಬೇಕಾಗುತ್ತದೆ. ಪೂನಾದ ಭಂಡಾರ್ಕರ್ ಸಂಶೋಧನ ಸಂಸ್ಥೆಯಿಂದ ಪ್ರಕಟವಾದ ಸಂಸ್ಕೃತ ಭಾರತದ ಸಂಪಾದನೆಗೆ ಹಲವಾರು ಹಸ್ತಪ್ರತಿಗಳನ್ನು ಉಪಯೋಗಿಸಬೇಕಾದುದರಿಂದ ಪ್ರತಿ ಪಾದಕ್ಕೂ ಒಂದೊಂದು ಪುಟವನ್ನು ಮೀಸಲಿರಿಸಿ, ಒಂದೊಂದು ಅಕ್ಷರಕ್ಕೂ ಒಂದೊಂದು ಚಚ್ಚೌಕವನ್ನು ಮಾಡಿ ಉಪಯೋಗಿಸಿದ್ದಾರೆ. ಹೀಗೆ ಹಸ್ತಪ್ರತಿಗಳ ಸಂಖ್ಯೆಯನ್ನೂ ವೈವಿಧ್ಯವನ್ನೂ ಗಮನಿಸಿ ಸಂಪಾದನಾ ಹಸ್ತಪ್ರತಿಯನ್ನು ರೂಪಿಸಿಕೊಳ್ಳಬೇಕಾಗುತ್ತದೆ. 'ಗದುಗಿನ ಭಾರತ', 'ಶಬ್ದಮಣಿ ದರ್ಪಣ' ಮೊದಲಾದ ಕೃತಿಗಳಿಗೆ ಇಂತಹ ವ್ಯವಸ್ಥೆ ಅಗತ್ಯವಾಗುತ್ತದೆ.

ವೈವಿಧ್ಯ ಎಂದಾಗ ಮತ್ತೊಂದು ರೀತಿಯ ಪಾಠಾಂತರಗಳನ್ನು ಕೊಟ್ಟಿರುವುದನ್ನು ಡಾ.ಎಲ್. ಬಸವರಾಜು ಅವರ ಸಂಪಾದಿಸಿರುವ 'ಆದಿಪುರಾಣ' ಗ್ರಂಥದಲ್ಲಿ ಗಮನಿಸಬಹುದು. ಸಾಮಾನ್ಯವಾಗಿ ಎಲ್ಲ ಸಂಪಾದಕರೂ ಬರುವ ಪಾಠಗಳಿಗೆ ಪಾಠಾಂತರ ಸಂಖ್ಯೆಗಳನ್ನು ಒಂದರಿಂದ ಆಯಾ ಪುಟದ ಕೊನೆಯವರೆಗೆ ಮುಂದುವರಿಸುತ್ತಾರೆ. ಆದರೆ ಬಸವರಾಜು ಅವರು ಒಂದೊಂದು ಪದ್ಯ ಅಥವಾ ವಚನ ಭಾಗಗಳಿಗೆ ಬೇರೆ ಬೇರೆ ಸಂಖ್ಯೆಗಳನ್ನು ಕೊಟ್ಟಿರುತ್ತಾರೆ. ಎಂದರೆ ಪದ್ಯಸಂಖ್ಯೆಯನ್ನು ಕೊಟ್ಟು ಅದಕ್ಕೆ ಸೀಮಿತವಾದ ಪಾಠಗಳಿಗೆ ಒಂದರಿಂದ ಮುಂದುವರಿಸಿ ಅದರಲ್ಲಿಯೇ ಕೊನೆಗೊಳಿಸುತ್ತಾರೆ.

ಹಸ್ತಪ್ರತಿಗಳ ವಿಂಗಡಣೆ ಮತ್ತು ಉಪಯೋಗಗಳು ಹೇಗೆಂಬುದನ್ನು ತಿಳಿದುಕೊಳ್ಳಲು ಯಾವುದದಾರೂ ಒಂದು ಸಂಪಾದಿತವಾಗಿರುವ ಕೃತಿಯನ್ನು ಪರಿಶೀಲಿಸಬಹುದು. ಬಂಧುವರ್ಮನ 'ಜೀವ ಸಂಭೋಧನಂ' ಗ್ರಂಥದ ಸಂಪಾದನೆಗೆ[1] ಒಂಬತ್ತು ಪ್ರತಿಗಳನ್ನು ಬಳಸಿಕೊಳ್ಳಲಾಗಿದೆ. ಇವುಗಳಿಗೆ 'ಕ-ಟ' ವರೆಗೆ ಸಂಕೇತಾಕ್ಷರಗಳನ್ನು ನೀಡಲಾಗಿದೆ. ಇವುಗಳಲ್ಲಿ ಆರು ಅಧಿಕಾರ ಮಾತ್ರ ಮುದ್ರಿತವಾದ 'ಟ' ಪ್ರತಿಯನ್ನು ಹೊರತುಪಡಿಸಿದರೆ

---

1. ಸಂ : ಪಂಡಿತ ಎಚ್. ಶೇಷ ಅಯ್ಯಂಗಾರ್, ಗೌರ್ನಮೆಂಟ್ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ, ಮದರಾಸು, ೧೯೫೫.

ಉಳಿದವು ಎಂಟು ಹಸ್ತಪ್ರತಿಗಳು. ಇವುಗಳಲ್ಲಿ ಆರು ಓಲೆ ಮತ್ತು ಎರಡು ಕಾಗದದ ಪ್ರತಿಯಾಗಿದ್ದು, ನಾಲ್ಕು ಕಾಲನಮೂದಿತ ಪ್ರತಿಗಳಾಗಿವೆ.

'ಕ' : ಸಂಪಾದಕರೇ ಹೇಳುವಂತೆ ಕಾಗದದ ಪ್ರತಿಯಾದ ಇದರಲ್ಲಿ "ಹಲವು ಪಾಠಭೇದಗಳಿವೆ. ಕೆಲವು ವಾಕ್ಯಗಳೂ ಪದ್ಯಗಳೂ ಬಿಟ್ಟುಹೋಗಿವೆ. ಕೆಲವು ಮಾರ್ಪಟ್ಟಿವೆ. ಕೆಲವ ಹೆಚ್ಚಾಗಿವೆ. ಹೀಗೆ ವಾಕ್ಯಗಳಲ್ಲಲ್ಲದೆ ಶಬ್ದಗಳಲ್ಲಿಯೂ ಹೆಚ್ಚು ಮಾರ್ಪಾಡಿದೆ. ಇದರಲ್ಲಿ ಪ್ರತಿಯೊಂದು ಅಧಿಕಾರಗಳ ಆದಿಯಲ್ಲಿ ಜಿನಸ್ತುತಿರೂಪವಾದ ಸಂಸ್ಕೃತ ಪದ್ಯವೂ, ಬಳಿಕ ಅಧಿಕಾರಾರ್ಥವನ್ನು ಸಂಗ್ರಹವಾಗಿ ಸೂಚಿಸುವ ಎರಡು ಪದ್ಯಗಳೂ, ಇವುಗಳಲ್ಲಿ ಮೊದಲನೆಯದಕ್ಕೆ ಪ್ರತಿಪದಾರ್ಥವೂ ಎರಡನೆಯಕ್ಕೆ ತಾತ್ಪರ್ಯಾನುವಾದವೂ ಇದೆ, ಇದನ್ನು ಸೂತ್ರವೆಂದೂ ವ್ಯವಹರಿಸಿದೆ. ಹೀಗೆಯೇ ಅಧಿಕಾರಗಳ ಆದಿಯಲ್ಲೂ ಕೊನೆಯಲ್ಲೂ ಜಿನಸ್ತುತಿರೂಪವಾದ ಸಂಸ್ಕೃತ ಪದ್ಯಗಳಿವೆ. ಹೀಗೆ ಹನ್ನೆರಡು ಅಧಿಕಾರಗಳಿಂದ ಇಪ್ಪತ್ತುನಾಲ್ಕು ಮಂದಿ ಜಿನರ ಸ್ತೋತ್ರವನ್ನು ಸಂಪೂರ್ಣವಾಗಿ ಹೇಳಿದಂತಾಗುವುದು. ಇದರಲ್ಲಿ ಅಕ್ಷರಸ್ಖಾಲಿತ್ಯಗಳೂ ಗ್ರಂಥಪಾತವೂ ಇದೆ. ಇದರಲ್ಲಿ ಸಗರಚಕ್ರವರ್ತಿ ಕಥೆಯಲ್ಲಿ ಪಾಠಾಂತರವುಂಟು, ನಾಗಕುಮಾರ ಕಥೆಯು ಗ್ರಂಥದ ಅಂಗವಾಗಿಯೇ ಇದರಲ್ಲಿ ಸೇರಿಸಲ್ಪಟ್ಟಿದೆ". ಈ ಹೇಳಿಕೆಯನ್ನು ಗಮನಿಸಿದರೆ ಈ ಹಸ್ತಪ್ರತಿಯಲ್ಲಿ ಶುದ್ಧತೆಯಿಲ್ಲ. ಯಾರೋ ಪ್ರೌಢಪ್ರತಿಕಾರ ತನಗೆ ತಿಳಿದಂತಹ ಸಂಸ್ಕೃತ ಶ್ಲೋಕಗಳನ್ನೂ ಟೀಕೆ ಟಿಪ್ಪಣಿಗಳನ್ನೂ ತುಂಬಿದ್ದಾನೆ ಎಂದು ಭಾವಿಸಬಹುದು.

'ಖ' : ಇದು ಶ್ರವಣ ಬೆಳಗೊಳ ಜೈನಮಠದ ಪ್ರತಿ; ಶಕ ೧೩೭೦ರಲ್ಲಿ ನಕಲಾಗಿದೆ. ಸಂಪಾದಕರು ತಿಳಿಸುವಂತೆ "ಇದರಲ್ಲಿ ಅಶುದ್ಧ ಪಾಠಗಳು ಕಡಮೆಯಾಗಿ ಪ್ರಾಚೀನತಮ ಪಾಠಗಳಿದ್ದುದರಿಂದ ಅದರ ಪಾಠವನ್ನೇ ಈ ಮುದ್ರಣದಲ್ಲಿ ಹೆಚ್ಚಾಗಿ ಉಪಯೋಗಿಸಿಕೊಂಡಿದೆ." ಅಟಿಗಳೂ ಇರುವುದು ಎಂದು ಹೇಳಿರುವುದರಿಂದ ಇದು ಪ್ರಾಚೀನಪ್ರತಿಯಲ್ಲದೆ ಶುದ್ಧ ಪ್ರತಿಯಾಗಿಯೂ ಕಂಡುಬರುತ್ತದೆ. ಆದುದರಿಂದ ಇದನ್ನು ಮೂಲಪ್ರತಿಯಾಗಿ ಬಳಸಿಕೊಂಡಿದ್ದಾರೆ ಎಂದು ಹೇಳಬಹುದು.

'ಗ' : "ಇದು ಮಂಗಳೂರು ಪ್ರಾಂತದ ಮೂಡಬಿದರೆಯಲ್ಲಿರುವ ಶ್ರೀ ಲೋಕನಾಥಶಾಸ್ತ್ರಿಗಳು ಕಳುಹಿಸಿಕೊಟ್ಟ ಪ್ರತಿ ತಾಳಪತ್ರಾತ್ಮಕವಾದುದು, ೧೧೪ ಓಲೆಗಳಿವೆ.

೧೧೪ನೆಯ ಮುಂದುಗಡೆ ಗ್ರಂಥವು ಮುಗಿದಿದೆ" ಎಂದು ಮಾತ್ರ ಹೇಳಿದ ಸಂಪಾದಕರು ಉಳಿದ ಈ ಪ್ರತಿಯ ಗುಣಮಟ್ಟದ ಬಗೆಗೆ ಏನನ್ನೂ ಹೇಳಿರುವುದಿಲ್ಲ. ಕೊಟ್ಟಿರುವ ಪಾಠಗಳನ್ನು ಗಮನಿಸಿದರೆ ಇದರಲ್ಲಿ ಸಂಸ್ಕೃತ ಶ್ಲೋಕ ಟೀಕುಗಳಾಗಲಿ, 'ಖ' ಪ್ರತಿಯಿಂದ ಬೇರೆಯಾದ ಹೆಚ್ಚು ಪಾಠಗಳಾಗಲಿ ಕಂಡುಬರುವುದಿಲ್ಲ.

'ಘ' : "ಕ ಪ್ರತಿಯಂತೆಯೆ ಇದರಲ್ಲಿ ಅಧಿಕಾರಗಳ ಆದಿಯಲ್ಲಿ ಸಂಸ್ಕೃತ ಪದ್ಯಗಳಿವೆ; ಆದರೆ ಟೀಕೆಯಿಲ್ಲ. ಅಕ್ಷರಸ್ಖಾಲಿತ್ಯಗಳು ವಿಶೇಷವಾಗಿದ್ದರೂ ಅಲ್ಲಲ್ಲಿ ವಿರಳವಾಗಿ ಶುದ್ಧ ಪಾಠಗಳೂ ಇವೆ, ಅಲ್ಲದೆ ನಿದರ್ಶನ ಕಥೆಗಳಿಲ್ಲ. ಇದನ್ನು ಲೇಖಕರೇ ಬಿಟ್ಟಿರಬಹುದು...... ಆದ್ಯಂತ್ಯಗಳಲ್ಲಿ ಶ್ರೀನಿವಾಸಪರ ಬ್ರಹ್ಮಣೇನಮಃ...... ಶ್ರೀ ಜನಾರ್ದನಾಯ ನಮಃ ಸಂಪೂರ್ಣ ಎಂದಿರುವುದರಿಂದ ಇದನ್ನು ಬರೆದವನು ವೈಷ್ಣವನಾಗಿರಬೇಕು (ಜೈನನಲ್ಲ)" ಎಂದು ಹೇಳಿದ್ದಾರೆ. ಇದು ಕಾಗದದ ಪ್ರತಿಯಾಗಿದೆ.

'ಚ' : "ಇದರಲ್ಲಿಯೂ ಕ ಪ್ರತಿಯಂತೆಯೇ ಅಧಿಕಾರಗಳ ಆದ್ಯಂತದಲ್ಲಿ ಸಂಸ್ಕೃತ ಪದ್ಯ ಟೀಕೆಗಳಿವೆ. ಓಲೆಗಳೆಲ್ಲವೂ ತುಂಬಾ ಶಿಥಿಲವಾಗಿ ನುಸಿಹುಳುಗಳ ಬಾಯಿಗೆ ತುತ್ತಾಗಿ ಓಲೆಗಳ ಭಾಗಗಳೂ ತ್ರುಟಿತವಾಗಿವೆ. ಇದರ ಪಾಠಗಳನ್ನು ಅಲ್ಲಲ್ಲಿ ಮುದ್ರಣದಲ್ಲಿ ತೆಗೆದುಕೊಂಡಿದೆ" ಎಂದು ಸಂಪಾದಕರು ವಿವರಿಸಿದ್ದಾರೆ.

'ಛ' : ಇದು ಶಕ ೧೭೭೪ರ ಓಲೆಪ್ರತಿ. "ಇದು ಉತ್ತಮ ಸ್ಥಿತಿಯಲ್ಲಿದೆ. ಅಲ್ಲಲ್ಲಿ ಮೇಲಾದ ಪಾಠಗಳುಂಟು" ಎಂದು ಸಂಪಾದಕರು ಹೇಳಿದ್ದಾರೆ. ಉಳಿದ ಯಾವ ವಿಷಯವೂ ತಿಳಿದುಬರುವುದಿಲ್ಲ. ಗ್ರಂಥದಲ್ಲಿ ಕೊಟ್ಟಿರುವ ಪಾಠಾಂತರಗಳನ್ನು ಗಮನಿಸಿದರೆ ಈ ಪ್ರತಿಯು ಸಮಗ್ರವಾಗಿದ್ದು 'ಖ' ಪ್ರತಿಗೆ ಹತ್ತಿರವಾಗಿರುವಂತೆ ಕಂಡುಬರುತ್ತದೆ. ಸಂಸ್ಕೃತ ಶ್ಲೋಕ ಟೀಕೆಗಳಾವುವೂ ಕಂಡುಬರುವುದಿಲ್ಲ. ಆದರೆ ಒಂದೆರಡೆಡೆಗಳಲ್ಲಿ ಮಾತ್ರ ಶ್ಲೋಕಗಳು ಕಂಡುಬರುತ್ತವೆ.

'ಜ' : ಆರಾ ನಗರದ ಜೈನ ಭಾಂಡಾಗಾರದ ಓಲೆಪ್ರತಿ. "ಇದರಲ್ಲಿ ೧೫೩ ಓಲೆಗಳಿವೆ. ೧೬೩ ಓಲೆಯ ಮುಂಭಾಗದಲ್ಲಿ ಗ್ರಂಥ ಮುಗಿದಿದೆ. ಶಕ ೧೬೬೯ನೆಯ ಕ್ಷಯ ಸಂವತ್ಸರ ಅಯನ ಭಾದ್ರಪದಮಾಸದ ಪಕ್ಷ ಪೂರ್ವಪಕ್ಷ ತಿಥಿ ತೃತೀಯಾ ವಾಸರೆ ಶುಕ್ಲದಲ್ಲಿ

ಮೀ ದ್ವಾದಶಾನುಪ್ರೇಕ್ಷಾಗ್ರಂಥಂ ಪೂರಿತ ಲೇಖನದಿಂದೀ ಪ್ರತಿಯಾಯ್ತು" ಎಂದು ಸಂಪಾದಕರು ಮೂಲದಲ್ಲಿರುವುದನ್ನು ತಿಳಿಸಿದ್ದಾರೆ. ಉಳಿದ ಯಾವ ವಿಷಯವನ್ನೂ ಳಿಸಿರುವುದಿಲ್ಲ. ಕೊಟ್ಟಿರುವ ಪಾಠಗಳನ್ನು ಗಮನಿಸಿದರೆ ಕೆಲವು ಅಧಿಕಾರಗಳ ಆದಿ ಅಂತ್ಯಗಳಲ್ಲಿ ಮಾತ್ರ ಸಂಸ್ಕೃತ ಶ್ಲೋಕ ಮತ್ತು ಟೀಕುಗಳು ಕಂಡುಬರುತ್ತವೆ.

'ಝ' : ಇದು ಕೊನೆಯ ಆರು ಅಧಿಕಾರಗಳನ್ನು ಮಾತ್ರ ಹೊಂದಿರುವ ಓಲೆಪ್ರತಿ ಎಲ್ಲಾ ಪ್ರತಿಗಳಿಗಿಂತಲೂ ಇದು ತುಂಬಾ ಪ್ರಾಚೀನತಮವಾದುದು - ಪ್ರಾಚೀನತಮವಾದ ಖ' ಪ್ರತಿಗಿಂತಲೂ ೨೪ ವರುಷ ಹಿಂದಿನದು...... ಇದರ ಓಲೆಗಳು ತುಂಬಾ ಅಗಲವಾಗಿ ುದ್ಧವಾಗಿವೆ. ಅಕ್ಷರಗಳೂ ತಮ್ಮ ಪ್ರಾಚೀನತಮತ್ವವನ್ನು ಚೆನ್ನಾಗಿ ಸೂಚಿಸುತ್ತವೆ.... ಕ ವರುಷ ೧೩೪೬ (ಕ್ರಿ.ಶ. ೧೪೨೪)ನೆಯ ಕ್ರೋಧನ ಸಂವತ್ಸರದ ಆಸ್ವೈ(ಶ್ವಯ)ಜ ುಹಳ ಏಕಾದಶಿಯು ಬುಧವಾರದಂದು........ ಬೊಮ್ಮಣ್ಣಂಗಳ .... ಮಗ ೇದಿಯಣ್ಣನು ದೇವರಾಯಪಟ್ಟಣದ ಚುತರ್ವಿಂಶತಿತೀರ್ಥಂಕರಸ್ವಾಮಿಗಳವರ ೈತ್ಯಾಲಯದಲ್ಲಿ ಪ್ರತಿಸಮಾನವಾಗಿ ಬರೆದುದು" ಎಂಬುದಾಗಿ ಸಂಪಾದಕರು ್ರತಿಯಲ್ಲಿದ್ದುದನ್ನು ತಿಳಿಸಿದ್ದಾರೆ.

ಹೀಗೆ ಉಪಯೋಗಿಸಿದ ಎಂಟು ಹಸ್ತಪ್ರತಿಗಳಲ್ಲಿ 'ಕ ಖ ಝ' ಪ್ರತಿಗಳಿಗೆ ನೀಡಿದ ವರಣೆಯನ್ನು ಉಳಿದವುಗಳಿಗೆ ನೀಡಿರುವುದಿಲ್ಲ. 'ಗ ಚ ಜ' ಪ್ರತಿಗಳ ವಿಷಯದಲ್ಲಂತೂ ೀರಾ ಅಸಮರ್ಪಕ ವಿವರಣೆಯಿದೆ. ಇಷ್ಟು ಪ್ರತಿಗಳಲ್ಲಿ 'ಱ ಟ' ಪ್ರಯೋಗವಿದೆ ಂದಿರುವುದು ಒಂದೇ ಒಂದು ಹಸ್ತಪ್ರತಿಗೆ. ಪ್ರತಿಯ ಪ್ರಾಚೀನತೆಗೆ ಇದೂ ಒಂದು ಳತೆಗೋಲಾಗಿರುವುದರಿಂದ ಇದರ ವಿಷಯದಲ್ಲಿ ಸ್ಪಷ್ಟವಾಗಿ ತಿಳಿಸುವುದು ಅಗತ್ಯವಾಗಿದೆ. ೀ ಪ್ರತಿಗಳಲ್ಲಿ 'ಖ' ಪ್ರತಿಯು ಕಾಲನಮೂದಿತವಾಗಿದ್ದು ಸುಮಾರು ೧೨೦೦ರಲ್ಲಿದ್ದ ವಿ ಬಂಧುವರ್ಮನಿಗೆ ಸಮೀಪವರ್ತಿಯೂ ಸಮಗ್ರವೂ ಶುದ್ಧವೂ ಆಗಿರುವುದರಿಂದ ದನ್ನೇ ಮೂಲಪ್ರತಿಯಾಗಿ ಬಳಸಿಕೊಳ್ಳಲಾಗಿದೆ. ಮತ್ತೊಂದು ಇಂತಹದೇ ುದ್ಧಪ್ರತಿಯಾದ 'ಝ' ಪ್ರತಿ 'ಖ' ಪ್ರತಿಗಿಂತ ೨೪ ವರ್ಷದಷ್ಟು ಪ್ರಾಚೀನವಾಗಿದ್ದರೂ ರು ಅಧಿಕಾರಗಳನ್ನು ಮಾತ್ರ ಹೊಂದಿದ್ದು ಅಸಮಗ್ರವಾಗಿರುವುದರಿಂದ ಎರಡನೆಯ ್ರತಿಯಾಗಿ ದೊರೆಯುವ ಭಾಗಕ್ಕೆ ಪಾಠಗಳನ್ನು ಉಪಯೋಗಿಸಿಕೊಳ್ಳಬಹುದಾಗಿದೆ. ೀ ಎರಡೂ ಪ್ರತಿಗಳಲ್ಲಿ ಸಂಸ್ಕೃತ ಶ್ಲೋಕಗಳಾಗಲಿ ಟೀಕೆಗಳಾಗಲಿ ಇರುವುದಿಲ್ಲ. ಆದರೆ ಝ' ಪ್ರತಿಯ ಆದಿಯ ಆರು ಅಧಿಕಾರಗಳಿಲ್ಲದಿದ್ದರೂ ಗ್ರಂಥದ ಆದಿಯಲ್ಲಿ ಕೆಲವು

ಸಂಸ್ಕೃತ ಶ್ಲೋಕಗಳು ಕಂಡುಬರುತ್ತವೆ. ಆದರೂ ಈ ಎರಡು ಪ್ರತಿಗಳೂ ಒಂದೇ ಪೀಳಿಗೆಯಿಂದ ಬಂದುವೆಂದು ಹೇಳಬಹುದು. 'ಕ ಚ' ಪ್ರತಿಗಳಲ್ಲಿ ಗ್ರಂಥದ ಎಲ್ಲ ಅಧಿಕಾರಗಳಲ್ಲಿಯೂ ಸಂಸ್ಕೃತ ಶ್ಲೋಕಗಳೂ ಟೀಕುಗಳೂ ಕಂಡುಬರುವುದಲ್ಲದೆ ಪರಿಶಿಷ್ಟವಾಗಿ ಕೊಟ್ಟಿರುವ ನಾಗಕುಮಾರನ ಕಥೆಯೂ ಇದೆ. ಹೀಗೆ ಈ ಎರಡು ಪ್ರತಿಗಳೂ ಒಂದು ಗುಂಪಾಗಿ ನಿಲ್ಲುತ್ತವೆ. 'ಗ ಛ' ಪ್ರತಿಗಳಲ್ಲಿ ಒಂದೆರಡೆಡೆ ಕೆಲವು ಶ್ಲೋಕಗಳಿದ್ದರೂ ಪಾಠಾಂತರಗಳನ್ನು ಗಮನಿಸಿದರೆ 'ಖ ಝ' ಪ್ರತಿಗಳಿಗೆ ಹತ್ತಿರದವಾಗಿ ನಿಲ್ಲುತ್ತವೆ. ಉಳಿದ 'ಘ' ಹಸ್ತಪ್ರತಿಯಲ್ಲಿ ಮೊದಲ ಆರು ಅಧಿಕಾರಗಳಿಗೆ ಶ್ಲೋಕ ಟೀಕುಗಳಿದ್ದು ಏಳನೆಯ ಆಧಿಕಾರದಿಂದ ಮುಂದಕ್ಕೆ ಇವುಗಳನ್ನು ಬಿಡುವುದಲ್ಲದೆ ನಿದರ್ಶನ ಕಥೆಗಳನ್ನೂ ಬಿಟ್ಟಿದ್ದಾನೆ. ಹೀಗೆ ಇದೇ ಬೇರೆಯಾಗಿ ನಿಲ್ಲುತ್ತದೆ. 'ಜ' ಪ್ರತಿ 'ಕ ಚ'ಗಳನ್ನೇ ಅನುಸರಿಸಿದರೂ ನಾಗಕುಮಾರನ ಕಥೆ ಇದರಲ್ಲಿ ಇಲ್ಲ. ಹೀಗೆ 'ಖ ಝ ಗ ಛ' ಪ್ರತಿಗಳನ್ನು ಒಂದು ಗುಂಪಾಗಿಯೂ, 'ಕ ಚ ಜ'ಗಳನ್ನು ಮತ್ತೊಂದು ಗುಂಪಾಗಿಯೂ, 'ಘ ಪ್ರತಿಯನ್ನೇ ಬೇರೆಯಾಗಿಯೂ ಭಾವಿಸಬೇಕಾಗುತ್ತದೆ. ಉಳಿದ ಅಚ್ಚಾದ ಆರು ಅಧಿಕಾರಗಳನ್ನುಳ್ಳ 'ಟ' ಪ್ರತಿಯು 'ಖ' ಗುಂಪಿನ ಪ್ರತಿಗಳನ್ನೇ ಹೋಲುವುದರಿಂದ ಇದು ಅಷ್ಟು ಪ್ರಾಮುಖ್ಯತೆ ಪಡೆಯುವುದಿಲ್ಲ.

ಇಲ್ಲಿ ಮತ್ತೊಂದು ಗಮನಿಸಬೇಕಾದ ಅಂಶವೆಂದರೆ ಸಂಕೇತಾಕ್ಷರಗಳನ್ನು ನೀಡುವಲ್ಲಿ ಅನುಸರಿಸಬೇಕಾದ ಮಾರ್ಗ. ಹಸ್ತಪ್ರತಿಗಳ ಆದ್ಯತೆಯ ಮೇಲೆ ಸಂಕೇತಾಕ್ಷರಗಳನ್ನು 'ಕ' ದಿಂದ ಪ್ರಾರಂಭಿಸಿದ್ದರೆ ಹೆಚ್ಚು ಸಮಂಜಸವಾಗಿರುತ್ತಿದ್ದಿತು. ಹಾಗೆ ಕೊಟ್ಟಿದ್ದರೆ 'ಕ ಖ ಗ ಘ ಚ ಛ ಜ ಝ ಟ' ಎಂದು ಕೊಡಬೇಕಾಗುತ್ತಿದ್ದಿತು. ಇದರಿಂದ ಓದುಗರಿಗೆ ಜ್ಞಾಪಕದಲ್ಲಿಟ್ಟುಕೊಳ್ಳಲು ಸುಲಭವಾಗಿರುತ್ತಿತ್ತೆಂದು ಭಾವಿಸಬಹುದು.

ಮತ್ತೊಂದು ರೀತಿಯ ಸಂಕೇತಾಕ್ಷರಗಳನ್ನು ಕೊಟ್ಟಿರುವುದದನ್ನು ಡಾ. ಎಲ್. ಬಸವರಾಜು ಅವರು ಸಂಪಾದಿಸಿರುವ ಪಂಪನ 'ಆದಿಪುರಾಣ'ದಲ್ಲಿ ಗಮನಿಸಬಹುದು. ಇವರು ಉಪಯೋಗಿಸಿಕೊಂಡಿರುವ ಪ್ರತಿಗಳು ಹತ್ತು. ಅವುಗಳಿಗೆ ಕೊಟ್ಟಿರುವ ಸಂಕೇತಗಳು 'ಹ ಚಿ ವ ದ್ವಿ ಮೈ ಐ ಓ NR ಕಪ್ಪು NR ಕೆಂಪು NR ಹಸಿರು; ಇವಲ್ಲದೆ ಎಸ್.ಜಿ. ನರಸಿಂಹಾಚಾರ್ ಮತ್ತು ಪ್ರೊ. ಕುಂದಣಗಾರರು ಸಂಪಾದಿಸಿದ ಗ್ರಂಥಗಳ ಪಾಠಗಳಿಗೆ 'ನ' ಮತ್ತು 'ಕು' ಎಂಬ ಸಂಕೇತ ನೀಡಿದ್ದಾರೆ. ಅಲ್ಲದೆ 'ಆದಿಪುರಾಣ'ದ ಪದ್ಯಗಳ ಉಲ್ಲೇಖಗಳನ್ನೊಳಗೊಂಡ ಇತರ ಆಕರ ಗ್ರಂಥಗಳಿಂದಲೂ ಪಾಠಗಳನ್ನು ಉಪಯೋಗಿಸಿಕೊಂಡಿರುವುದನ್ನು ಹೇಳಿದ್ದಾರೆ. ಆದರೆ ಈ ಪಾಠಗಳಿಗೆ ಯಾವ

ಕೇತಗಳನ್ನು ಕೊಡಲಾಗಿದೆ ಎಂಬುದನ್ನು ಅರಿಕೆಯಲ್ಲಿ ಹೇಳಿರುವುದಿಲ್ಲ. ಒಳಗೆ ಠಾಂತರಗಳನ್ನು ಸೂಚಿಸುವಾಗ 'ಅನ್ಯತ್ರ' ಎಂದು ಹೇಳಿರುವುದನ್ನು ಈ ಆಕರ ಗ್ರಂಥಗಳವು ದು ಭಾವಿಸಬೇಕಾಗುತ್ತದೆ.

ಮೇಲಣ 'ಹ' ಕಾರದಿಂದ 'NR ಹಸಿರು'ವರೆಗೆ ಕೊಟ್ಟಿರುವ ಸಂಕೇತಗಳನ್ನು ಾವುದೋ ಒಂದು ಆಧಾರದ ಮೇಲೆ ಕೊಡಲಾಗಿದೆ. ಆದರೆ ಈ ಹತ್ತೂ ಪ್ರತಿಗಳಿಗೆ ಗ ಚ ಜ ಟ ಡ ಣ ತ ದ ನ' ಎಂದು ಕೊಟ್ಟಿದ್ದರೆ ತುಂಬಾ ಸುಲಭವಾಗುತ್ತಿರಲಿಲ್ಲವೆ? ರರಿಂದ ಅಚ್ಚಿನಲ್ಲಾಗುವ ಶ್ರಮ, ಕಾಗದದ ಮಿತವ್ಯಯ ಸಾಧಿತವಾಗುತ್ತಿರಲಿಲ್ಲವೆ? ದು ಯೋಚಿಸಬೇಕಾಗುತ್ತದೆ.

ಹಸ್ತಪ್ರತಿಗಳ ಜತೆಗೆ ಅಚ್ಚಾದ ಗ್ರಂಥಗಳಿಂದಲೂ ಸಂಪಾದನಾಕಾರ್ಯಕ್ಕೆ ಾಯವಾಗುತ್ತದೆಂಬುದಕ್ಕೆ ೧೯೮೫ರಲ್ಲಿ ಪ್ರಕಟವಾಗಿರುವ ರನ್ನನ 'ಸಾಹಸ ಭೀಮ ಜಯ' ಗ್ರಂಥವನ್ನು [1] ನೋಡಬಹುದು. ಇದರಲ್ಲಿ ಉಪಯೋಗಿಸಿರುವ ಓಲೆ ಮತ್ತು ಗದ - ಎರಡು ಹಸ್ತಪ್ರತಿಗಳು ಭಿನ್ನ ಭಿನ್ನ ಮೂಲಗಳಿಂದ ಬಂದವುಗಳಾಗಿವೆ. ದೊರೆತ ಎರಡನ್ನೇ ಉಪಯೋಗಿಸಿ ಕೆಲವರು ಈ ಗ್ರಂಥಸಂಪಾದನೆ ಮಾಡಿದ್ದರು. ಈ ಎರಡರ ೆಗೆ ಮೂರು ಅಚ್ಚಿನ ಪ್ರತಿಗಳನ್ನು ಉಪಯೋಗಿಸಿ ಮತ್ತೆ ಈ ಗ್ರಂಥ ಸಂಪಾದನೆ ಡಲಾಗಿದೆ. ೭-೮೫ನೆಯ ಪದ್ಯದಲ್ಲಿ ಬರುವ 'ಸೈರಿಸಲ್ಕೆನಸುಂ ಬಂದಪು (ದಿಲ್ಲ) ರ್ ಪಗೆವರ್ ಸನ್ನದ್ಧನಾಗಿರ್ದಪೆಂ' ಎನ್ನುವಲ್ಲಿ ಎರಡು ಹಸ್ತಪ್ರತಿಗಳಲ್ಲಿ ಮತ್ತು ಡು ಅಚ್ಚಿನ ಪ್ರತಿಗಳಲ್ಲಿ ಸಮರ್ಪಕ ಪಾಠ ದೊರೆಯದಿದ್ದುದರಿಂದ ತೀ.ನಂ. ಕಂಠಯ್ಯ ಅವರ 'ಗದಾಯುದ್ಧ ಸಂಗ್ರಹ'ದಲ್ಲಿ ಊಹಿಸಲಾಗಿರುವ ಪಾಠವನ್ನು ಗೀಕರಿಸಲಾಗಿದೆ.

ಮತ್ತೆ ೬-೩ರಲ್ಲಿ ಬರುವ 'ಕನತ್ಕನಕ (ತಾ)ಮರಂ ಧವಳ ಚಾಮರಂ ಕಯ್ಗಳೊಳ್' ಬ ಪಾಠದಲ್ಲಿ 'ತಾ' ಅಕ್ಷರವನ್ನು ೧೯೮೫ರ ಪರಿಷ್ಕರಣದಲ್ಲಿ ಊಹಿಸಲಾಗಿದೆ. ಈ ್ಯ ಒಂದು ಹಸ್ತಪ್ರತಿಯಲ್ಲಿಲ್ಲವಾಗಿದ್ದು ಉಳಿದ ಮೂರರಲ್ಲಿ (ಅಚ್ಚಿನ ಪ್ರತಿಗಳೂ) 'ಚಾಮರಂ ಚಾಮರಂ' ಎಂದು ಎರಡು ಕಡೆಯೂ ಇದೆ. ತೀ.ನಂ. ಶ್ರೀ ಅವರು ದಲನೆಯನ್ನು 'ಚಾಮರ'ವೆಂದಿಟ್ಟುಕೊಂಡು, ಎರಡನೆಯದನ್ನು 'ಪದ್ಮಮಂ' ಎಂದು

---

1. ಸಂ. ಬಿ. ಎಸ್. ಸಣ್ಣಯ್ಯ ಮತ್ತು ರಾಮೇಗೌಡ, ಪ್ರಸಾರಾಂಗ, ಮೈಸೂರು ವಿದ್ಯಾನಿಲಯ ಮೈಸೂರು, ೧೯೮೫.

ಊಹಿಸಿ ತಿದ್ದಿದ್ದಾರೆ. 'ಕನತ್ಕನಕಚಾಮರ' ಎಂದರೆ ಹೊಳೆಯುವ ಚಿನ್ನದ ಚಾಮರ ಎಂದಾಗುತ್ತದೆ. ಅದಕ್ಕಿಂತ 'ಕನತ್ಕನಕ ತಾಮರಂ' ಎಂದರೆ ಹೊಳೆಯುವ ಚಿನ್ನದ ತಾವರೆ ಅಥವಾ ಹೊಂದಾವರೆ ಎಂಬುದು ಹೆಚ್ಚು ಸಮರ್ಪಕವಾಗಿ ಕಾಣುತ್ತದೆ. ಮುಂದೆ ಬರುವ ಮತ್ತೊಂದು 'ಚಾಮರ'ಕ್ಕೆ ವಿಶೇಷಣ 'ಧವಳ' ಎಂಬುದು ಸೂಕ್ತವಾಗಿದ್ದು 'ಧವಳಚಾಮರ' ಎಂದಾಗುತ್ತದೆ. ಹೀಗೆ ವಿವಿಧ ಸಂಪಾದಕರು ಒಂದೇ ಗ್ರಂಥವನ್ನು ಸಂಪಾದಿಸಿದ್ದರೂ, ಬೇರೊಬ್ಬರು ಅದನ್ನೇ ಮಾಡುವಾಗ ಮತ್ತೂ ಉತ್ತಮ ಪಾಠಗಳನ್ನು ಊಹಿಸಬಹುದಾಗಿದೆ. ಇದಕ್ಕೆ ಹಿಂದಣ ಅಚ್ಚಿನ ಪ್ರತಿಗಳು ಸಹಾಯಕವಾಗಿ ನಿಲ್ಲುತ್ತವೆ.

ಪಾಠಪರಿಷ್ಕರಣ

ದೊರೆಯುವ ಹಸ್ತಪ್ರತಿಗಳಿಂದ ಪಾಠಾಂತರಗಳನ್ನು ಗುರುತಿಸಿಕೊಂಡ ಮೇಲೆ ಪರಿಷ್ಕರಣೆ ಮಾಡಬೇಕಾಗುತ್ತದೆ. ಇದು ತೀರಾ ದುಸ್ತರವಾದ, ಎಲ್ಲಕ್ಕಿಂತ ಹೆಚ್ಚು ಜವಾಬ್ದಾರಿಯುತವಾದ ಕೆಲಸವಾಗಿದೆ. "ಜೀರ್ಣ ದೇವಾಲಯವನ್ನು ಉದ್ಧಾರ ಮಾಡುವ ಎಷ್ಟು ಪವಿತ್ರವೋ ಅಷ್ಟೇ ಪುಣ್ಯಕರವಾದದ್ದು ಸಂಸ್ಕೃತಿಯ ಆಕರವಾಗಿರುವ ಪ್ರಾಚೀನ ಗ್ರಂಥಗಳ ಪಾಠವನ್ನು ಪರಿಷ್ಕಾರಗೊಳಿಸುವುದು. ಕವಿ ಕಾವ್ಯವನ್ನು ಲೋಕಕ್ಕೆ ನೀಡಿಮಾಡುತ್ತಾನೆ; ಅದನ್ನು ಸಂರಕ್ಷಿಸಿಕೊಂಡು ಬರುವುದು ಸಂಪಾದಕ ವಿದ್ವಾಂಸರ ಹೊಣೆಗಾರಿಕೆ"[1] ಎಂದು ಡಿ.ಎಲ್. ನರಸಿಂಹಾಚಾರ್ಯರು ಹೇಳಿರುವುದು ಅತ್ಯಂತ ಸತ್ಯವಾಗಿದೆ. ಇದಕ್ಕೆ ವಿದ್ವತ್ತು ಪ್ರತಿಭೆಗಳು ಸಾಕಷ್ಟು ಕೂಡಿ ಬಂದಿರಬೇಕು. ಕವಿಯಿದ್ದ ಕಾಲದ ಜನಜೀವನ ಮತ್ತು ಇತರ ಶಾಸ್ತ್ರಪರಿಚಯ ಅಗತ್ಯವಾಗಿ ಇರಬೇಕು. ಎಲ್ಲಕ್ಕಿಂತ ಮೇಲಾಗಿ ಪ್ರಾಚೀನ ಕಾವ್ಯಗಳಲ್ಲಿ ಆಸಕ್ತಿ, ಮನಸ್ಸಿನ ಶಾಂತಿ ಸಮಾಧಾನಗಳು ಅತ್ಯಂತ ಆವಶ್ಯಕವಾಗಿರಬೇಕು. ಲಿಪಿಕಾರರು ತಮ್ಮ ಬಗೆಗೆ ಹೇಳಿಕೊಳ್ಳುವ 'ಭಗ್ನಪೃಷ್ಠ ಕಟಿ ಗ್ರೀವಾ ಬದ್ಧದೃಷ್ಟಿರಧೋಮುಖಂ' ಎಂಬ ಮಾತು ಈ ಪರಿಷ್ಕರಣಕಾರರಿಗೂ ಅನ್ವಯವಾಗುತ್ತದೆಂಬುದನ್ನು ನೆನಪಿಟ್ಟುಕೊಂಡು ಈ ಕೆಲಸಕ್ಕೆ ಕೈ ಹಾಕಬೇಕು.

ಪಾಠಪರಿಷ್ಕರಣದಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಮೊದಲು ಗೊತ್ತಪಡಿಸಿಕೊಳ್ಳುವುದು ಒಳ್ಳೆಯದು.

1. ಪ್ರತಿ ಮಾಡಿರುವಲ್ಲಿ ಪದವಿಂಗಡಣೆ ಸರಿಯಾಗಿದೆಯೆ ಎಂಬುದನ್ನು ಪರಿಶೀಲಿಸಬೇಕು. ಅದರಲ್ಲಿಯೂ ಶಾಸ್ತ್ರಗ್ರಂಥಗಳಲ್ಲಿ ಇದರ ಮಹತ್ವ ಮತ್ತೂ ಹೆಚ್ಚುತ್ತದೆ. ಸಂಪಾದಕರು ಸ್ವತಃ ಪ್ರತಿ ಮಾಡಿದ್ದರೆ ಉತ್ತಮ. ಇಲ್ಲದಿದ್ದಲ್ಲಿ ಅದನ್ನು ಪರಿಶೀಲಿಸುವುದು ಅಗತ್ಯವಾಗುತ್ತದೆ. ಹೀಗೆ ಪರಿಶೀಲಿಸಿ ಪದವಿಂಗಡಣೆಯಲ್ಲಿ ಆಗಿರುವ ತಪ್ಪುಗಳನ್ನು ಸರಿಪಡಿಸಿಬಹುದು. ಇದಕ್ಕೆ ಉದಾಹರಣೆಯಾಗಿ 'ತೊರವೆ ರಾಮಾಯಣ'ದ

1. ಕ. ಗ್ರಂ. ಸಂ. ಪು. ೨೧೭

ಯುದ್ಧಕಾಂಡದಲ್ಲಿ ಬರುವ

ನೆರೆಯದಂಬರ ವೀರತನದ
ಬ್ಬರಿನ ರಣ ಕಾರಣರಸದ ಕ
ಟ್ಟೊಜಿತೆ ಸೂಸಿತು...... (೧೭-೩೭)

ಎಂಬಲ್ಲಿ ಕಂಡುಬರುವಂತೆ 'ರಣ ಕಾರಣರಸದ' ಎಂದು ಪ್ರತಿಕಾರ ಓದಿಕೊಂಡು ಬರೆದರೆ, ಅದು ಮುಂದೆ 'ಕಾರಣರಸ' ಆಗುವ ಸಂಭವವಿಲ್ಲದಿಲ್ಲ, ಆದುದರಿಂದ ಇಂತಹವುಗಳ ಪಾಠದಲ್ಲಿ ಪದವಿಂಗಡಣೆ ಅರ್ಥಕ್ಕೆ ಅನುಗುಣವಾಗಿದೆಯೆ ಎಂಬುದನ್ನು ಗಮನಿಸಿ 'ರಣಕಾ ರಣರಸದ' ಎಂದು ತಿದ್ದಿಕೊಳ್ಳಬೇಕಾಗುತ್ತದೆ.

2. ಪದ್ಯಗ್ರಂಥಗಳಾದರೆ ಛಂದಸ್ಸಿಗನುಗುಣವಾಗಿದೆಯೆ? ಪ್ರಾಸ ಸರಿಯಾಗಿದೆಯೆ? ಎಂಬುದನ್ನು ನೋಡಬೇಕು. ಪ್ರಾಚೀನ ಹಸ್ತಪ್ರತಿಗಳಲ್ಲಿ ದೀರ್ಘಗಳಿಲ್ಲದೆ ಪದ್ಯದ ಪಾದವಿಂಗಡಣೆ ಇಲ್ಲದಿರುವುದರಿಂದ ಪ್ರಾಸ ಮತ್ತು ಛಂದಸ್ಸುಗಳಿಗನುಸಾರವಾಗಿ ತಿದ್ದಬೇಕಾದುದು ಅಗತ್ಯವಾಗುತ್ತದೆ.

ಬಂಧುವರ್ಮನ 'ಹರಿವಂಶಾಭ್ಯುದಯ'ದಲ್ಲಿ ಬರುವ

ವೃ|| ಹರಿವಂಶೋನ್ನತ ಪದ್ಮ ಷಂಡಹಿತಕೃದ್ವಿದ್ವಿಷ್ಟಸೇನೋ
ತ್ಕರೋದಯ ಭಸ್ಮೀಕೃತ ಶಕ್ತಿ ಯುಕ್ತ ಹತ ಭೋಗೋಪಭೋಗೋ
ತ್ತರ ಸೌಂದರ್ಯಮಹಾವಿಳಾಸಿ ಬಳಭೃತ್ಸಂಕ್ರಾಂತ ವಿಕ್ರಾಂತಕೇ
ಸರಿ ಕೃಷ್ಣಂ ಸುಖದಿಂದಮಿರ್ದನಭಿನೋತ್ಸೈಶ್ವರ್ಯದಿಂ ಧೈರ್ಯದಿಂ ೬-೬೦

ಎಂದು ಬರೆಯಲಾಗಿದೆ. ಮೂಲದಲ್ಲಿ ಪಾದವಿಂಗಡಣೆ ಇಲ್ಲದಿದ್ದರೂ ಪ್ರಾಸವನ್ನನುಸರಿಸಿ ಪಾದವಿಂಗಡಣೆ ಮಾಡಲಾಗಿದೆ; ದೀರ್ಘಗಳಿಲ್ಲದಿದ್ದರೂ ಪದದ ಧಾಟಿಯನ್ನು ನೋಡಿ ದೀರ್ಘಗಳನ್ನು ಹಾಕಲಾಗಿದೆ; ವೃತ್ತದ ನಾಲ್ಕು ಪಾದಗಳಿಗೆ ಸರಿಹೊಂದುವಂತೆ ಮಾಡಲಾಗಿದೆ. ಛಂದಸ್ಸಿನ ದೃಷ್ಟಿಯಿಂದ ಸರಿಪಡಿಸಬೇಕಾದಾಗ ಇದು ವೃತ್ತವಾದುದರಿಂದ ಯಾವ ವೃತ್ತಕ್ಕೆ ಸೇರಿದುದೆಂಬುದನ್ನು ಖಚಿತಪಡಿಸಿಕೊಳ್ಳಬೇಕು. ಮೊದಲಲ್ಲಿ 'ಹರಿವಂಶೋನ್ನತ' ಎಂದಿರುವುದರಿಂದ 'ಲಘುದ್ವಂದ್ವಂ ಗುರುದ್ವಂದ್ವಮಾಗಿರೆ ಮತ್ತೇಭ' ಎಂಬ ಸೂತ್ರ ಸಹಾಯಕ್ಕೆ ಬರಬೇಕಾಗುತ್ತದೆ. ಇದೇ ರೀತಿಯಲ್ಲಿ ಮೂರು

ತ್ತು ನಾಲ್ಕನೆಯ ಪಾದಗಳ ಆದಿಯಲ್ಲಿಯೂ ಎರಡು ಲಘು ಎರಡು ಗುರುಗಳಿವೆ. ಮತ್ತೇಭವಿಕ್ರೀಡಿತ ವೃತ್ತಕ್ಕೆ ಸರಿಹೊಂದುವಂತೆ ತಿದ್ದಬೇಕಾಗುತ್ತದೆ. ಏಕೈಕ ಯಾದುದರಿಂದ ಪಾಠಾಂತರಗಳ ಸಹಾಯ ಇಲ್ಲವಾಗಿದೆ. ಆದುದರಿಂದ ದಸ್ಸಿಗನುಗಣವಾಗಿ, ಇರುವ ಅರ್ಥ ಕೆಡದಂತೆ, ಇರುವುದನ್ನು ತಿದ್ದಿ, ಸಾಲದೆ ರುವನ್ನು ಸೇರಿಸಿ ತಿದ್ದಬೇಕಾಗುತ್ತದೆ. ಹೀಗೆ ಮಾಡಿದಾಗ ಈ ಕೆಳಗಣ ಪದ್ಯ ಪುಗೊಳ್ಳುತ್ತದೆ.

ವೃ || ಹರಿವಂಶೋನ್ನತಪದಪಂಡಹಿತಕೃದ್ವಿಪ್ರಸೇನೋ [ದ್ಧತೋ]
ತ್ಕ [ರ] ಭಸ್ಮೀಕೃತ ಶಕ್ತಿಯುಕ್ತಹತ ಭೋ [ಗಾಂತೋ] ಪಭೋಗೋ [ತ್ತರೋ]
ತ್ತರ ಸೌಂದರ್ಯಮಹಾವಿಳಾಸಿ ಬಳಭೃತ್ಸಂಕ್ರಾಂತ ವಿಕ್ರಾಂತಕೇ
ಸರಿ ಕೃಷ್ಣಂ ಸುಖದಿಂದಮಿರ್ದನಭಿ [ನೂ] ತ್ನೈಶ್ವರ್ಯದಿಂ ಧೈರ್ಯದಿಂ ೬-೬೦

ಇದರಲ್ಲಿ ಮೂಲದ ಪಾಠಗಳಾವುವನ್ನೂ ತೆಗೆಯದೆ, ಅಲ್ಪ ಬದಲಾವಣೆಗಳೊಡನೆ ಪ್ರ ಅಕ್ಷರಗಳನ್ನು ಸೇರಿಸಿ ತಿದ್ದಲಾಗಿದೆ. ತಿದ್ದಿದ ಮತ್ತು ಸೇರಿಸಿದವುಗಳನ್ನು ಸಂಪಾದನಾ ತ್ರಕ್ಕನುಸಾರವಾಗಿ ಕಂಸಗಳಲ್ಲಿ ಕೊಟ್ಟು ಮೂಲದಲ್ಲಿದ್ದುದನ್ನು ಪಾಠಾಂತರವಾಗಿ ಕಿಸಲಾಗಿದೆ. ಹೀಗೆ ಒಬ್ಬ ಸಂಪಾದಕರು ತಿದ್ದಿ ಸರಿಪಡಿಸಿದುದನ್ನು ಮತ್ತೂ ಉತ್ತಮ ಯಲ್ಲಿ ಬೇರೊಬ್ಬರು ಸಿದ್ಧಪಡಿಸಬಹುದು. ಅದಕ್ಕೆ ಸಹಾಯವಾಗಿ ಮೂಲದ ಪಾಠಗಳು ಯೇ ಇರುತ್ತವೆ.

ಹೀಗೆ ಛಂದಸ್ಸಿಗನುಗಣವಾಗಿ ನೋಡುವಾಗ ಕೆಲವು ಸಲ ಚಂಪೂಕಾವ್ಯಗಳಲ್ಲಿ ಭಾಗದಲ್ಲಿಯೇ ಸೇರಿಹೋಗಿರುವ ಪದ್ಯಗಳನ್ನೂ ಗುರುತಿಸಬಹುದು. ನಾಗವರ್ಮನ ರ್ಧಮಾನ ಪುರಾಣ'ದ ಹಸ್ತಪ್ರತಿಯಲ್ಲಿ ೩-೬೯ನೆಯ ವಚನಭಾಗದಲ್ಲಿಯೇ ಹೋಗಿರುವ ೩-೭೦ನೆಯ ಕಂದಪದ್ಯವನ್ನು ಈ ಗ್ರಂಥವನ್ನು ಸಂಪಾದಿಸುವಾಗ ಕೊಡಲಾಗಿದೆ. ಇದೇ ರೀತಿ ಬಂಧುವರ್ಮನ 'ಹರಿವಂಶಾಭ್ಯುದಯ'ದಲ್ಲಿಯೂ ರಲ್ಲಿ ಮಾಡಿರುವುದನ್ನು ಗಮನಿಸಬಹುದು.

ಪದ್ಯದಲ್ಲಿ ಪ್ರಾಸವಿಲ್ಲದಾಗ ಅದನ್ನೂ ಹೀಗೆಯೇ ತಿದ್ದಬೇಕಾಗುತ್ತದೆ. 'ವರ್ಧಮಾನ ಣ'ದಲ್ಲಿ ಬರುವ

ಕೋಲಾಟವಾಡುವಂತಿರೆ
ತೇರಾಳ್ಗಳಡುರ್ತು ಹೊಯ್ಯೆ ತುರಗಚಯಂಗಳ್ ೪-೬೪

ಎಂಬಲ್ಲಿ ಎರಡನೆಯ ಪಾದದಲ್ಲಿ ಪ್ರಾಸವಿಲ್ಲದಿರುವುದನ್ನು ಗಮನಿಸಿ 'ತೇರಾಳ್ಗಳ' ಎಂಬುದನ್ನು 'ಕಾಲಾಳ್ಗಳ' ಎಂದು ತಿದ್ದಲಾಗಿದೆ.

3. ಸಂಧಿ ಸಮಾಸ ಮೊದಲಾದ ವ್ಯಾಕರಣ ನಿಯಮಗಳಿಗನುಸಾರವಾಗಿದೆಯೆ ಎಂಬುದನ್ನು ಪರಿಶೀಲಿಸಬೇಕು. ಬಂಧುವರ್ಮನ 'ಜೀವಸಂಬೋಧನೆ'ಯ

ಜಗದೊಳ್ ಚೋದ್ಯಂ ಪಲವುಂ
ನೆಗೞ್ದೊ ಡಮೇನಮರ್ದನುಂಡು ಕಾಱುವುದುಂ ೮-೧೫

ಎಂಬ ಪದ್ಯದಲ್ಲಿ ಬರುವ 'ಮೇನಮರ್ದನುಂಡು' ಎಂಬುದಕ್ಕೆ ಪಾಠಾಂತರ 'ಮೇಂ ಮರ್ದನುಂಡು' ಎಂಬುದೂ ಇದೆ. ಇಲ್ಲಿ ಅಮೃತ ಎಂಬರ್ಥ ಬರಬೇಕಾಗಿರುವುದರಿಂದ 'ಮೇನಮರ್ದನುಂಡು' ಎಂದೇ ಇಟ್ಟುಕೊಳ್ಳಬೇಕಾಗುತ್ತದೆ. ಹೀಗೆ ಸಂಧಿಯಾಗುವಾಗ ಪದದರ್ಥವನ್ನು ತಿಳಿದು ಸಂಧಿ ಮಾಡಬೇಕಾಗುತ್ತದೆ.

4. ಪ್ರತ್ಯಯಗಳೂ ಅರ್ಥಬದಲಾವಣೆ ಮಾಡಬಹುದು. ಇದಕ್ಕೆ ಡಿ.ಎಲ್. ನರಸಿಂಹಾಚಾರ್ಯರು 'ವಡ್ಡಾರಾಧನೆ'ಯ ಒಂದು ವಾಕ್ಯಖಂಡವನ್ನು (೮-೧೩) ಉದಾಹರಣೆಯಾಗಿ ಕೊಟ್ಟಿದ್ದಾರೆ.[1] 'ಅಧಮರ ಪೊಲ್ಲಮಾನಸರ ದುರ್ಜನರ ಜಾರಜಾತರ' ಎಂಬುದರಲ್ಲಿ ಬುರುವ ದ್ವಿತೀಯಾ ವಿಭಕ್ತಿ ಪ್ರತ್ಯಯವಿಟ್ಟು ಅರ್ಥಮಾಡಿದಾಗ 'ಅಧಮರನ್ನು, ಪೊಲ್ಲಮಾನಸರನ್ನು, ದುರ್ಜನರನ್ನು, ಜಾರಜಾತರನ್ನು ಎಂದಾಗುತ್ತದೆ. ಆದರೆ ಇಲ್ಲಿ ಬಯ್ದುದ್ದು ಅಧಮರು ಮುಂತಾದವರನ್ನಲ್ಲ, ವಾಯುಭೂತಿ ಎಂಬುವನನ್ನು; ಆದುದರಿಂದ ಇಲ್ಲಿ ದ್ವಿತೀಯಾ ವಿಭಕ್ತಿಗಳಿಗೆ ಸಾರ್ಥಕತೆಯಿಲ್ಲ; 'ಅಧಮರಂ', 'ಮೊದಲಾಗಿ ಷಷ್ಠೀವಿಭಕ್ತಿಯೇ ಇರಬೇಕೆಂದು ಸೂಚಿಸುತ್ತಾರೆ.

5. ಅಕ್ಷರಸ್ಖಾಲಿತ್ಯಗಳು ಹೇಗೆ ಆಗಬಹುದೆಂದು ನೋಡಿದೆವೂ ಅಂತಹವುಗಳನ್ನು ಪರಿಶೀಲಿಸಬೇಕು. ಒಂದು ಅಕ್ಷರಕ್ಕೆ ಬದಲಾಗಿ ಮತ್ತೊಂದು ಅಕ್ಷರ ಬಂದಾಗ ಯಾವುದನ್ನು ಉಳಿಸಿಕೊಳ್ಳಬೇಕೆಂಬುದನ್ನು ಅರ್ಥದೃಷ್ಟಿಯಿಂದ ನೋಡಿ ನಿರ್ಧರಿಸಬೇಕಾಗುತ್ತದೆ.

---

1. ಕ. ಗಂ. ಸಂ. ಪು.

ಉದಾಹರಣೆಗೆ ಕ-ತ ಬದಲಾಗುವ ಒಂದು ಸಂದರ್ಭವನ್ನು ನೋಡಬಹುದು. ಇದಕ್ಕೆ ಆದಿಪುರಾಣ'ದಲ್ಲಿ ಬರುವ

ಕಿಪಿಗಿಂಪಂ ಕೊದಳೊಳ್ ಪೊದಟ್ದಿ ನುಡಿಗಳ್ ೭-೧೩೦

ಎಂಬಲ್ಲಿ 'ಕೊದಳೊಳ್' ಪದಕ್ಕೆ 'ತೊದಲೊಳ್' ಎಂಬ ಪಾಠವು ದೊರೆತರೂ ೊದಳೊಳ್' ಎಂಬುದು ಪ್ರಾಚೀನ ರೂಪವಾದುದರಿಂದ ಅದನ್ನೇ ಸಂಪಾದಕರು ಂಗೀಕರಿಸಿದ್ದಾರೆ. ಇಂತಹುದೇ ಒಂದು ಉದಾಹರಣೆಯನ್ನು ಬಂಧುವರ್ಮನ ರಿವಂಶಾಭ್ಯುದಯ'ದ ೬-೩೧ ವಚನದಲ್ಲಿ ಬರುವ 'ಅಂತಪ್ಪೊದಿಗಳ್' ಎಂಬ ೂಲಪಾಠದಲ್ಲಿನ 'ದಿ' ಬದಲಿಗೆ 'ಡಿ' ಮತ್ತು ದೀರ್ಘವನ್ನು ಸೇರಿಸಿ 'ಅಂತಪ್ಪೊಡೀಗಳ್' ಂದು ಮಾಡಿರುವುದು ಡ-ದಗಳ ಅದಲು ಬದಲಾವಣೆಗೆ ಗಮನಿಸಬಹುದು. ಹಾಗೆಯೆ -೩೦ ವಚನದ ಮೂಲಪಾಠದಲ್ಲಿನ 'ಸ್ವಯಂ ಪ್ರಭಮೆಂ' ಎಂಬುದು 'ಸ್ವಯಂಪ್ರಭೆಯೆಂ' ಂದು ಬದಲಾಗಿರುವುದನ್ನೂ ನೋಡಬಹುದು.

6. ಶಾಸ್ತ್ರವಿಷಯಗಳು ಬಂದಾಗ ಆಯಾ ಶಾಸ್ತ್ರಗ್ರಂಥಗಳನ್ನು ಸಹಾಯಕ್ಕೆ ೆದುಕೊಳ್ಳಬೇಕು. ಇದಕ್ಕೆ ಬಂಧುವರ್ಮನ 'ಹರಿವಂಶಾಭ್ಯುದಯ'ದ ೬-೫೧ ವಚನದ ಾಣೂರ ಮತ್ತು ಕೃಷ್ಣರ ಮಲ್ಲಯುದ್ಧ ಸಂದರ್ಭದಲ್ಲಿ ಬರುವ 'ಲಂಘನ ವಲ್ಗನ ಕ್ರಮ ಭ್ರಮರಿ ಕಾರಣಂಗಳಂ' ಎಂಬಲ್ಲಿ 'ವಲ್ಗನ' ಪದ ಹಸ್ತಪ್ರತಿಯಲ್ಲಿ 'ವಲುಘ' ಂದಿದೆ. ಈ ಪದವನ್ನು 'ವಲ್ಗನ' ಎಂದು ತಿದ್ದಬೇಕಾದರೆ ಮಲ್ಲಯುದ್ಧಕ್ಕೆ ಸಂಬಂಧಪಟ್ಟ ಸ್ತ್ರಗ್ರಂಥಗಳ ಪರಿಶೀಲನೆಯಿಂದ ಮಾತ್ರ ಸಾಧ್ಯವಾಗುತ್ತದೆ. ಹಾಗೆಯೆ ಭರತನ ಾಟ್ಯಶಾಸ್ತ್ರ'ದಲ್ಲಿ ಬರುವ 'ಕಟಿಶೀರ್ಷ' ಮತ್ತು 'ಭುಜಶೀರ್ಷ' ಪದಗಳನ್ನು ನಾಲ್ಕು ದಗಳಾಗಿ ವಿಂಗಡಿಸಿ 'ಕಟಿ ಶೀರ್ಷ ಭುಜ ಶೀರ್ಷ' ಎಂದು ಭಾವಿಸಿ ಅರ್ಥೈಸಿರುವ ನೋಮೋಹನ್ ಘೋಷ್ ಎಂಬುವವರು ಮಾಡಿರುವ ತಪ್ಪನ್ನು ಶ್ರೀ ಎಸ್.ಎನ್. ಷ್ಣಜೋಯಿಸರು ಉದಾಹರಿಸಿದ್ದಾರೆ.[1] ಅಲ್ಲದೆ ಶ್ರೀ ಡಿ.ಎಲ್. ನರಸಿಂಹಾಚಾರ್ಯರು ುದಾಹರಿಸಿರುವ ಮತ್ತೊಂದು ಉತ್ತಮ ಉದಾಹರಣೆಯೆಂದರೆ 'ಪಾರ್ಶ್ವನಾಥ ಪುರಾಣ'ದ ಂದು ಪದ್ಯ. ಇದರ 'ಕದುಪಿನ ಚಿಕ್ಕ ಪೋತ ಕರಿಣೀಗಣಮಂ ನವಪಲ್ಲವಂಗಳಂ

1. ಹಸ್ತಪ್ರತಿಶಾಸ್ತ್ರ ಪು. 159

ಮುದದೊಳೆ ಮುನ್ನ ಮೇಯಿಸಿ' (೪-೧೧೩) ಎಂಬಲ್ಲಿ ಬರುವ 'ಚಿಕ್ಕ ಪೋತ' ಎಂಬುದಕ್ಕೆ ಸಣ್ಣ ಮರಿ ಎಂದು ಭಾವಿಸಿ ಪ್ರತಿಕಾರನೊಬ್ಬ ಬರೆದಿದ್ದಾನೆ. ಆದರೆ ಇಲ್ಲಿ 'ಚಿಕ್ಕ' ಎಂಬುದು 'ವಿಕ್ಕ' ಎಂದಿರಬೇಕೆಂದೂ ಇದಕ್ಕೆ ಹತ್ತು ವರ್ಷ ವಯಸ್ಸಿನ ಆನೆಯೆಂದು ಅರ್ಥವಿರುವುದನ್ನೂ ಸೂಚಿಸಿದ್ದಾರೆ. ಈ ಪದ ಅರ್ಥವಾಗದೆ 'ವಿಕ್ಕ-ಬಿಕ್ಕ-ಚಿಕ್ಕ' ಆಗಿರುವ ಸಂಭವವಿದೆಯೆಂದು ಹೇಳಿದ್ದಾರೆ.

7. ಶುದ್ಧ ಪ್ರತಿಯೆಂದು ಆರಿಸಿರುವ ಪಾಠಕ್ಕೆ ಪ್ರಾಧಾನ್ಯ ನೀಡಬೇಕು.
'ತೊರೆವೆ ರಾಮಾಯಣ'ದ ಯುದ್ಧಕಾಂಡದಲ್ಲಿ ಬರುವ

ಸೆಳೆದು ಕೈದುವ ಬಿಸುಟನೆಂದಳ
ವಳಿಯದಿರು ನೀನಾವ ಮೆಯ್ಯಲಿ
ಬಳಸೆ ಬಳಸುವೆಯಿಕ್ಕದಂಗದಲಂಜಬೇಡೆಂದ ೨೩-೯

ಎಂಬ ಮೂರನೆಯ ಪಾದದ 'ಬಳಸೆ' ಪದಕ್ಕೆ 'ಬಳಕೆ' ಎಂಬ ಪಾಠಾಂತರ ಆರು ಪ್ರತಿಗಳಲ್ಲಿದ್ದರೂ ಶುದ್ಧಪ್ರತಿಯೆಂದು ಭಾವಿಸಿರುವ 'ಚ' ಪ್ರತಿಗೆ ಪ್ರಾಧಾನ್ಯತೆಯೀಯುವುದರಿಂದ 'ಬಳಸೆ' ಪದವನ್ನು ಸ್ವೀಕರಿಸಲಾಗಿದೆ. ಇದರಿಂದ ಪ್ರಾಚೀನ ಪ್ರತಿಗೆ ಪ್ರಾಧಾನ್ಯತೆಯಿತ್ತಿರುವುದಲ್ಲದೆ ಅರ್ಥಪುಷ್ಟಿಯೂ ಆಗುತ್ತದೆ.

ಈ ಮೇಲಣ ಏಳು ಸೂತ್ರಗಳನ್ನು ಸಂಪಾದನೆಯಲ್ಲಿ ಕಂಡುಬರುವ ಸಾಮಾನ್ಯ ವಿಷಯಕ್ಕೆ ಸಂಬಂಧಪಟ್ಟಂತೆ ಅನುಸರಿಸಬಹುದಾಗಿದೆ. ಇವೇ ಅಲ್ಲದೆ ಕೆಲವು ಗ್ರಂಥ ಸಂಪಾದನ ಶಾಸ್ತ್ರಜ್ಞರು ಪಾಠಪರಿಷ್ಕರಣ ವಿಷಯದಲ್ಲಿ ಕೆಲವು ಸಾಮಾನ್ಯ ತತ್ವಗಳನ್ನು ನಿರೂಪಿಸಿರುವುದನ್ನು ಡಿ.ಎಲ್. ನರಸಿಂಹಾಚಾರ್ಯರು ಹೀಗೆ ಸಂಗ್ರಹಿಸಿದ್ದಾರೆ.

೧. ಸುಲಭ ಪಾಠಕ್ಕಿಂತ ಕಠಿನ ಪಾಠವನ್ನು ಆರಿಸಬೇಕೆಂಬುದು ಪ್ರಧಾನವಾದುದಾಗಿದೆ.
೨. ಒಂದು ಸಂಪ್ರದಾಯಕ್ಕೆ ಸೇರಿದ ಯಾವುದಾದರೂ ಒಂದು ಪ್ರತಿಯ ಪಾಠ ಇನ್ನೊಂದು ಸಂಪ್ರದಾಯದ ಪ್ರತಿಯ ಪಾಠಕ್ಕೆ ಸಮಾನವಾಗಿದ್ದರೆ ಆಗ ಅದನ್ನೇ ಕವಿಪಾಠವೆಂದು ಅಂಗೀಕರಿಸಬೇಕು.
೩. ಪ್ರಧಾನ ಮಾತೃಕೆಯಿಂದ ಕವಲೊಡೆದು ಬಂದಿರುವ ಉಪಪ್ರಧಾನ ಮಾತೃಕೆಗಳ ಪುನರ್ರಚಿತ ಪಾಠದಲ್ಲಿ ಐಕ್ಯತೆಯಿದ್ದರೆ ಆ ಪಾಠವೇ ಕವಿಪಾಠ; ಇಲ್ಲದೆಹೋದರೆ ಅವು ಭಿನ್ನಪಾಠವಾಹಕಗಳಾಗುತ್ತವೆ.

೬. ಎರಡು ಭಿನ್ನ ಸಂಪ್ರದಾಯಗಳಲ್ಲಿ ಯಾವುದು ಪ್ರಾಚೀನತಮವೋ ಅದನ್ನು ಪುರಸ್ಕರಿಸಬೇಕು. ಮೂರು ಸಂಪ್ರದಾಯಗಳಿದ್ದು ಅವುಗಳಲ್ಲಿ ಎರಡರ ಪಾಠದಲ್ಲಿ ಐಕ್ಯತೆಯಿದ್ದರೆ ಆಗ ಆ ಪಾಠ ಗ್ರಾಹ್ಯವಾಗುತ್ತದೆ.

೭. ಲಬ್ಧ ಪ್ರತಿಗಳ ಸಹಾಯದಿಂದ ಲಬ್ಧವಲ್ಲದ ಮಾತೃಕೆಯ ಪಾಠವನ್ನು ಪುನರ್ರಚಿಸುವಾಗಲೇ ಭಿನ್ನಪಾಠಗಳು ಹೇರಳವಾಗಿ ದೊರೆಯಬಹುದು; ಮಾತೃಕೆಯ ಪಾಠಕ್ಕೆ ಇವು ಭಿನ್ನವಾಹಕಗಳಾಗುತ್ತವೆ.

ಇವುಗಳಲ್ಲಿ ಮೊದಲನೆಯ ಸೂತ್ರ ಎಲ್ಲ ಸಂಪಾದಕರೂ ಅನುಸರಿಸಬೇಕಾದ ಸಾಮಾನ್ಯ ಸೂತ್ರವಾಗಿದೆ. 'ತೊರವೆ ರಾಮಾಯಣ'ದ ಯುದ್ಧಕಾಂಡದ

ಕೆದಱಿದನು ಬಳಿಕಟ್ಟಿಮುಟ್ಟಿದ
ಕುದುಕುಳಿಗ ರಾವುತರ ರಣದೊಳು ೩೦-೪೪

ಎಂಬ ಪದ್ಯದಲ್ಲಿ ಬರುವ 'ಕುದುಕುಳಿಗ' ಪದವನ್ನು ಗಮನಿಸಬಹುದು. ಇದಕ್ಕೆ 'ಕುದುರೆಗಳ' ಎಂಬ ಪಾಠ ಆರು ಪ್ರತಿಗಳಲ್ಲಿ ಕಂಡುಬರುತ್ತದೆ. ಇಲ್ಲಿ 'ಕುದರೆಗಳ' ಪಾಠ ಸುಲಭವಾಗಿ ಅರ್ಥವಾಗುವುದರಿಂದ ಕಠಿನಪದವಾದ 'ಕುದುಕುಳಿಗ' ಪದವನ್ನು ಬಿಟ್ಟು ಲಿಪಿಕಾರರು ಹೀಗೆ ತಿದ್ದಿರುವುದುಂಟು. ಆದರೆ ಇಲ್ಲಿ 'ಕುದುಕುಳಿಗ' ಎಂಬ ಪದವಿರಬೇಕೇ ಹೊರತು 'ಕುದುರೆಗಳ' ಆಗಲಾರದು. ರಣರಂಗದ ರಾವುತರಿಗೆ ವಿಶೇಷವಾಗಿ ಬಂದಿರುವ ಈ ಪದಕ್ಕೆ ಆತುರ, ಆವೇಶ ಮೊದಲಾದ ಅರ್ಥಗಳಿರುವುದರಿಂದ ಈ ಕಠಿನಪದವನ್ನೇ ಗ್ರಾಹ್ಯಮಾಡಿಕೊಳ್ಳಬೇಕಾಗುತ್ತದೆ. ಇದೇ ಪದ ಇದೇ ಕಾಂಡದ ೩೦-೩೬ರಲ್ಲಿಯೂ ಕುದುಕುಳಿಗ, ಕದುಕುಳಿಗ ಎಂಬ ಪಾಠಗಳೊಡನೆ ಬಂದಿರುವುದನ್ನೂ ಗಮನಿಸಬಹುದು. ಹೀಗೆಯೇ ಉಳಿದ ನಾಲ್ಕು ಸೂತ್ರಗಳೂ ಕವಿಪಾಠ ನಿರ್ಣಯದಲ್ಲಿ ತೆಗೆದುಕೊಳ್ಳಬೇಕಾದ ಮಾರ್ಗಸೂಚಿಗಳಾಗಿವೆ.

ಒಂದಕ್ಕಿಂತ ಹೆಚ್ಚು ಹಸ್ತಪ್ರತಿಗಳು ದೊರೆತಾಗ ಒಂದಲ್ಲ ಒಂದು ರೀತಿಯಿಂದ ಸಹಾಯವಾಗಬಹುದು. ಈ ಎಲ್ಲದರಿಂದಲೂ ಸಾಧುವಾದ ಪಾಠ ದೊರೆಯದಾದಾಗ ಇತರ ಆಕರಗಳ ಸಹಾಯದಿಂದ ಸಂಪಾದನಾಕಾರ್ಯ ನಡೆಸಬೇಕಾಗುತ್ತದೆ. ಇದಕ್ಕೆ ಟಿ.ವಿ. ವೆಂಕಟಾಚಲ ಶಾಸ್ತ್ರಿಗಳು 'ಕರ್ಣಾಟಕ ಪಂಚತಂತ್ರ' (೯-೧೮)ರಲ್ಲಿ ಬರುವ 'ಖಲ್ವಾಯಿತ' ಪದವನ್ನು ವಿವಿಧ ಮೂಲಗಳಿಂದ ವಿಮರ್ಶಿಸಿ ಅದು 'ಖಲ್ವಾಯಿತ'ವಾಗಿರದೆ 'ಖಲ್ಲಾಯಿತ' ಎಂಬುದು ಸರಿಯಾದ ರೂಪವೆಂದು

ನಿರ್ಣಯಿಸಿರುವುದನ್ನು ಗಮನಿಸಬಹುದು.[1]

ಏಕೈಕ ಹಸ್ತಪ್ರತಿಗಳು ದೊರೆಯುವಲ್ಲಿ ಊಹಾತ್ಮಕ ಪರಿಷ್ಕರಣ ಇಲ್ಲವೆ ಇತರೆ ಗ್ರಂಥಗಳ ಸಹಾಯ ಅಗತ್ಯವಾಗುತ್ತದೆ. ಇದು ಸಂಪಾದಕನಿಂದ ಸಂಪಾದಕನಿಗೆ ವ್ಯತ್ಯಯವಾಗುವುದುಂಟು. ಇದಕ್ಕೆ ಅವರವರ ಶಕ್ತಿ ಸಾಮರ್ಥ್ಯಗಳು ಕಾರಣವಾಗುತ್ತವೆ. ಒಬ್ಬ ಊಹಿಸಿದ ಪಾಠಕ್ಕಿಂತ ಮತ್ತೊಬ್ಬನ ಪಾಠ ಉತ್ತಮವಾಗಿರಬಹುದು. ಇದರಲ್ಲಿ ಪಾಠಾಂತರಗಳನ್ನು ಗುರುತಿಸುವ ಕೆಲಸವೇನೂ ಇರುವುದಿಲ್ಲ. ಆದರೆ ಪ್ರತಿಯು ತ್ರುಟಿತವಾಗಿದ್ದರೆ, ಛಂದಸ್ಸಿಗನುಗುಣವಾಗಿ ತಿದ್ದಬೇಕಿದ್ದರೆ ಸಂಪಾದಕನ ಸತ್ವಪರೀಕ್ಷೆ ನಡೆದುಹೋಗುತ್ತದೆ.

ಬಹುಕಾಲದಿಂದ ಅಲಭ್ಯವಾಗಿದ್ದು ಕೊನೆಗೂ ದೊರೆತ ಎರಡನೆಯ ನಾಗವರ್ಮನ 'ವರ್ಧಮಾನ ಪುರಾಣ'ದ ಏಕೈಕ ಹಸ್ತಪ್ರತಿ ಸಾಕಷ್ಟು ಶುದ್ಧವಾಗಿದ್ದರೂ ಅರೆಕೊರೆಗಳೂ ತ್ರುಟಿತ ಭಾಗಗಳೂ ಇವೆ. ಇವುಗಳನ್ನು ಆದಷ್ಟೂ ಸರಿಪಡಿಸುವುದು ಸಂಪಾದಕನ ಕರ್ತವ್ಯವಾಗಿದೆ. ಬರುವ ಸಾಮಾನ್ಯ ತಪ್ಪುಗಳನ್ನು ಸುಲಭವಾಗಿ ತಿದ್ದಬಹುದು.

ಅಜ್ಞಾನ ಪೊಗರ್ತೆಯಿಂ ಶಾ
ಸ್ತ್ರಜ್ಞನೃಪಾಳಿ ಸದುಪದೇಶಮೆಂಬಂತೆ ಕರಂ
ಪ್ರಾಜ್ಞಂಗೆ ಬಗೆದು ನೋಡೆ ಮ
ನೋಜ್ಞಂಗೆ ಪ್ರಣಯಾನುರಾಗಮಂ ಪುಟ್ಟಿಸುಗುಂ ||೧-೧೭||

ಎಂದು ಹಸ್ತಪ್ರತಿಯಲ್ಲಿರುವ ಕಂದಪದ್ಯದ ಎರಡು ಮತ್ತು ನಾಲ್ಕನೆಯ ಪಾದಗಳು ಛಂದಸ್ಸಿಗನುಗುಣವಾಗಿರುವುದಿಲ್ಲ. ಎರಡರಲ್ಲಿಯೂ ೨೦ ಮಾತ್ರೆಗಳಿಗೆ ಬದಲಾಗಿ ೨೧ ಮಾತ್ರೆಗಳಿದ್ದು, ಮೂರನೆಯ ಸ್ಥಾನದಲ್ಲಿ 'ಜಗಣ'ವಿಲ್ಲದಿರುವುದನ್ನು ಗಮನಿಸಬುಹುದು. ಜೊತೆಗೆ ಅರ್ಥದೃಷ್ಟಿಯಿಂದಲೂ ನೋಡಿದಾಗ

ಅಜ್ಞಾನ ಪೊಗರ್ತೆ [ಯು]ಶಾ
ಸ್ತ್ರಜ್ಞನೃಪಾಳಿ [ಗು] ಪದೇಶಮೆಂಬಂತೆ ಕರಂ
[ಪ್ರಾಜ್ಞರ್ಗೆ] ಬಗೆದು ನೋಡೆ ಮ
[ನೋಜ್ಞಂ] ಪ್ರಣಯಾನುರಾಗಮಂ ಪುಟ್ಟಿಸುಗುಂ ||

1. ಹಳೆಯ ಹೊನ್ನು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ೧೯೯೧.

ಎಂದು ತಿದ್ದಿ ಸರಿಪಡಿಸಬಹುದು. ಮೊದಲನೆಯ ಪಾದದಲ್ಲಿ ಮೂಲದಲ್ಲಿದ್ದಂತೆ ಗರ್ತೆಯಿಂ' ಎಂದೇ ಇದ್ದಿದ್ದರೂ ಶಿಥಿಲದ್ವಿತ್ವವಾಗಿ ಭಾವಿಸಿದರೆ ಸರಿಹೋಗುತ್ತಿದ್ದಿತು. ರರೆ ಅರ್ಥದೃಷ್ಟಿಯಿಂದ ಇಲ್ಲಿಯೂ ಸ್ವಲ್ಪ ಬದಲಾವಣೆ ಮಾಡಲಾಗಿದೆ. ಎರಡನೆಯ ದದಲ್ಲಿ ಬರುವ 'ನೃಪಾಳಿ' ಪದವನ್ನನುಸರಿಸಿ ಮೂರನೆಯ ಪಾದವನ್ನು ತಿದ್ದಲಾಗಿದೆ.

ಮತ್ತೊಂದು ಏಕೈಕ ಹಸ್ತಪ್ರತಿಯಾದ ಬೊಮ್ಮಯ್ಯನ 'ವೈದ್ಯಕಂದ' ಎಂಬ ಗೃಗ್ರಂಥದ ಹಸ್ತಪ್ರತಿಯು ತೀರಾ ಅಶುದ್ಧವಾಗಿದ್ದು, ಲೆಕ್ಕಕ್ಕೆ ಎರಡು ಪ್ರತಿಗಳು ರೆತರೂ ಒಂದರ ಮರುಪ್ರತಿ ಮತ್ತೊಂದಾಗಿರುವುದರಿಂದ ಇದರ ಸಂಪಾದನಾಕಾರ್ಯ ಂಬಾ ಜಟಿಲವೂ ಸಮಸ್ಯಾಪೂರ್ಣವೂ ಆಗಿರುವುದನ್ನು ಉದಾಹರಣೆಯಿಂದ ಯಬಹುದು. ಇದರ 'ಚಿಕಿತ್ಸಾ ವಿಭಾಗ'ದಲ್ಲಿ ಬರುವ

ವೃತ್ತ || ಅಣಲೆಯು ತಾರೆಯು ನೆಲ್ಲಿಯು ಸುರದಾರು ವಿಳಂಗ ಪದ್ಮ ರಾಸ್ಮೆಯುಂ
ಮೆಣಸು ಶುಂಠಿ ಹಿಪ್ಪಲಿ ಗೇಕಿನಗೆಡ್ಡೆಯು ಸಮಭಾಗದಿಂ
ಹಣೆದು ಸಮಾನ ಸಕ್ಕರೆ ಪೊಂದಿಸಿ ಜೇನಿನತುಪ್ಪದೊಳುಣು
ದಣುವಂತೆ ಕಾಸ ಕಡೆ ಸಾರುವುದು ಪೂರ್ವದ ವೈದ್ಯಸಮ್ಮತಿಯಂ||೨೮೫||

ಇದು ವೃತ್ತ ಎಂಬುದನ್ನು ಹಸ್ತಪ್ರತಿಯಲ್ಲಿಯೇ ಸೂಚಿಸಲಾಗಿದೆ. ಮೊದಲು ಇದು ಾವ ವೃತ್ತಕ್ಕೆ ಸೇರಿದುದೆಂಬುದನ್ನು ಗೊತ್ತುಮಾಡಬೇಕು. ಮೊದಲನೆಯ ಪಾದದ ಿಯಲ್ಲಿ ನಾಲ್ಕು ಲಘುಗಳಿರುವುದರಿಂದ 'ಲಘು ನಾಲ್ಕಾಗಿರಲಂತು ಚಂಪಕ' ಬುದನ್ನನುಸರಿಸಿ ಇದು ಚಂಪಕಮಾಲಾ ವೃತ್ತಕ್ಕೆ ಸರಿಹೊಂದುವುದೇ ಎಂದು ಶೀಲಿಸಬೇಕಾಗುತ್ತದೆ. ಮುಂದೆ 'ನಜಭಜಜಂಜರಂ ಬಗೆಗೊಳುತ್ತಿರೆ ಚಂಪಕಮಾಲೆ ತ್ಪುಗುಂ' ಎಂಬ ಸೂತ್ರದಂತೆ ಗಣಗಳನ್ನು ಹೊಂದಿಸಿ ನೋಡಿದರೆ, ಕೆಲವು ಅಕ್ಷರಗಳನ್ನು ್ಬಿ, ಸೇರಿಸಿ ಸರಿಪಡಿಸಬೇಕಾದುದು ಅಗತ್ಯವಾಗುತ್ತದೆ. ಅಂತೆಯೇ ಎಲ್ಲ ಪಾದಗಳನ್ನೂ ೀಡಿ ಅರ್ಥವ್ಯಾಪ್ತಿಗೆ ಕುಂದುಂಟಾಗದಂತೆ ವಿವಿಧ ಮೂಲಗಳಿಂದ ಪರಿಶೀಲಿಸಿ ್ದದಾಗ

ಚಂಪಕ|| ಅಣಲೆಯು ತಾರೆ'[ನೆಲ್ಲಿ]' ಸುರದಾರು ವಿಳಂಗ[ವು] ಪದ್ಮ ರಾಸ್ಮೆಯುಂ
ಮೆಣ 2[ಸನು]2 ಶುಂಠಿ ಹಿಪ್ಪಲಿ [ಯು]ಗೇಕಿನ ಗೆಡ್ಡೆ ಘು 3[ಸಾಮ್ಯ]3 ಭಾಗದಿಂ
ಹಣೆದು ಸಮಾನ ಸಕ್ಕರೆ [ಯ] ಪೊಂದಿಸಿ ಜೇನಿನ ತುಪ್ಪ 4[ದಿಂದುಣಲ್
ಮಣ]4 ದಣುವಂತೆ ಕಾಸ ಕಡೆಸಾರು 5[ಗು]5 ಪೂರ್ವದ ವೈದ್ಯಸಮ್ಮ 6[ತಂ]6

1. ಯುನೆಲ್ಲಿಯು (ಕಗ) 2 ಸು (ಕಗ) 3 ಸಮ (ಕಗ) 4 ದೊಳುಣೆ (ಕಗ) 5 ವುದು (ಕಗ) 6 ತಿಯಂ (ಕಗ)

ಎಂದು ರೂಪು ಪಡೆಯುತ್ತದೆ. ಇದರಿಂದ ಮೂಲಾರ್ಥಕ್ಕೆ ಯಾವ ಕುಂದೂ ಉಂಟಾಗುವುದಿಲ್ಲ; ಛಂದಸ್ಸಿಗೆ ಅನುಗುಣವಾಗಿದೆ. ಹೀಗೆ ತಿದ್ದಿದ ಮೇಲೆ ನೋಡುವವರಿಗೆ ಬಹಳ ಸುಲಭದ ಕೆಲಸವಾಗಿ ತೋರಬಹುದು. ಆದರೆ ಅದನ್ನು ಸರಿಪಡಿಸುವಾಗ ಅನುಭವಿಸುವ ಮಾನಸಿಕ ತೊಳಲಾಟ, ವೇಳೆಯ ವ್ಯಯ, ಬೇಕಾದ ಮನಸ್ಸಿನ ತಾಳ್ಮೆಗಳು ಎಷ್ಟೆಂಬುದು ಈ ಕೆಲಸ ಮಾಡಿದವರಿಗೆ ಮಾತ್ರ ಅರ್ಥವಾಗುವಂತಹುದು. ಇಲ್ಲಿ ಕಂಸದಲ್ಲಿ ಕೊಟ್ಟಿರುವ ಪಾಠಗಳಿಗೆ ಮೂಲದಲ್ಲಿರುವುದನ್ನು ಪಾಠಾಂತರಗಳಾಗಿ ಅಡಿಟಿಪ್ಪಣಿಯಲ್ಲಿ ಕೊಡಲಾಗಿದೆ. ಮತ್ತೊಬ್ಬರು ಇದಕ್ಕಿಂತಲೂ ಉತ್ತಮ ಪಾಠಗಳಿಂದ ತಿದ್ದಲು ಸಮರ್ಥರಾಗಬಹುದು; ಈ ಪಾಠಾಂತರಗಳು ಅದಕ್ಕೆ ಸಹಕಾರಿಯಾಗಿ ನಿಲ್ಲುತ್ತವೆ.

ಇಲ್ಲಿ ಒದಗಿಸಿರುವ ಎಲ್ಲ ಪಾಠಗಳೂ ಸಂಪಾದಕನಿಂದಾದುದರಿಂದ ಎಲ್ಲವನ್ನೂ ಸಂಪಾದನಾ ನಿಯಮಕ್ಕನುಸಾರವಾಗಿ ಕಂಸಗಳಲ್ಲಿ ಕೊಡಲಾಗಿದೆ; ಕೆಲವು ಕಂಸದಲ್ಲಿನ ಪಾಠಗಳಿಗೆ ಪಾಠಾಂತರಗಳನ್ನು ಕೊಟ್ಟು ಕೆಲವಕ್ಕೆ ಕೊಟ್ಟಿರುವುದಿಲ್ಲ. ಇದಕ್ಕೆ ಕಾರಣ ಮೂಲಪಾಠಕ್ಕೆ ಬದಲಾಗಿ ಕೊಟ್ಟಿರುವ ಪಾಠಗಳಿಗೆ ಮೂಲಪಾಠವನ್ನು ಪಾಠಾಂತರವಾಗಿ ಕೊಡಬೇಕಾದುದು ಸಹಜವಾಗಿದೆ. ಹಾಗೆಯೇ ಛಂದಸ್ಸಂಪೂರ್ಣತೆಗಾಗಿ ಇಲ್ಲವೆ ಅರ್ಥಪುಷ್ಟಿಗಾಗಿ ಹೊಸದಾಗಿ ಸೇರಿಸಿದವುಗಳಿಗೆ ಪಾಠಾಂತರಗಳೇ ಇಲ್ಲದುದರಿಂದ ಇವುಗಳಿಗೆ ಪಾಠಾಂತರಗಳನ್ನು ಕೊಟ್ಟಿರುವುದಿಲ್ಲ; ಇದು ಅಗತ್ಯವಾಗಿ ಕಂಡುಬರುವುದಿಲ್ಲ. ಒಂದು ವೇಳೆ ಕೊಡಲೇಬೇಕೆಂದು ಯಾರಾದರೂ ಬಯಸಿದಲ್ಲಿ 'ವಿಳಂಗ[ವು]' ಎನ್ನುವಲ್ಲಿ 'ವಿಳಂ[ಗವು]' ಎಂದು ನಮೂದಿಸಿ 'ಗ' ಎಂಬುದನ್ನು ಪಾಠಾಂತರವಾಗಿ ಕೊಡಬಹುದು. ಇದರಲ್ಲಿ ಉಪಯೋಗಿಸಿರುವ ಎರಡು ಪ್ರತಿಗಳು ಪ್ರತಿ ಮರುಪ್ರತಿಗಳಾದರೂ ಕೆಲವೆಡೆ ಲಿಪಿಕಾರರ ದೋಷದಿಂದಲೊ ಏನೊ ಪಾಠವ್ಯತ್ಯಾಸ ಕಂಡುಬರುವುದರಿಂದ ಎರಡು ಪ್ರತಿಗಳಿಗೂ ಸಂಕೇತಗಳನ್ನು ನೀಡಲಾಗಿದೆ.

ಇಲ್ಲಿ ಹೇಳಬೇಕಾದ ಮತ್ತೊಂದು ಅಂಶವೆಂದರೆ ಪಾಠಾಂತರ ಪ್ರತಿಗಳ ಸಂಕೇತಗಳನ್ನು ನೀಡುವುದು. ಏಕೈಕ ಹಸ್ತಪ್ರತಿಯಾದರೆ ಮೂಲದಲ್ಲಿದ್ದುದನ್ನು ಪಾಠಾಂತರವಾಗಿ ಕೊಟ್ಟಾಗ ಯಾವುದೇ ಸಂಕೇತ ಬೇಕಾಗುವುದಿಲ್ಲ. ಆದರೆ ಒಂದಕ್ಕಿಂತ ಹೆಚ್ಚು ಪ್ರತಿಗಳ ಉಪಯೋಗವಾದಾಗ, 'ಕ ಖ ಗ ಚ' ಎಂಬ ನಾಲ್ಕು ಪ್ರತಿಗಳಿದ್ದಲ್ಲಿ ಕೆಲವೆಡೆ ಒಂದೊ

ಡೊ ಮೂರೊ ಪಾಠಗಳನ್ನು ಪಾಠಾಂತರವಾಗಿ ಕೊಡಬೇಕಾಗುತ್ತದೆ. ಪಾಠಗಳು ಬೇರೆ ರೆಯಾಗಿದ್ದಾಗ ಬೇರೆ ಬೇರೆ ಪಾಠಗಳೊಡನೆ ಆಯಾ ಪ್ರತಿಯ ಸಂಕೇತವನ್ನು ಬೇರೆ ರೆ ಕಂಸಗಳಲ್ಲಿ ನಮೂದಿಸಬೇಕಾಗುತ್ತದೆ; ಎರಡು ಅಥವಾ ಮೂರು ಪ್ರತಿಗಳ ಪಾಠವೂ ದೇ ಇದ್ದಾಗ, 'ಕ' ಪ್ರತಿಯ ಪಾಠ ಮೂಲದಲ್ಲಿ ಉಳಿದಾಗ 'ಖಗಚ' ಪ್ರತಿಗಳ ಠವನ್ನು ಪಾಠಾಂತರವಾಗಿ ಕೊಟ್ಟು ಮೂರು ಸಂಕೇತಗಳನ್ನೂ ಒಟ್ಟಿಗೆ ಒಂದೇ ಕಂಸದಲ್ಲಿ ಗಚ) ಎಂಬಂತೆ ಕೊಡುವುದರಿಂದ ಯಾವ ಬಾಧಕವೂ ಆಗುವುದಿಲ್ಲ. ಕೆಲವು ಪಾದಕರು ಈ ಸಂಕೇತಗಳನ್ನು ಒಂದೇ ಪಾಠಕ್ಕೆ (ಖ) (ಗ) (ಚ) ಎಂಬಂತೆ ತಿರುವುದುಂಟು. ಇದರಿಂದ ಯಾವ ಹೆಚ್ಚುವರಿ ಸಹಾಯವೂ ಆದಂತಾಗುವುದಿಲ್ಲ. ಸ್ತಿ ಪ್ರತಿಗಳಿದ್ದಾಗ ಒಂದನ್ನು ಸ್ವೀಕರಿಸಿ ಉಳಿದವನ್ನು ಕೊಡಬೇಕಾದಾಗ, ಬತ್ತರಲ್ಲಿಯೂ ಒಂದೇ ಪಾಠವಿದ್ದಲ್ಲಿ ಒಂಬತ್ತು ಸಂಕೇತಗಳಿಗೆ ಒಂಬತ್ತು ಕಂಸಗಳನ್ನು ಪಯೋಗಿಸಬೇಕಾಗುತ್ತದೆ. ಇದರಿಂದ ಕಾಗದ ವೇಳೆ ಪುಸ್ತಕದ ವೆಚ್ಚ ಚ್ಚುವುದೆಂಬುದನ್ನು ಗಮನಿಸಬೇಕು.

ಒಂದು ಗ್ರಂಥದ ಎರಡು ಪ್ರತಿಗಳು ಪ್ರತಿ ಮರುಪ್ರತಿಗಳಾಗಿ ಕಂಡರೂ ಕೆಲವೆಡೆ ಠವ್ಯತ್ಯಾಸ ಕಂಡುಬಂದು ಅದರಿಂದ ಸಂಪಾದನಾಕಾರ್ಯಕ್ಕೆ ಅನುಕೂಲವಾಗುವಂತಹ ವೇಶಗಳೂ ಉಂಟಾಗುತ್ತವೆ. 'ವೈದ್ಯಕಂದ'ದ ಚಿಕಿತ್ಸಾ ವಿಭಾಗದ ಕಾಗದದ ಪ್ರತಿಯಲ್ಲಿ

ಮಾವಣೆಲೆಯಕಾಯ್ ರಸದೊಳು
ಸೇರಿಸಿ ಘೃತ ನಾಲ್ಕು ನಾಲ್ಕನೆಯ ಧಾರಣೆಗೈ
ದೊಡನಿಡು ವಾರಣದಿಂ
ತುಪ್ಪ ನಿಲಲದು ಕಾಮಲೆಗಂ ೩೧೯

ದಿದ್ದರೆ ಓಲೆಯ ಪ್ರತಿಯಲ್ಲಿ

ಮಾವಣೆಲೆಯ ರಸವ ಸೇರಿ
ಸುವುದು ಘೃತ ನಾಲ್ಕು ಧಾರಣೆ
ಗೈವೋರಣದಿಂ ತುಪ್ಪವುಳಿ
ಯುವ ತೆರ ಕಾಸಿಟ್ಟ ಘೃತದಿ ಕಾಮಾಲೆಹರಂ ೩೧೯

ದಿದೆ. ಎರಡು ಪ್ರತಿಗಳಲ್ಲಿಯೂ ತಪ್ಪು ಉಳಿದಿವೆ. ಅದುದರಿಂದ ಈ ಎರಡೂ ತಿಗಳ ಸಹಾಯದಿಂದ

ಮಾವಣಲೆಯ ರಸವ ಸೇರಿ
[ಸೀವುದು] ಘೃತ ನಾಲ್ಕು [ನಾಲ್ಕು ಭಾಗವ] ಧಾರಣೆ
ಗೈವೋರ [ಣದಿ] ತುಪ್ಪವುಳಿ
ಯುವ ತೆರ ಕಾಸಿಟ್ಟ ಘೃತದಿ ಕಾಮಾಲೆಹರಂ ೩೯

ಎಂದು ತಿದ್ದಿ ಸರಿಪಡಿಸಬಹುದು. ಒಂದು ಪ್ರತಿಯಿಂದ ಮತ್ತೊಂದು ಪ್ರತಿಯಾಗುವಾಗ ಪ್ರತಿಕಾರನೆ ಕೆಲವೆಡೆ ತಿದ್ದಿದ್ದಾನೊ ಏನೊ ಹೇಳಲು ಸಾಧ್ಯವಾಗುವುದಿಲ್ಲ. ಇಲ್ಲಿ ಓಲೆಯಪ್ರತಿ ಮೂಲವಾಗಿದ್ದು ಕಾಗದದ್ದು ಅದರ ಮರುಪ್ರತಿ ಎಂದು ಭಾವಿಸಬಹುದು.

ಹೀಗೆ ಗ್ರಂಥಗಳನ್ನು ಸಂಪಾದಿಸುವಾಗ ಆಯಾಯಾ ಸಂದರ್ಭಕ್ಕನುಸಾರವಾಗಿ ಸೂಚಿಸುವ ಕೆಲವು ಚಿಹ್ನೆಗಳನ್ನು ಸಂಪಾದಕರು ಬಳಸುತ್ತಾರೆ. ಅವುಗಳಲ್ಲಿ

೧. ಮೂಲಪಾಠವನ್ನು ಬದಲಿಸಿ ಸ್ವಂತ ಪಾಠವನ್ನು ಇಲ್ಲವೆ ಹೊಸದಾಗಿ ಸೇರಿಸಿದ ಪಾಠವನ್ನು ಕೊಡುವಾಗ [ ] ಎಂಬ ಚೌಕಕಂಸದಲ್ಲಿ ಕೊಟ್ಟು ಮೂಲಪಾಠವಿದ್ದಲ್ಲಿ ಅದನ್ನು ಪಾಠಾಂತರವಾಗಿ ನಮೂದಿಸಬೇಕು.

೨. ಮೂಲವನ್ನು ತಿದ್ದುವುದು ಸಾಧ್ಯವಿಲ್ಲದಾಗ, ಇಂತಿರಬಹುದೆಂದು ಊಹೆ ಮಾಡಿದ ಪಾಠವನ್ನು ಚೌಕಕಂಸದಲ್ಲಿ ಪ್ರಶ್ನಾರ್ಥಕ ಚಿಹ್ನೆಯೊಡನೆ [ ] ? ಎಂಬಂತೆ ಅಡಿ ಟಿಪ್ಪಣಿಯಲ್ಲಿ ನಮೂದಿಸಬೇಕು.

೩. ಯಾವುದೇ ಒಂದು ಪದ ಪಾದ ಅರ್ಥವಾಗದಿದ್ದಾಗ, ಛಂದಸ್ಸಿನ ದೋಷ ಉಂಟಾದಾಗ ಆ ಪದ ಪಾದ ಅಥವಾ ಒಟ್ಟು ಪದ್ಯಕ್ಕೆ ಪ್ರಶ್ನಾರ್ಥಕ ಚಿಹ್ನೆ (?)ಯನ್ನು ಹಾಕುವುದು ರೂಢಿಯಲ್ಲಿದೆ.

೪. ಮಾತೃಕೆಗಳಲ್ಲಿ ಗ್ರಂಥಪಾತವಾಗಿದ್ದು, ಅದನ್ನು ಸಂಪಾದಕರು ತುಂಬಲು ಸಾಧ್ಯವಾಗದಿದ್ದಲ್ಲಿ ಆ ಭಾಗವನ್ನು ಗುಣಿತದ x x x ಈ ಚಿಹ್ನೆಗಳನ್ನು ಉಪಯೋಗಿಸುವುದುಂಟು. ಇದೇ ಕ್ರಮವನ್ನು ಪಾಠಾಂತರಗಳಿಗೂ ಅನುಸರಿಸಬೇಕು.

೫. ಪಾಠಾಂತರಗಳನ್ನು ನೀಡುವಾಗ ಮೊದಲನೆಯ ಪಾಠಕ್ಕೆ ಸಮಾನಾಂತರವಾಗಿರುವ ಮುಂದಣ ಪಾಠಾಂತರದ ಭಾಗಕ್ಕೆ....... ಈ ಚಿಹ್ನೆಗಳನ್ನು ಉಪಯೋಗಿಸಬಹುದು.

೬. ಒಂದು ಶಬ್ದರೂಪದಿಂದ ಮತ್ತೊಂದು ಶಬ್ದದ ರೂಪವಾಗಿದೆಯೆಂಬುದನ್ನು > ಈ ಚಿಹ್ನೆಯೊಡನೆಯೂ, ಬಂದಿರುವ ಶಬ್ದಕ್ಕೆ ಮತ್ತೊಂದು ಮೂಲವೆಂಬುದನ್ನು ತೋರಿಸಲು < ಈ ಚಿಹ್ನೆಯನ್ನೂ ಬಳಸುತ್ತಾರೆ.

. ಯಾವುದಾದರೂ ಭಾಗವನ್ನು ಪ್ರಕ್ಷಿಪ್ತವೆಂದು ತೀರ್ಮಾನಿಸಿದರೆ, ಅವು ಕೆಲವೇ ಸಾಲುಗಳಾಗಿದ್ದರೆ ಅಡಿಟಿಪ್ಪಣಿಯಲ್ಲಿಯೂ, ಹೆಚ್ಚು ಭಾಗವಿದ್ದಲ್ಲಿ ಗ್ರಂಥದ ಕೊನೆಯಲ್ಲಿ ಪರಿಶಿಷ್ಟವಾಗಿಯೂ, ಕೊಡುವುದುಂಟು. ಇದನ್ನು ಆಯಾ ಸ್ಥಳದಲ್ಲಿ ಸೂಕ್ತ ಚಿಹ್ನೆಯೊಡನೆ, ಎಂದರೆ ಕಠಾರಿ † ಚಿಹ್ನೆಯಿಂದ ಗುರುತಿಸುವುದುಂಟು. ಇದಕ್ಕೆ ಬದಲಾಗಿ ನಕ್ಷತ್ರ ಮತ್ತಿತರ ಚಿಹ್ನೆಗಳನ್ನೂ ಬಳಸಿರುವುದನ್ನು ಕಾಣಬಹುದು. ಇಂತಹ ಭಾಗಗಳು ಒಂದೇ ಪುಟದಲ್ಲಿ ಒಂದಕ್ಕಿಂತ ಹೆಚ್ಚಿದ್ದರೆ ಸಂದರ್ಭಕ್ಕೆ ತಕ್ಕಂತೆ ಹೆಚ್ಚು ಹೆಚ್ಚು ಚಿಹ್ನೆಗಳನ್ನು ಬಳಸಬೇಕಾಗುತ್ತದೆ.

ಪ್ರೊ. ತೀ.ನಂ. ಶ್ರೀಕಂಠಯ್ಯನವರು ತಮ್ಮ ಸಂಪಾದಿತ ಗ್ರಂಥಗಳಲ್ಲಿ ಯೋಗಿಸಿರುವ ಮತ್ತೆರಡು ಚಿಹ್ನೆಗಳನ್ನು ಪ್ರೊ. ಡಿ.ಎಲ್. ನರಸಿಂಹಾಚಾರ್ಯರು ರಿಸಿದ್ದಾರೆ.[1] ಅವೆಂದರೆ.

. ಸಮಾಸಗಳ ಒಂದು ಭಾಗವನ್ನು ಪ್ರತ್ಯೇಕಿಸಿ ಟಿಪ್ಪಣಿಗಳಲ್ಲಿ ಉದ್ಧರಿಸುವುದನ್ನು ತೋರಿಸುವ ಚಿಹ್ನೆ : O

. ಎರಡು ಅಥವಾ ಹಲವು ಮಾತೃಕೆಗಳ ಪಾಠಾಂತರಗಳಿರುವ ಅಲ್ಪಭೇದವನ್ನು ಗಮನಿಸಿಲ್ಲ ಎಂಬುದನ್ನು ತೋರಿಸುವ ಚಿಹ್ನೆ : ∴

ಂಪಾದಿತ ಗ್ರಂಥಗಳಲ್ಲಿ ಉಪಯೋಗಿಸುವ ಈ ಚಿಹ್ನೆಗಳು ಸೀಮಿತ ತಿಯಲ್ಲಿರುವುದರಿಂದ ಇವುಗಳನ್ನು ಸುಲಭವಾಗಿ ಎಲ್ಲರೂ ಬಳಸಬಹುದಾಗಿದೆ. ೊನೆಯದಾಗಿ ಸಂಪಾದಿತ ಗ್ರಂಥಕ್ಕೆ ಆಯಾ ಗ್ರಂಥವಿಷಯವನ್ನನುಸರಿಸಿ ಕೋಶ, ಪಾರಿಭಾಷಿಕ ಪದಕೋಶ, ಪದ್ಯಗಳ ಅಕಾರಾದಿ, ಅಂಕಿತನಾಮಗಳ ಪಟ್ಟಿ ಲಾದುವನ್ನು ಒದಗಿಸುವುದಲ್ಲದೆ ಕವಿ ಕಾವ್ಯಗಳ ಅಥವಾ ಕೃತಿ ಕರ್ತೃಗಳ ುವನ್ನೂ, ಕಥಾಸಾರ ಗ್ರಂಥವಿಮರ್ಶೆ ಮೊದಲಾದುವುಗಳನ್ನೂ ಓದುಗರಿಗೆ ಗ್ರಂಥದ ಪೂರ್ಣ ತಿಳುವಳಿಕೆ ಮೂಡುವಂತೆ ಒದಗಿಸಬೇಕಾದುದು ಅವಶ್ಯಕ. ಯೋಗಿಸಿದ ಹಸ್ತಪ್ರತಿಗಳ ವಿವರವನ್ನು ಒದಗಿಸುವುದು ಎಲ್ಲಕ್ಕಿಂತ ಮುಖ್ಯ ವಾಗಿದೆ. ಪ್ರತಿಗಳು ದೊರೆತ ಸ್ಥಳ, ಅವುಗಳ ಶುದ್ಧಾಶುದ್ಧತೆ, ಏ ಟ ಮೊದಲಾದವುಗಳ ಯೋಗ, ಪ್ರತಿಗಳ ಪೀಳಿಗೆ ಮೊದಲಾದುವುನ್ನು ನೀಡುವುದು ಅತ್ಯಗತ್ಯ. ಅದರಿಂದ ೆ ಈ ಕೆಲಸ ಮುಂದುವರಿಸುವವರಿಗೆ ಅನುಕೂಲವಾಗುತ್ತದೆ. ಯಾವುದೇ ಒಂದು

. ಕನ್ನಡ ಗ್ರಂಥ ಸಂಪಾದನೆ ಪು. ೨೧೫

ಗ್ರಂಥವನ್ನು ಒಂದು ಸಲ ಸಂಪಾದಿಸಿ ಪ್ರಕಟಿಸಿದರೆ ಸಾಲದು ; ಅದು ಮತ್ತೆ ಮತ್ತೆ ಅದರ ಉಪಯುಕ್ತತೆಯ ಮೇಲೆ ಮುದ್ರಣವಾಗಬೇಕಾಗುತ್ತದೆ; ಮರುಪರಿಶೀಲನೆ ನಡೆಯಬೇಕಾಗುತ್ತದೆ. ಉಪಯೋಗಿಸಿರುವ ಹಸ್ತಪ್ರತಿಗಳ ವಿವರವಿರುವುದರಿಂದ ಹೊಸ ಪ್ರತಿಗಳೇನಾದರೂ ದೊರೆತಲ್ಲಿ ಅದನ್ನು ಗುರುತಿಸಲು ಸಾಧ್ಯವಾಗುತ್ತದೆ. ಇಲ್ಲವೆ ಯಾವುದಾದರೂ ಸಮಸ್ಯೆಯಿದ್ದರೆ ಅದನ್ನು ಬಿಡಿಸಲು ಉಪಯೋಗಿಸಿದ ಹಸ್ತಪ್ರತಿಗಳನ್ನು ಮತ್ತೊಬ್ಬರು ಪರಿಶೀಲಿಸಲು ಸಹಾಯವಾಗುತ್ತದೆ.

ಹಸ್ತಪ್ರತಿಯ ವಿವರವನ್ನು ನೀಡುವಾಗ ಪತ್ರ ಅಥವಾ ಪುಟಸಂಖ್ಯೆ, ಓಲೆ ಕಾಗದ ಅಥವಾ ಮತ್ತಾವುದೇ ವಸ್ತು, ಬರೆದಿರುವ ಸಾಲುಗಳು, ಸಾಲಿನಲ್ಲಿನ ಅಕ್ಷರಗಳು, ಲುಪ್ತ ಅಥವಾ ಮುರಿದ ಪತ್ರಗಳ ವಿವರ, ಬರವಣಿಗೆಯ ಸ್ವರೂಪ ಮೊದಲಾದೆಲ್ಲ ವಿವರಗಳನ್ನು ಅಗತ್ಯವಾಗಿ ನೀಡಬೇಕು. ಪತ್ರ ಪಂಕ್ತಿ ಅಕ್ಷರಸಂಖ್ಯೆಯನ್ನು ನೀಡುವುದರಿಂದ ಗ್ರಂಥ ಸಂಖ್ಯೆಯನ್ನು ನಿರ್ಧರಿಸಿ ಗ್ರಂಥದ ಬಾಹುಳ್ಯವನ್ನು ತಿಳಿಯಬಹುದು. ಕೆಲವು ಗ್ರಂಥಗಳಿಗೆ ಗ್ರಂಥಸಂಖ್ಯೆಯನ್ನು ಕೊಟ್ಟಿರುವುದನ್ನು 'ರಾಜಾವಳಿ ಕಥಾಸಾರ'ದಲ್ಲಿ ಬರುವ "ಉಪರಿಮ ನಿಬಂಧನಾದ್ಯಧಿಕಾರಮಷ್ಟಾದಶದೆಪ್ಪತ್ತೆರಡು ಸಾಸಿರ ಗ್ರಂಥರಚನಾ ಪ್ರಾಕೃತ ಸಂಸ್ಕೃತ ಮಿಶ್ರಟೀಕು ಬರೆದು 'ಧವಲ'ಮೆಂದು" (ಪು. ೧೫೧) "ತ್ರಿಷಷ್ಟಿ ಲಕ್ಷಣ ಮಹಾಪುರಾಣಂ ದ್ವಾದಶ ಸಹಸ್ರ ಗ್ರಂಥಪ್ರಮಾಣದಿಂದ ರಚಿಸಲೆಂದು" (ಪು. ೧೫೨)[1] ಮೊದಲಾದ ಹೇಳಿಕೆಗಳಲ್ಲಿ ಗಮನಿಸಬಹುದು.

ಈ ಗ್ರಂಥಸಂಖ್ಯೆಯನ್ನು ತಿಳಿಯುವುದು ಹೇಗೆಂಬ ಬಗೆಗೆ ಕೆಲವರಿಗೆ ಅರಿವಿರಲಾರದು. ಪತ್ರ ಅಥವಾ ಪುಟಸಂಖ್ಯೆ x ಪಂಕ್ತಿಗಳು x ಅಕ್ಷರಗಳು ÷ ೧೬ ಅಥವಾ ೩೨= ಗ್ರಂಥಸಂಖ್ಯೆ. ಇದನ್ನು ಒಂದು ಉದಾಹರಣೆಯ ಮೂಲಕ ತೋರಿಸಬಹುದು. ಒಂದು ಗ್ರಂಥದಲ್ಲಿ ೧೦೦ ಓಲೆಗಳಿದ್ದು, ಪತ್ರದ ಒಂದು ಪಕ್ಕದಲ್ಲಿ ಸರಾಸರಿ ೧೦ ಸಾಲುಗಳೂ, ಒಂದು ಸಾಲಿನಲ್ಲಿ ಸರಾಸರಿ ೪೫ ಅಕ್ಷರಗಳೂ ಇವೆ ಎಂದಿಟ್ಟುಕೊಂಡರೆ, ೧೦೦x೧೦x೪೫ = ೪೫,೦೦೦ ಆಗುತ್ತದೆ. ಪತ್ರದ ಒಂದು ಪಕ್ಕದಲ್ಲಿ ಮಾತ್ರ ಪತ್ರಸಂಖ್ಯೆಯಿಂದ್ದು ಎರಡೂ ಪಕ್ಕಗಳಲ್ಲಿ ಬರವಣಿಗೆಯಿದ್ದರೆ ೪೫,೦೦೦x೨=೯೦,೦೦೦ ಆಗುತ್ತದೆ. ೩೨ ಅಕ್ಷರಗಳಿಗೆ ಒಂದು ಗ್ರಂಥಸಂಖ್ಯೆಯಾದುದರಿಂದ ೯೦,೦೦೦ವನ್ನು ೩೨ರಿಂದ ಇಲ್ಲವೆ,

1. ರಾಜಾವಳಿ ಕಥಾಸಾರ :ಸಂ. ಬಿ.ಎಸ್. ಸಣ್ಣಯ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ೧೯೮೮.

ು ವನ್ನು ೧೬ರಿಂದ ಭಾಗಿಸಬಹುದು. ಆಗ ೨೮೧೨ ಅಥವಾ ೨೮೦೦
ಖ್ಯೆಯಾಗುತ್ತದೆ. ಪತ್ರದ ಒಂದು ಕಡೆ ಮಾತ್ರ ಬರವಣಿಗೆಯಿದ್ದಲ್ಲಿ ಅಥವಾ
ಡೆ ಬರವಣಿಗೆಯಿದ್ದು ಪುಟಸಂಖ್ಯೆಯಿದ್ದಲ್ಲಿ ೩೨ ರಿಂದಲೇ ಭಾಗಿಸಬೇಕಾಗುತ್ತದೆ.
ಾದಕರು ಯಾರೇ ಆಗಲಿ ಇದುವರೆಗೆ ಹಸ್ತಪ್ರತಿಯಲ್ಲಿಯೇ ಉಳಿದಿರುವ ಕೃತಿಗಳ
ುನ ಹರಿಸಬೇಕು. ದೊರೆಯುವ ಪ್ರತಿ ಶುದ್ಧವಿರಬಹುದು ಇಲ್ಲದಿರಬಹುದು,
ತಿಯಾಗಿರಬಹುದು; ದೊರೆತ ಹೆಚ್ಚು ಪ್ರತಿಗಳೆಲ್ಲವರಿಂದಲೂ ಸಂಪಾದನಾ
ಷ್ಟವಾಗಬಹುದು. ಇಂತಹವನ್ನು ಅರೆಕೊರೆಗಳುಳಿಯುತ್ತವೆಂದಾಗಲಿ ಸರಿಯಾದ
ಡಲು ಸಾಧ್ಯವಿಲ್ಲವೆಂದಾಗಲಿ ಬಿಟ್ಟಿರುವುದು ಸಾಧುವಲ್ಲ. ದೊರೆತ ಒಂದು
ೇ ಉಪಯೋಗಿಸಿ 'ಕರ್ಣಾಟಕ ಕಾದಂಬರಿ' ಸಂಪಾದನಾಕಾರ್ಯವನ್ನು ಕೈಗೊಂಡು
ಯಾದ ಬಿ. ಮಲ್ಲಪ್ಪನವರು ಈಗ ನೆನೆಯುವವರು ಹಲವರಿದ್ದಾರೆ. ಎಸ್.ಜಿ.
ಾಚಾರ್ಯ, ರಾಮಾನುಜಯ್ಯಂಗಾರ್, ಫ.ಗು. ಹಳಕಟ್ಟಿ ಮುಂತಾದವರು ನಮ್ಮ
ದ್ದಾರೆ. ಪಂಡಿತ ಎಚ್. ಶೇಷಯ್ಯಂಗಾರ್ ಅವರು ಮದರಾಸಿನಿಂದ ಅಪೂರ್ವವಾದ
ಂಥಗಳು ಪ್ರಕಟವಾಗಲು ಕಾರಣರಾದುದನ್ನು ನೆನಪಿನಲ್ಲಿಟ್ಟಿದ್ದೇವೆ. ಕಳಲೆ
ಜೇಂದ್ರನ 'ಸಕಲವೈದ್ಯ ಸಂಹಿತಾಸಾರಾರ್ಣವ'ದ ಮೊದಲ ಸಂಪುಟ
ಲ್ಲಿಯೇ ಪ್ರಕಟವಾಗಿ, ಅದರ ಮರುಮುದ್ರಣವಾದರೂ ಎರಡನೆಯ ಸಂಪುಟ
ಾಗದಿದ್ದುದು ಹಸ್ತಪ್ರತಿಯ ಕಠಿಣಸ್ವರೂಪದಿಂದ, ಇದರ ಪ್ರಕಟಣೆಗೆ
ವರೆಗೂ ಕಾಯಬೇಕಾಯಿತು. ಬಂಧುವರ್ಮನ 'ಹರಿವಂಶಾಭ್ಯುದಯ'ದ ಏಕೈಕ
ಸಂಸ್ಥೆಯ ಆನೆಯ ಹಸ್ತಪ್ರತಿಯಾಗಿ ಬಂದರೂ ಅದರ ಬಿಡುಗಡೆ ೧೯೬೩ರ
ಾಧ್ಯವಾಗದಾಯಿತು. ಜಗದ್ದಳ ಸೋಮನಾಥನ 'ಕರ್ಣಾಟಕ ಕಲ್ಯಾಣಕಾರಕ'ವೆಂಬ
ಥವು ಅತ್ಯಂತ ಕಠಿನಪರಿಸ್ಥಿತಿಯನ್ನೆದುರಿಸಿ ಸಂಪಾದಿತವಾಗಿ ಪ್ರಕಟಣೆಗಾಗಿ ಇನ್ನೂ
ಲೇ ಇದೆ. ನೀತಿಯುತವಾದ ಅಪಾರವಾಗಿ ಕಂಡುಬರುವ 'ಶತಕ ಸಾಹಿತ್ಯ'ದ
ಗ ಇನ್ನೂ ಅಪ್ರಕಟಿತವಾಗಿಯೇ ಉಳಿದಿದೆ. ಕನ್ನಡ ಟೀಕನ್ನೊಳಗೊಂಡ ಸಂಸ್ಕೃ
ದ್ಯಗ್ರಂಥಗಳೇ ಮೊದಲಾದುವು ಸಂಪಾದನೆಗಾಗಿ ಕಾಯುತ್ತಲೇ ಇವೆ. ನಿಷ್ಠಾವಂತ
ರಿದ್ದರೂ ಅವರ ಬಗೆಗೆ ಹಿರಿಯ ಅಧಿಕಾರಿಗಳು ತೋರಿಸುವ ಅನಾದರ ಮತ್ತು
ಯೂ, ಧನಸಹಾಯದ ಅಭಾವವೂ ಮೂಲಕಾರಣವಾಗಿ ಈ ಕೆಲಸ
ಾಗಿರುವುದು ವಿಷಾದನೀಯ. ಈ ತೊಡಕುಗಳು ಆದಷ್ಟು ಬೇಗ ನಿವಾರಣೆಯಾಗಿ
ತ ಗ್ರಂಥಗಳು ಬೇಗೆ ಅಚ್ಚಾಗಿ ಹೊರಬರಲೆಂದು ಆಶಿಸೋಣ.

ಕೇಂದ್ರ ಹಸ್ತಪ್ರತಿಭಂಡಾರ


ಹೀಗೆ ಪ್ರಾಚೀನ ಗ್ರಂಥಗಳ ಸಂಪಾದನಾಕಾರ್ಯಕ್ಕೆ ಅನುಕೂಲವಾಗಿ ವಿದ್ವಾಂಸರಿಗೆ ಬೇಕಾದ ಹಸ್ತಪ್ರತಿಗಳು ಸುಲಭವಾಗಿ ದೊರೆಯುವಂತಿರಬೇಕಾದುದು ಅತ್ಯಂತ ಅವಶ್ಯಕ. ಇದು ಸಾಧ್ಯವಾಗಬೇಕಾದರೆ ಕೇಂದ್ರ ಹಸ್ತಪ್ರತಿಭಂಡಾರವೊಂದು ರೂಪುಗೊಳ್ಳುವುದು ಅನಿವಾರ್ಯವಾಗಿದೆ.

ಅನೂಚಾನವಾಗಿ ಹಲವಾರು ಶತಮಾನಗಳಿಂದ ಪ್ರತಿಗಳಾಗಿ ಮರುಪ್ರತಿಗಳಾಗಿ ಬಂದ ಹಸ್ತಪ್ರತಿಗಳೆಲ್ಲವೂ ನಮಗೆ ಈಗ ದೊರೆತಿಲ್ಲ. ಆದರೆ ದೊರೆತ ಹಸ್ತಪ್ರತಿಗಳು ವಿವಿಧೆಡೆಗಳಲ್ಲಿ ಸಂಗ್ರಹವಾಗಿ, ಕೆಲವು ಉಪಯೋಗವಾದರೆ ಮತ್ತೆ ಕೆಲವು ಮೂಲೆಗುಂಪಾಗಿ ಹಾಳಾಗಿಹೋಗಿರುವುದುಂಟು. ಈಗ ದೊರೆಯುವಷ್ಟನ್ನಾದರೂ ಸಂಗ್ರಹಿಸಿ ಸಂರಕ್ಷಿಸಬೇಕೆಂಬ ಬಯಕೆಯಿಂದ ಹಲವು ಸಂಸ್ಥೆಗಳು ಕೆಲಸಮಾಡುತ್ತಿವೆ. ಇವು ಈ ಕೆಲಸವನ್ನು ಹೆಚ್ಚು ಕಡಮೆ ಒಂದು ಶತಮಾನದಿಂದ ಮಾಡಿದರೂ ಎಲ್ಲ ಹಸ್ತಪ್ರತಿಗಳ ಸಂಗ್ರಹ ಬಯಸುವವರೆಲ್ಲರ ಕೈಗೆ ದೊರಕುವಂತೆ ಮಾಡುವುದು ಸಾಧ್ಯವಾಗಿಲ್ಲದಿರುವುದು ತುಂಬಾ ವಿಷಾದನೀಯ. ಈ ದಿಸೆಯಲ್ಲಿ ಹಲವರು ಮಹನೀಯರು ತಮ್ಮ ಆಸಕ್ತಿ ಅಭಿರುಚಿಗಳಿಂದ ದುಡಿದರೂ ಸಾಕಷ್ಟು ಯಶಸ್ಸನ್ನು ಗಳಿಸದಾದರು. ಏಕೆಂದರೆ ಯಾರೇ ಒಬ್ಬ ವ್ಯಕ್ತಿ ಅಥವಾ ಸಂಸ್ಥೆ ಒಂದು ಕಾಲದಲ್ಲಿ ಮಾಡಿದಂತಹ ಕೆಲಸವನ್ನು ಆನಂತರ ಬಂದವರು ಅದೇ ಆಸಕ್ತಿಯಿಂದ ಮುಂದುವರಿಸದಿರುವುದು ಒಂದು ಕಾರಣವಾದರೆ, ಸಾಕಷ್ಟು ಹಣ, ಸರಿಯಾದ ಸಾಧನಗಳು, ತಕ್ಕಂತಹ ಯೋಜನೆಗಳು ದೊರೆಯದೆ ಹೋಗಿರುವುದು ಮತ್ತೊಂದು ಕಾರಣವಾಗಿದೆ. ಈ ಎಲ್ಲಕ್ಕಿಂತ ಮಿಗಿಲಾಗಿ ಹಣವನ್ನೊದಗಿಸುವವರ ಈ ಬಗೆಗಿನ ಅನಾಸಕ್ತಿ ಮುಖ್ಯ ಕಾರಣವೆನ್ನದೆ ವಿಧಿಯಿಲ್ಲ. ಈ ಬಗೆಗಿನ ಯಾವುದೇ ಯೋಜನೆಯನ್ನು ಮುಂದಿಟ್ಟರೂ ಇದಕ್ಕೆ ಒಪ್ಪಿಗೆ ಕೊಡುವಂತಹ ಅಧಿಕಾರಿಗಳು ಯಾವ ತಿಳುವಳಿಕೆಯೂ ಇಲ್ಲದೆ, ತಿಳಿದವರನ್ನು ಕೇಳುವ ಗೋಜಿಗೇ ಹೋಗದೆ ತಳ್ಳಿಹಾಕುವಂತಹ ಕಾರ್ಯ ನಡೆಯುತ್ತಿರುವುದರಿಂದ ಇಂತಹ ಪರಿಸ್ಥಿತಿ ಉಂಟಾಗಿದೆ. ಈ ಎಲ್ಲ ಕಾರಣಗಳಿದ್ದರೂ ಸಾಕಷ್ಟುಮಟ್ಟಿಗೆ ಈ ದಿಸೆಯಲ್ಲಿ ಕಾರ್ಯಸಾಧನೆ ಮಾಡಿರುವ ಕೆಲವು


ವೆ. ಅವುಗಳು ಬೇರೆ ಬೇರೆ ಸ್ಥಳಗಳಲ್ಲಿ ಹಸ್ತಪ್ರತಿಗಳನ್ನು ಕೂಡಿಟ್ಟಿವೆ. ಆದರೆ ಉಪಯೋಗ ಎಲ್ಲ ವಿದ್ವಾಂಸರಿಗೆ ಒದಗುವುದು ಮಾತ್ರ ದುಸ್ತರವಾಗಿಯೇ . ಧಾರವಾಡದಲ್ಲಿನ ಒಬ್ಬರು ಮೂಡಬಿದರೆಯಲ್ಲಿರುವ ಪ್ರತಿಯನ್ನು ೇಕೆಂದರೆ ಅದು ಪ್ರಯಾಸದ ಮಾತೇ ಆಗುತ್ತದೆ. ಈ ಸಂಗ್ರಹ ಕರ್ನಾಟಕಕ್ಕೆ ಮಿತವಾಗಿರದೆ ಇಡೀ ಭಾರತ, ಅಷ್ಟೇಕೆ ಲಂಡನ್ನಿಗೂ ವ್ಯಾಪಿಸಿರುವುದು ಮತ್ತೂ ಗಿದೆ.

ಪ್ರತಿಗಳ ಸಂಗ್ರಹ ಮಾಡುವಾಗ ಭಾಷೆಯ ವಿಷಯದ ಯಾವ ತಾರತಮ್ಯವೂ ಟ್ಟಿನಲ್ಲಿ ಸಂಗ್ರಹವಾಗಿರುವುದರಿಂದ ಕೆಲವಡೆ ಕನ್ನಡ ಹಸ್ತಪ್ರತಿಗಳನ್ನು ಗಟ್ಟಲೆ ತೆರೆದು ನೋಡುವವರೂ ಇಲ್ಲದೆ, ಸಂಗ್ರಹವಾದಾಗ ಇದ್ದವರ ಆಸ್ಥೆ ು ಕ್ರಮೇಣ ಬಂದವರಲ್ಲಿ ಇಲ್ಲದೆ ಅವು ಇಟ್ಟೆಡೆಯಲ್ಲಿಯೇ ನಶಿಸಿ ವುದನ್ನು ನಾನು ನೋಡಿದ್ದೇನೆ. ಇಂತಹ ಎಲ್ಲ ಹಸ್ತಪ್ರತಿಗಳನ್ನೂ ಉಳಿಸಿ ೕಗಕ್ಕೆ ಬರುವಂತೆ ಮಾಡುವ ಕಾರ್ಯವನ್ನು ಈಗಲಾದರೂ ಕೈಗೊಂಡರೆ ಮೇಲು. ರೆಯುವಷ್ಟನ್ನೂ ಒಂದೆಡೆ ಸೇರಿಸಿ ಕೇಂದ್ರ ಹಸ್ತಪ್ರತಿಭಂಡಾರವನ್ನು ಮಾಡುವುದು ತ್ಯವೂ ಯೋಗ್ಯವೂ ಆಗಿದೆ ಎಂಬುದನ್ನು ಈ ದಿಸೆಯಲ್ಲಿ ಯೋಚಿಸುವ ಒಪ್ಪುವುದರಲ್ಲಿ ಸಂಶಯವಿಲ್ಲ. ಈ ಹಸ್ತಪ್ರತಿಭಂಡಾರದಲ್ಲಿ ಕೈಫಿಯತ್ತುಗಳು ಳು ಶಾಸನಗಳು (ಹಸ್ತಪ್ರತಿಗಳಲ್ಲಿ) ಮೊದಲಾದುವೂ ಸೇರಿರುತ್ತವೆ. ಒಟ್ಟಿನಲ್ಲಿ ಾದರೆ ಕನ್ನಡ ಭಾಷೆಯ ಎಲ್ಲ ರೀತಿಯ ಹಸ್ತಪ್ರತಿಗಳ ಸಂಗ್ರಹ ಆಗಬೇಕು. ಕೇಂದ್ರ ಹಸ್ತಪ್ರತಿ ಭಂಡಾರವೊಂದಿದ್ದರೆ ಎಲ್ಲೆಲ್ಲಿಯೊ ಸಂಗ್ರಹವಾಗಿ ್ತರುವ ಹಸ್ತಪ್ರತಿಗಳ ರಕ್ಷಣೆಯಾದಂತಾಗುತ್ತದೆ; ಯಾವುದೇ ಹಸ್ತಪ್ರತಿಯನ್ನು ವ್ಯಕ್ತಿ ಬಯಸಿದರೆ ನೇರವಾಗಿ ಬಂದು ಅದರ ಸಹಾಯ ಪಡೆಯಬಹುದು; ೖಕ್ರೊಫಿಲಂ ಅಥವಾ ಫೋಟೋಸ್ಟ್ಯಾಟ್ ರೂಪದಲ್ಲಿ ತರಿಸಿಕೊಳ್ಳಬಹುದು.


ೀಟಕದಲ್ಲಿ ಇಂತಹ ಕೇಂದ್ರ ಹಸ್ತಪ್ರತಿಭಂಡಾರ ಸ್ಥಾಪಿತವಾದರೆ ಅದು ನಿಜಕ್ಕೂ ರ ಹೆಮ್ಮೆಯ ಕೇಂದ್ರವಾಗಿ, ಅನೇಕ ವಿದ್ವಾಂಸರ ಕಣ್ಮಣಿಯಾಗಿ ವುದರಲ್ಲಿ ಸಂಶಯವಿಲ್ಲ. ಇದಕ್ಕೆ ಬೇಕಾದುದು ಧನಸಹಾಯ, ದುಡಿಯುವ . ಇಷ್ಟಾದರೆ ಈ ಕನಸಿನ ಲೋಕ ವಾಸ್ತವವಾಗಿ ಕನ್ನಡಿಗರ ಉಪಯೋಗಕ್ಕೆ ಾಗುವುದು ಬಹುದೂರವಿಲ್ಲ.




೧. ಗೊಮ್ಮಟಸಾರ (ಶಕ ೧೪೭೪ರ ಓಲೆಪ್ರತಿ, ಆಗಮದರ್ಶನ ಹಸ್ತಪ್ರತಿ ಭಂಡಾರ, ಶ್ರವಣಬೆಳಗೊಳ)




೨. ಗೊಮ್ಮಟಸಾರ




೩. ಗೊಮ್ಮಟಸಾರ



೪. ಗೊಮ್ಮಟಸಾರ




ಮಹಾವಿರಾಚಾರ್ಯರ ಛತ್ತೀಸಗಣಿತ (ಶಕ ೧೩೮೦ರ ಓಲೆ ಪ್ರತಿ,
ಆಗಮದರ್ಶನ ಹಸ್ತಪ್ರತಿ ಭಂಡಾರ, ಶ್ರವಣಬೆಳಗೊಳ)



೧. ದಾನಸಾರ : (ಶಕ ೧೬೫೭ರ ಓಲೆಪ್ರತಿ, ಆಗಮದರ್ಶನ ಹಸ್ತಪ್ರತಿ ಭಂಡಾರ, ಶ್ರವಣಬೆಳಗೊಳ)



೨. ದಾಸಸಾರ


ಕಲಾಕಾಮುರುಮುಖವೃಷಭಾದಾಮುನೀಯಾಚಕಜನಚಿಂತಾಮುನಿ।
ಮಿಥ್ಯಾತ್ವತಿಮಿರದ್ಯುಮುನೀಆರಿರಾಯಪಂನಿಗಗಾರುಡಮುನಿ।
ಕ್ಷತ್ರಿಯಕುಲಮಂಡನಮುನಿ।ಜಿನನಖಚಂದ್ರಕಕಿರಾಂತಮುನಿ
ಮಘದನಾಯಕಶ್ರೀನೀಕಮಾಪಾಮಂಡಲಿಶ್ವರಪ್ರಸನ್ನಾನಂತರನಿ
ರೂಪಿಸಲ್ಪಟ್ಟಶ್ರೀಶಾಂತಿಶ್ವರಪುರಾಣಾಚರಿತೆಯೊಗುಧಿವನನಿಷ್ಟಾ
ನಾಕಲ್ಯಾಣಾಸಂಸಮಾಪ್ತಆಸಂದಿಕಪದ॥೧೦೧॥ಅಂತುಸಂಧಿ೧೧
ಕಂಪಧನು೧೭೫೩॥ಕಂಮಂಗಲಮಪಾ।ಖಾಯಾತ॥ಧರನಿಮ
ಲಿಬಾಪಾನಕಾಲಸಂದಾಂದುಸಾವಿರದಮೊನನುರದಪುತ್ತನಿಯ।
೧೭೧೦॥ಪ್ಲವಂಗನಾಮಸಂವತ್ಸರದಅಶ್ವಿಜಮಾಸಾದಕೃಷ್ಣಪಕ್ಷ
ದ।ಬಿದಿನಿಕುರುವಾರ।ಖರನಿನಕ್ಷತ್ರದಲ್ಲಿ।ಸುಖಲಗ್ನದಾಗು॥
ಆದಿಪುರಾಣ।ಪಾರಿಶ್ವನಾಥನಪುರಣ।ಶಾಂತಿಶ್ವರನಪುರಾಣ
ಸಮಾಪ್ತಮಂಗಲಮಪಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ

ಶಾಂತೀಶ್ವರ ಚರಿತೆ (ಶಕ ೧೭೧೦ರ ಕಾಗದದ ಪ್ರತಿ, ಆಗಮದರ್ಶನ ಹಸ್ತಪ್ರತಿ ಭಂಡಾರ
ಶ್ರವಣಬೆಳಗೊಳ)

ಸಹಾಯಕ ಗ್ರಂಥಸೂಚಿ

1. ಕನ್ನಡ ಗ್ರಂಥ ಸಂಪಾದನೆ : ಡಾ|| ಡಿ.ಎಲ್. ನರಸಿಂಹಾಚಾರ್, ಶಾರದಾಮಂದಿರ, ಮೈಸೂರು, ೧೯೭೦
2. ಕನ್ನಡ ಗ್ರಂಥಸಂಪಾದನ ಶಾಸ್ತ್ರ : ಡಾ. ಎಂ.ಎಂ. ಕಲಬುರ್ಗಿ, ಸಿರಿಗನ್ನಡ ಪ್ರಕಾಶನ, ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ -೩, ೧೯೭೭
3. ಗ್ರಂಥ ಸಂಪಾದನಾಶಾಸ್ತ್ರ ಪರಿಚಯ : ಸೀತಾರಾಮ ಜಾಗೀರ್‌ದಾರ್, ಕನ್ನಡ ಸಾಹಿತ್ಯ ಸಂಘ, ರಂಗಂಪೇಟೆ (ಸುರಪುರ) ೧೯೭೯
4. ಹಸ್ತಪ್ರತಿ ಶಾಸ್ತ್ರ : ಸಂ. ಪ್ರೊ. ಎಂ.ವಿ. ಸೀತಾರಾಮಯ್ಯ ಮತ್ತು ಡಾ||ಎಂ. ಚಿದಾನಂದಮೂರ್ತಿ
5. ಹಳೆಯ ಹೊನ್ನು : ಡಾ|| ಟಿ.ವಿ. ವೆಂಕಟಾಚಲ ಶಾಸ್ತ್ರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ೧೯೯೧
6. ಕರ್ನಾಟಕ ಶಾಸನಗಳ ಸಮೀಕ್ಷೆ : ಕೊ.ವೈ. ರಮೇಶ, ಬೆಂಗಳೂರು ೧೯೭೧
7. ಕನ್ನಡ ಹಸ್ತಪ್ರತಿಗಳ ಇತಿಹಾಸ : ಎಚ್. ದೇವೀರಪ್ಪ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೭೭
8. ಗ್ರಂಥಸಂರಕ್ಷಣೆ : ಬಿ.ಎಸ್. ಸಣ್ಣಯ್ಯ, ಪ್ರಸಾರಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೭೧
9. ನೇಮಿನಾಥಪುರಾಣಂ : ನೇಮಿಚಂದ್ರ ಸಂ. ಬಿ.ಎಸ್. ಸಣ್ಣಯ್ಯ, ಸಾಧನ ಸಾಹಿತ್ಯ ಮಂದಿರ, ಮೈಸೂರು ೧೯೬೧
10. ರಾಜಾವಳಿ ಕಥಾಸಾರ : ಸಂ. ಬಿ.ಎಸ್. ಸಣ್ಣಯ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ೧೯೮೮

11. ಜೀವಸಂಬೋಧನಂ : ಬಂಧುವರ್ಮ ಸಂ. ಪಂಡಿತ ಎಚ್. ಶೇಷಅಯ್ಯಂಗಾರ್ ಗೌ, ಓ, ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ, ಮದರಾಸು ೧೯೫೫.

12. ಕನ್ನಡ ಹಸ್ತಪ್ರತಿಗಳ ಮೈಕ್ರೊಫಿಲಂ ಸೂಚಿ : ಸಂ. ಬಿ.ಎಸ್. ಸಣ್ಣಯ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ೧೯೮೮

13. ಸಾಹಸಭೀಮ ವಿಜಯ : ಸಂ. ಬಿ.ಎಸ್. ಸಣ್ಣಯ್ಯ ಮತ್ತು ರಾಮೇಗೌಡ ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೮೫

14. ಕರ್ಣಾಟಕ ಭಾರತಿ : ಸಂ. ೧-೧೨, ೧೬-೧,೨

15. ಪ್ರಬುದ್ಧ ಕರ್ಣಾಟಕ : ೩೧-೨


16. Alberuni's India Ed. by Edward C. Sachan.

17. The Book of India : Ed. by B.S. Keshavan. National Book Trust, New Delhi 1986.

18. Indian Archives Vol. I. 1947

19. New York Times : Book-Review January 1933

20. Study of Manuscripts by Chinthaharan Chakravarti.



ಬಿ.ಎಸ್. ಸಣ್ಣಯ್ಯ ಅವರ ಸ್ಥಳ ಪಿರಿಯಾಪಟ್ಟಣ ತಾಲ್ಲೂಕು ಭೋಗನಹಳ್ಳಿ. ೧೯೨೮ರಲ್ಲಿ ಜನಿಸಿದ ಇವರು ಕನ್ನಡ ಸಾಹಿತ್ಯದಲ್ಲಿ ಮೊದಲಿನಿಂದಲೂ ಆಸಕ್ತಿ ಹೊಂದಿದ್ದು ೧೯೫೫ರಲ್ಲಿ ಕನ್ನಡ ಎಂ.ಎ. ಪದವಿಯನ್ನೂ, ಅನಂತರ ಬಿ.ಲಿಬ್.ಎಸ್‌ಸಿ. ಮತ್ತು ನವದೆಹಲಿಯ ರಾಷ್ಟ್ರೀಯ ಪತ್ರಾಗಾರದಿಂದ ಡಿಪ್. ಇನ್. ಆರ್ಕೈವ್ಸ್ ಅನ್ನೂ ಪಡೆದರು.

೧೯೫೬ರಲ್ಲಿ ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ ಪದವೀಧರ ಸಂಶೋಧಕರಾಗಿ ಸೇರಿ ಅಲ್ಲಿಯೆ ಸಹಾಯಕ ನಿರ್ದೇಶಕರಾದರು. ೧೯೬೮ರಿಂದ ಮಾನಸ ಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಹಾಯಕ ನಿರ್ದೇಶಕರು ಮತ್ತು ಉಪನಿರ್ದೇಶಕರಾಗಿದ್ದು ನಿವೃತ್ತರಾದರು.

ಹಸ್ತಪ್ರತಿಶಾಸ್ತ್ರದಲ್ಲಿ ತಜ್ಞರಾಗಿದ್ದು ದೇಶದ ವಿವಿಧೆಡೆಗಳಲ್ಲಿ ದೊರೆಯುವ ಹಸ್ತಪ್ರತಿಗಳ ಪರಿಶೀಲನೆ ಮಾಡಿ ಅನೇಕ ಅಪರೂಪದ ಕೃತಿಗಳನ್ನು ಹೊರತಂದಿದ್ದಾರೆ. ಸುಮಾರು ೭೦ಕ್ಕೂ ಹೆಚ್ಚು ಕೃತಿಗಳ ಸಂಪಾದಕರಾಗಿ, ಅನುವಾದಕರಾಗಿ, ರಚನಕಾರರಾಗಿ ಕೆಲಸ ಮಾಡಿರುವ ಇವರ ನೇಮಿಚಂದ್ರನ ನೇಮಿನಾಥ ಪುರಾಣ, ರನ್ನನ ಸಾಹಸಭೀಮವಿಜಯ ಮತ್ತು ಅಜಿತನಾಥಪುರಾಣ, ಲಕ್ಷ್ಮೀಶನ ಜೈಮಿನಿ ಭಾರತಗಳಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನಗಳೂ ನಾಗವರ್ಮನ ವರ್ಧಮಾನ ಪುರಾಣಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ, ತೀನಂಶ್ರೀ ಮತ್ತು ದೇವರಾಜ ಬಹದ್ದೂರ್‌ಬಹುಮಾನಗಳೂ, ಜೈಮಿನಿ ಭಾರತಕ್ಕೆ ತೀನಂಶ್ರೀ ಬಹುಮಾನವೂ, ಶಾಂತಿಕೀರ್ತಿ ಮುನಿಯ ಪಾರ್ಶ್ವನಾಥ ಚರಿತೆಗೆ 'ಸ್ವಸ್ತಿಶ್ರೀ ದೇವೇಂದ್ರ ಕೀರ್ತಿ ಪ್ರಶಸ್ತಿ'ಯೂ, ಆಯತವರ್ಮನ 'ರತ್ನಕರಂಡಕ' ಮತ್ತು 'ಪಂಪ ಮಹಾಕವಿ' ಗ್ರಂಥಗಳಿಗೆ 'ಶ್ರೀ ಪಿ. ಶಾಂತಿಲಾಲ್‌ಪ್ರಶಸ್ತಿ'ಯೂ ಲಭಿಸಿವೆ. ಶ್ರವಣಬೆಳಗೊಳದ ೧೯೯೮ರ ಪ್ರತಿಷ್ಠಿತ 'ಗೊಮ್ಮಟೇಶ ವಿದ್ಯಾಪೀಠ ಪ್ರಶಸ್ತಿ', ೧೯೯೯ರ 'ಶ್ರೀ ಚಾಮುಂಡರಾಯ ಪ್ರಶಸ್ತಿ' ಮತ್ತು ೨೦೦೫ರ 'ಶ್ರೀಯುತ ಸೇಡಿಯಾಪು ಕೃಷ್ಣಭಟ್ಟರ ಪ್ರಶಸ್ತಿ'ಯೂ ಇವರಿಗೆ ಸಂದಿವೆ.

ಬಾಹುಬಲಿ ಪ್ರಾಕೃತ ವಿದ್ಯಾಪೀಠ (ರಿ.)
ಶ್ರವಣಬೆಳಗೊಳ ೫೭೩ ೧೩೫